ಸಂಪುಟ: 05 ಸಂಚಿಕೆ: 36 ಪುಟಗಳು: 08 ಭಾನುವಾರ 20 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮನುಷ್ಯನಿಗೆ ಜೀವನದಲ್ಲಿ ಕಷ್ಟಗಳು ಬೇಕು ಏಕೆಂದರೆ ಅವು ಯಶಸ್ಸನ್ನು ಆನಂದಿಸಲು ಅವಶ್ಯಕ.

## ಕೇಂದ್ರ ಸಚಿವ ಕುಮಾರಸ್ವಾಮಿ ಆರೋಗ್ಯದಲ್ಲಿ ಚೇತರಿಕೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ಶ್ವಾಸಕೋಶ ಸೋಂಕಿನಿಂದ ಬಳಲುತ್ತಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಕೆಮ್ಮು ಕಡಿಮೆಯಾಗುತ್ತಿರಲಿಲ್ಲ. ಅನಾರೋಗ್ಯ ಕಾರಣ ಚಿಕಿತ್ಸೆ ಪಡೆದ ಹಿನ್ನಲೆ, ಚೇತರಿಕೆ ಕಂಡಿದ್ದು, ಜನಸೇವೆಗೆ ಮರಳಲಿದ್ದಾರೆ ಎಂದು ತಿಳಿದುಬಂದಿದೆ. ಆರೋಗ್ಯದಲ್ಲಿ ಚೇತರಿಕೆ ಕಂಡ ಹಿನ್ನಲೆ, ಕಾಂಕ್ಲೈವ್ ನಲ್ಲಿ ಭಾಗಿಯಾಗಲು ಕೇಂದ್ರ ಸಚಿವರು ಮುಂಬೈಗೆ ತೆರಳುತ್ತಿದ್ದಾರೆ ಎನ್ನಲಾಗಿದೆ. ಕೇಂದ್ರ ಸಚಿವ ಕುಮಾರಸ್ವಾಮಿ ಅವ್ರು, ಅನಾರೋಗ್ಯಕ್ಕೆ ತುತ್ತಾಗಿದ್ದು, ಕೆಲ ದಿನಗಳಿಂದ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುತ್ತಿದ್ದರು. ಈಗ ಆರೋಗ್ಯದಲ್ಲಿ ಚೇತರಿಕೆ ಕಂಡು ಮತ್ತೆ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಅನಾರೋಗ್ಯದಿಂದ ವಿಶ್ರಾಂತಿ ಪಡೆದ ದಿನಗಳಲ್ಲಿ ಒಂದೆರಡು ದಿನ ಕುಟುಂಬದ ಜೊತೆ ಕಾಲ ಕಳೆದಿದ್ದಾರೆ. ಇನ್ನೂ ಕೆಲವು ಮೂಲಗಳ ಪ್ರಕಾರ ಕಳೆದ 2–3 ತಿಂಗಳಿಂದ ಹೆಚ್‌ಡಿ ಕುಮಾರಸ್ವಾಮಿ ಶ್ವಾಸಕೋಶ ಸೋಂಕಿನಿಂದ ಬಳಲುತ್ತಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಕೆಮ್ಮು ಕಡಿಮೆಯಾಗುತ್ತಿರಲಿಲ್ಲ. ಈ ಹಿನ್ನಲೆ ವೈದ್ಯರ ಸಲಹೆಯಂತೆ ಚಿಕಿತ್ಸೆಗಾಗಿ ವಿದೇಶಕ್ಕೆ ತೆರಳುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ. ಅನಾರೋಗ್ಯದಿಂದ ಬಳಲುತ್ತಿದ್ದರು. ಬೆಲೆ ಏರಿಕೆ ವಿರುದ್ಧ ಜನರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಏ.12ರಂದು ಬೆಂಗಳೂರು ನಗರದಲ್ಲಿ ಕೇಂದ್ರಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

## ಖಾಲಿ ಗ್ಯಾಸ್ ಸಿಲಿಂಡರ್ ಎತ್ತೋಕೆ ನೀವೇ ಬೇಕಾ ಡಿಕೆಶಿಯವರೇ

• ಉದಯವಾಹಿನಿ, ಬೆಂಗಳೂರು

ಜಾತಿಗಣತಿ ವರದಿಯ ಅಂಕಿ ಅಂಶಗಳ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರ ಕೂಡಲೇ ಸರ್ವಪಕ್ಷ ಸಭೆ ಸಭೆ ಕರೆಯಬೇಕು ಎಂದು ಯುವ ಜನತಾದಳ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರು ಒತ್ತಾಯ ಮಾಡಿದರು. ಅಲ್ಲದೆ, ಎಲ್ಲಾ ಸಮುದಾಯಗಳ ಸ್ವಾಮೀಜಿಗಳು, ಮುಖಂಡರು, ಬುದ್ದಿಜೀವಿಗಳನ್ನು ಆಹ್ವಾನಿಸಿ ಸಮಾಲೋಚನೆ ನಡೆಸಬೇಕು ಹಾಗೂ ಇದಕ್ಕೆ ಸರ್ವಸಮ್ಮತ ಪರಿಹಾರ ಕಂಡುಕೊಳ್ಳಬೇಕು ಎಂದು ಅವರು ಸರ್ಕಾರವನ್ನು ಆಗ್ರಹಪಡಿಸಿದರು. ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಕರೆಯಲಾಗಿದ್ದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ನಿಖಿಲ್; ಗಣತಿಗೆ ಜೆಡಿಎಸ್ ಯಾವುದೇ ಕಾರಣಕ್ಕೂ ವಿರೋಧ ಮಾಡುತ್ತಿಲ್ಲ. ಆದರೆ, ಸಮೀಕ್ಷೆ ಕ್ರಮಬದ್ಧವಾಗಿ ಇಲ್ಲ. ಸೋರಿಕೆ ಆಗಿರುವ ಅಂಕಿ ಅಂಶಗಳ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆ ಮಾಡಿದ್ದೇವೆ ಹಾಗೂ ಆ ಅಂಕಿ ಅಂಶಗಳು ಸತ್ಯಕ್ಕೆ ದೂರವಾಗಿವೆ ಎಂದಷ್ಟೇ ಹೇಳಿದ್ದೇವೆ ಎಂದು ಹೇಳಿದರು. ಪೆನ್ನು ಪೇಪರ್ ಕೊಡಿ ಅಂತ ಕೇಳಿ, ಅಂಗಲಾಚಿ ಪಡೆಕೊಂಡರಲ್ಲ ಡಿಕೆಶಿ ಅವರೇ.. ಮೊನ್ನೆ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ಖಾಲಿ ಸಿಲಿಂಡರ್ ಎತ್ತಿಕೊಂಡು ಪೋಸ್ ಕೊಟ್ಟರಲ್ಲಾ.. ಖಾಲಿ ಗ್ಯಾಸ್ ಸಿಲಿಂಡರ್ ಎತ್ತೋಕೆ ನೀವೇ ಬೇಕಾ ಶಿವಕುಮಾರಣ್ಣ.. ಎಂದು ನಿಖಿಲ್ ಕುಮಾರಸ್ವಾಮಿ ಲೇವಡಿ ಮಾಡಿದರು. ಭಾರವನ್ನೆಲ್ಲಾ ಜನರ ಮೇಲೆ ಹಾಕಿ ನೀವು ಮಾತ್ರ ಖಾಲಿ ಸಿಲಿಂಡರ್ ಎತ್ತುತ್ತೀರಿ! ಅದಕ್ಕೆ ನೀವೇ ಬೇಕಾ ಎಂತಹ ನಾಟಕ, ಎಂತಹ ನಟನೆ! ನಿಮ್ಮಂತಹ ಡ್ರಾಮಾ ನೀವು. ಅದ್ಭುತ ನಟನೆ ಕಣ್ರಿ ನಿಮ್ದು. ಪರ್ಫಾರ್ಮೆನ್ಸ್ ಕಿಂಗ್ ಗಳು ಕಣ್ರೀ ನೀವೆಲ್ಲಾ ಎಂದು ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದರು.

## ರಾಹುಲ್ ಗಾಂಧಿಯಿಂದ ಇತಿಹಾಸ ಕಲಿಯಬೇಡಿ: ನೆಹರು ಬಗ್ಗೆಯೇ ತಪ್ಪು

• ಉದಯವಾಹಿನಿ, ನವದೆಹಲಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ನೀಡಿದ ಸಂದರ್ಶನದಲ್ಲಿ ನೆಹರು, ಮಹಾತ್ಮ ಗಾಂಧೀಜಿಯ ಬಗ್ಗೆ ಹಲವು ವಿಚಾರಗಳನ್ನು ಹಂಚಿಕೊಂಡಿದ್ದರು. ಆದರೆ, ಅವರ ಕುಟುಂಬ ಮತ್ತು ಬ್ರಿಟಿಷ್ ಆಡಳಿತದಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಇತಿಹಾಸವನ್ನು ವಿವರಿಸುವಲ್ಲಿನ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಬಿಜೆಪಿ ಸಂಸದ ಲಹರ್ ಸಿಂಗ್ ಸಿರೋಯಾ ಟೀಕಿಸಿದ್ದಾರೆ. 92 ಲಕ್ಷ ಚಂದಾದಾರರನ್ನು ಹೊಂದಿರುವ ರಾಹುಲ್ ಗಾಂಧಿ ಅವರ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಅವರು ಮಹಾತ್ಮ ಗಾಂಧಿ ಮತ್ತು ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಬಗ್ಗೆ ಮಾತನಾಡಿದ್ದಾರೆ ಮತ್ತು ರಾಜಕೀಯದಲ್ಲಿ ಅವರು ಕೈಗೊಂಡ ಪ್ರಯಾಣದ ಬಗ್ಗೆಯೂ ಈ ಸುದೀರ್ಘ ಸಂದರ್ಶನದಲ್ಲಿ ಮಾತನಾಡಿದ್ದಾರೆ. ವಸಾಹತುಶಾಹಿ ಶಕ್ತಿಯ ವಿರುದ್ಧ ಮಹಾತ್ಮ ಗಾಂಧಿಯವರ ಹೋರಾಟ ಹೇಗೆ ಪ್ರಾರಂಭವಾಯಿತು ಎಂಬುದನ್ನು ವಿವರಿಸಿರುವ ರಾಹುಲ್ ಗಾಂಧಿ ''ಮಹಾತ್ಮಾ ಗಾಂಧಿಯನ್ನು ಯುಕೆಯಲ್ಲಿ ರೈಲಿನಿಂದ ಹೊರಗೆಸೆಯಲಾಯಿತು. ಅದಾದ ನಂತರ ನನ್ನ ಮುತ್ತಜ್ಜ ನೆಹರು ಮತ್ತು ಅವರ ಕಸಿನ್‌ಗಳು ಸೇಡು ತೀರಿಸಿಕೊಂಡರು'' ಎಂದು ಹೇಳಿದ್ದಾರೆ. ಈ ಬಗ್ಗೆ ಬಿಜೆಪಿ ಸಂಸದ ಲಹರ್ ಸಿಂಗ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ''ಇಂಗ್ಲೆಂಡ್‌ನಲ್ಲಿ ಮಹಾತ್ಮಾ ಗಾಂಧಿಯನ್ನು ರೈಲಿನಿಂದ ಹೊರಗೆಸೆದ ಘಟನೆ ಎಂದಿಗೂ ಸಂಭವಿಸಿಯೇ ಇಲ್ಲ. ರಾಹುಲ್ ಗಾಂಧಿ ತಮ್ಮ ಮುತ್ತಜ್ಜ ಪಂಡಿತ್ ನೆಹರು ಬಗ್ಗೆ ಮಾತನಾಡುತ್ತಿದ್ದರಿಂದ ನಾನು ಈ ಸಂದರ್ಶನವನ್ನು ಕುತೂಹಲದಿಂದ ನೋಡಿದೆ. ಆದರೆ, ಅವರು (2 ನಿಮಿಷ 40 ಸೆಕೆಂಡುಗಳಲ್ಲಿ) ಇಂಗ್ಲೆಂಡ್‌ನಲ್ಲಿ ಮಹಾತ್ಮ ಗಾಂಧಿಯನ್ನು ರೈಲಿನಿಂದ ಹೊರಗೆಸೆಯಲಾಯಿತು ಎಂದು ಹೇಳಿದ್ದನ್ನು ಕೇಳಿದಾಗ ನನಗೆ ತುಂಬಾ ಆಘಾತವಾಯಿತು'' ಎಂದು ಸಿರೋಯಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



• ಇದೊಂದು ಸೌಜನ್ಯದ ಭೇಟಿ • ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ • ಡಿಕೆಶಿ ಭೇಟಿಯಾದ ದಾವಣಗೆರೆಯ ಇಬ್ಬರು ಪ್ರಭಾವೀ ಬಿಜೆಪಿ ನಾಯಕರು • ಕುತೂಹಲ ಮೂಡಿಸಿದ ರಾಜಕೀಯ

# ಶಿವನೇ ನಿನ್ನಾಟ ಬಲ್ಲೋರ್ಯಾರ್ಯಾರು



## ರಾಜಕೀಯ ಚರ್ಚೆ ಜೋರು...

### ಮಾತಿನಲ್ಲೇ ಕಾಲೆಳೆದ ಡಿಕೆಶಿ

2023ರ ಡಿಸೆಂಬರ್ ನಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬಿಜೆಪಿ ಶಾಸಕ ಬಿಪಿ ಹರೀಶ್ ಅವರಿಗೆ ಪಕ್ಷಾಂತರದ ಓಪನ್ ಆಫರ್ ಕೊಟ್ಟ ಘಟನೆ ನಡೆದಿತ್ತು. ಸೂಚನಾ ಕಲಾಪದ ವೇಳೆ ಹರಿಹರ ತಾಲ್ಲೂಕಿನ ಭೈರನಪಾದ ಏತ ನೀರಾವರಿ ಯೋಜನೆ ಬಗ್ಗೆ ಬಿ.ಪಿ.ಹರೀಶ್ ಸರ್ಕಾರದ ಗಮನ ಸೆಳೆದಿದ್ದರು. ಈ ವೇಳೆ ನಾನು ಮೂರು ಬಾರಿ ಗೆದ್ದಾಗಲೂ ವಿಪಕ್ಷದಲ್ಲೇ ಇದ್ದೆ. ಯೋಜನೆ ಕಾಮಗಾರಿ ಕೆಲಸ ಆಗುತ್ತಿಲ್ಲ ಎಂದು ಹರೀಶ್ ಹೇಳಿದರು. ಈ ವೇಳೆ ಮಧ್ಯಪ್ರವೇಶಿಸಿ ಮಾತನಾಡಿದ ಡಿಕೆ ಶಿವಕುಮಾರ್, ಮೂರು ಬಾರಿ ಶಾಸಕನಾದಾಗಲೂ ವಿಪಕ್ಷದಲ್ಲೇ ಇದ್ದೆ ಎನ್ನುತ್ತಿದ್ದೀಯಾ. ಇದಕ್ಕೆ ಪರಿಹಾರ ನೀನೇ ಕಂಡುಕೊಳ್ಳಬೇಕು. ಆಡಳಿತ ಪಕ್ಷದ ಕಡೆ ಬರುವ ಬಗ್ಗೆ ನಿನಗೆ ಬಿಟ್ಟಿದ್ದು ಎಂದು ಮಾತಿನಲ್ಲೇ ಕಾಲೆಳೆದರು. ಮಾತು ಮುಂದುವರಿಸಿದ ಡಿಕೆ ಶಿವಕುಮಾರ್, ಭದ್ರಾ ಮೇಲ್ದಂಡೆ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಿ ಕೇಂದ್ರ ಸರ್ಕಾರ ಹಣ ಮೀಸಲಿಡದೇ ಇರುವ ಹಿನ್ನೆಲೆ ಪ್ರಧಾನಿ ಭೇಟಿಗೆ ಅವಕಾಶ ಕೋರಿ ಪತ್ರ ಬರೆದಿದ್ದೇನೆ. ಅವಕಾಶ ಸಿಕ್ಕಿದರೆ ದೆಹಲಿಗೆ ನಿಯೋಗ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತೇನೆ ಎಂದರು.

**1** ಬಸನಗೌಡ ಪಾಟೀಲ್ ಯತ್ನಾಳ್ ಬಣದಲ್ಲಿ ಗುರುತಿಸಿಕೊಂಡಿದ್ದ ಸಿದ್ದೇಶರ ಮತ್ತು ಬಿ.ಪಿ.ಹರೀಶ್

**2** ಮಾಜಿ ಸಚಿವ ಮತ್ತು ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಶಾಸಕ ಬಿಪಿ ಹರೀಶ್

**3** ಭಿನ್ನಮತೀಯ ಕ್ಯಾಂಪಿನಲ್ಲಿ ಇರುವ ನಾಯಕರು, ಕಾಂಗ್ರೆಸ್ ಕದ ತಟ್ಟುವಲ್ಲಿ ಮೊದಲ ಹೆಜ್ಜೆ..

### ಡಿಕೆಶಿಯೊಂದಿಗೆ ಬಿಜೆಪಿ ನಾಯಕರ ಚರ್ಚೆ

ಬಿಜೆಪಿಯ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ಬಿಜೆಪಿ ರಾಜ್ಯಾಧ್ಯಕ್ಷರೂ ಆಗಿರುವ ಬಿ.ವೈ.ವಿಜಯೇಂದ್ರ ಅವರ ಸಹೋದರರಾಗಿರುವ ರಾಘವೇಂದ್ರ ಅವರು ಡಿ.ಕೆ.ಶಿವಕುಮಾರ್ ಮನೆಗೆ ಭೇಟಿ ನೀಡಿದ್ದು ಮಹತ್ವ ಪಡೆದು ಕೊಂಡಿತ್ತು.



• ಉದಯವಾಹಿನಿ, ಬೆಂಗಳೂರು

ಬಿಜೆಪಿಯ ಬಹುತೇಕ ಎಲ್ಲಾ ನಾಯಕರು ಒಗ್ಗಟ್ಟಾಗಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆಯನ್ನು ನಡೆಸುತ್ತಿದ್ದಾರೆ. ಇನ್ನೊಂದು ಕಡೆ, ಬಿಜೆಪಿಯ ಇನ್ನೊಂದು ಬಣದ ಚಟುವಟಿಕೆಯು ಸೈಲೆಂಟಾಗಿ ಸದ್ದು ಮಾಡುತ್ತಿದೆ. ಇದರ ಭಾಗ ಎನ್ನುವಂತೆ ಇಬ್ಬರು ಬಿಜೆಪಿ ನಾಯಕರು, ಡಿಸಿಎಂ ಭೇಟಿಯಾಗಿದ್ದಾರೆ. ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ ನಂತರ, ಭಿನ್ನಮತೀಯ ಚಟುವಟಿಕೆಗಳು ತಣ್ಣಗಾಗಿತ್ತು. ಯತ್ನಾಳ್ ಅವರನ್ನು ಮತ್ತೆ ಬಿಜೆಪಿಗೆ ಕರೆತರಲು ಪ್ರಯತ್ನಿಸುವುದಾಗಿ ಈ ನಾಯಕರು ಹೇಳಿಕೆಯನ್ನು ನೀಡಿದ್ದರು. ಆದರೆ, ಯಾಕೋ ಯತ್ನಾಳ್ ಏಕಾಂಗಿಯಾಗುತ್ತಿದ್ದಾರೆ ಎನ್ನುವ ಸನ್ನಿವೇಶ ಸಾರ್ವಜನಿಕರಲ್ಲಿ ಭಾಸವಾಗುತ್ತಿತ್ತು. ಈಗ, ದಾವಣಗೆರೆ ರಾಜಕೀಯದ ಇಬ್ಬರು ಪ್ರಭಾವೀ ನಾಯಕರಾದ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಮತ್ತು ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್, ಬೆಂಗಳೂರಿನ ಸದಾಶಿವನಗರದ ಮನೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ.

ಬಿಜೆಪಿ ಮುಖಂಡರಾದ ಕೇಂದ್ರದ ಮಾಜಿ ಸಚಿವ ಮತ್ತು ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಶಾಸಕ ಬಿ ಪಿ ಹರೀಶ್ ಅವರು ಡಿಸಿಎಂ ಡಿಕೆಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿಯಾಗಿ ಸಮಾಲೋಚನೆ ನಡೆಸಿದರು ಎಂದು ಖುದ್ದು, ಡಿಕೆಶಿಯವರೇ ಫೋಟೋ ಶೇರ್ ಮಾಡಿಕೊಂಡಿದ್ದಾರೆ. ಫೋಟೋ ಶೇರ್ ಮಾಡಿಕೊಂಡ ಡಿ.ಕೆ.ಶಿವಕುಮಾರ್ ಅವರು ಇದೊಂದು ಸೌಜನ್ಯದ ಭೇಟಿ ಎಂದು ಹೇಳದೇ ಇರುವುದು ಕುತೂಹಲಕ್ಕೆ ಕಾರಣವಾಗಿದೆ. ಸಾಮಾನ್ಯವಾಗಿ, ಏನೇ ರಾಜಕೀಯ ಚಟುವಟಿಕೆ ನಡೆದರೂ, ಇದೊಂದು ಸೌಜನ್ಯದ ಭೇಟಿ ಎಂದು ಹೇಳುವುದು ರಾಜಕೀಯದ ಕಟ್ಟುಪಾಡುಗಳಲ್ಲಿ ಒಂದು. ಬಸನಗೌಡ ಪಾಟೀಲ್ ಯತ್ನಾಳ್ ಬಣದಲ್ಲಿ ಗುರುತಿಸಿಕೊಂಡಿದ್ದ ಸಿದ್ದೇಶರ ಮತ್ತು ಬಿ.ಪಿ.ಹರೀಶ್, ಯಡಿಯೂರಪ್ಪ ಕುಟುಂಬದ ಕಡು ವಿರೋಧಿಗಳಾಗಿ ಗುರುತಿಸಿಕೊಂಡವರು. ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆ ಸೋಲಲು, ಯಡಿಯೂರಪ್ಪನವರ ಹೊಂದಾಣಿಕೆ ರಾಜಕೀಯವೇ ಕಾರಣ ಎಂದು ಇಬ್ಬರು ನಾಯಕರು ನೇರವಾಗಿ ಆರೋಪಿಸಿದ್ದರು. ಈಗ, ಇಬ್ಬರು ನಾಯಕರು ಡಿಕೆಶಿ ಭೇಟಿಯಾಗಿರುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಒಂದು ಕಡೆ, ಜಾತಿಗಣತಿ ವರದಿಯ ಸುತ್ತ ಸಿಕ್ಕಾಪಟ್ಟೆ ರಾಜಕೀಯ ನಡೆಯುತ್ತಿರುವ ಸಂದರ್ಭದಲ್ಲಿ ಲಿಂಗಾಯತ ಸಮುದಾಯದ ಈ ಇಬ್ಬರು ನಾಯಕರು ಡಿಸಿಎಂ ಭೇಟಿಯಾಗಿರುವುದಕ್ಕೂ ಒಂದಕ್ಕೊಂದು ಸಂಬಂಧ ಇದೆಯಾ ಎನ್ನುವ ಪ್ರಶ್ನೆ ಎದುರಾಗಿದೆ. ಇನ್ನೊಂದು ಕಡೆ, ಯತ್ನಾಳ್ ಸೇರಿ ಭಿನ್ನಮತೀಯ ಕ್ಯಾಂಪಿನಲ್ಲಿ ಇರುವ ನಾಯಕರು, ಕಾಂಗ್ರೆಸ್ ಕದ ತಟ್ಟುವಲ್ಲಿ ಮೊದಲ ಹೆಜ್ಜೆ ಈ ಭೇಟಿಯಾಗಿದೆಯಾ ಎನ್ನುವ ಪ್ರಶ್ನೆಯೂ ಎದುರಾಗಿದೆ. ಯಾಕೆಂದರೆ, ಯತ್ನಾಳ್, ಕಾಂಗ್ರೆಸ್ಸಿಗೆ ಬಂದರೆ ಅವರನ್ನು ಸ್ವಾಗತಿಸುತ್ತೇವೆ ಎಂದು ಹಲವು ಕಾಂಗ್ರೆಸ್ ನಾಯಕರು ಹೇಳಿಕೆಯನ್ನು ನೀಡಿದ್ದರು. ಯತ್ನಾಳ್ ಅವರ ಉಚ್ಚಾಟನೆಯ ನಂತರ ಭಿನ್ನಮತೀಯ ಬಣದ ಸ್ವರವೂ ಅಡಗುತ್ತಿದೆ. ಇನ್ನೊಂದು ಕಡೆ, ಬಿಜೆಪಿಯಲ್ಲೂ ಮೂಲೆಗುಂಪು ಆಗುವತ್ತ ಸಾಗುತ್ತಿದ್ದಾರೆ. ಮತ್ತೊಂದು ಕಡೆ, ತಟಸ್ಥ ಬಣದಲ್ಲಿ ಗುರುತಿಸಿಕೊಂಡಿರುವವರ ವಿಶ್ವಾಸವನ್ನು ಗಳಿಸುವತ್ತ ಬಿ.ವೈ.ವಿಜಯೇಂದ್ರ ಮುಂದಾಗುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ, ಜಿ.ಎಂ.ಸಿದ್ದೇಶ್ವರ ಮತ್ತು ಬಿ.ಪಿ.ಹರೀಶ್ ಅವರು, ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ದಾವಣಗೆರೆಯಲ್ಲಿ ಸಿದ್ದೇಶ್ವರ ಅವರ ಆಪ್ತ ಗುತ್ತಿಗೆದಾರರೊಬ್ಬರ ಪೂರ್ಣಗೊಳಿಸಿರುವ ಕಾಮಗಾರಿಯ ಬಿಲ್ ತುಂಬಾ ದಿನಗಳಿಂದ ಬಾಕಿ ಉಳಿದಿರುವ ಹಿನ್ನಲೆಯಲ್ಲಿ, ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದರು ಎಂದು ಹೇಳಲಾಗುತ್ತಿದೆ.



### ಪಕ್ಷ ಬೇಧ ಮರೆತು ಭೇಟಿ

ನಿನ್ನೆ ಬಿಜೆಪಿಯ ಶಾಸಕ ಬಿ.ಪಿ.ಹರೀಶ್ ಹಾಗೂ ದಾವಣಗೆರೆಯ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್ ಡಿ.ಕೆ. ಶಿವಕುಮಾರ್ ಅವರ ಮನೆಗೆ ಭೇಟಿ ನೀಡಿ ರಹಸ್ಯ ಚರ್ಚೆ ನಡೆಸಿದ್ದರು. ಅದರ ಬೆನ್ನಲ್ಲೇ ರಾಘವೇಂದ್ರ ಭೇಟಿ ಮಹತ್ವ ಪಡೆದುಕೊಂಡಿತ್ತು. ಈ ಕುರಿತು ಸ್ಪಷ್ಟನೆ ನೀಡಿರುವ ರಾಘವೇಂದ್ರ, ಮಗನ ಮದುವೆ ಇದೆ. ಅದಕ್ಕೆ ಆಮಂತ್ರಣ ನೀಡಲು ಬಂದಿದ್ದೆ. ಜೊತೆಗೆ ಕ್ಷೇತ್ರದ ಅಭಿವೃದ್ಧಿ ವಿಚಾರ ಕುರಿತು ಚರ್ಚೆ ಮಾಡಿದ್ದೇನೆ. ಭೇಟಿಗೆ ಉಪಮುಖ್ಯಮಂತ್ರಿಯವರು ಸಮಯ ನೀಡಿದ್ದರು, ಅದರಂತೆ ಭೇಟಿ ಮಾಡಿದ್ದೇನೆ. ಮದುವೆಗೆ ಬರುವುದಾಗಿ ಭರವಸೆ ನೀಡಿದ್ದಾರೆ ಎಂದರು. ವೈಯಕ್ತಿಕ ವಿಚಾರಕ್ಕೆ ಮಾತ್ರ ನಾನು ಭೇಟಿ ಮಾಡಿದ್ದೇನೆ. ಅದನ್ನು ಹೊರತು ಪಡಿಸಿ ಬೇರೆ ಏನು ಇಲ್ಲ. ಅಧಿಕಾರದಲ್ಲಿದ್ದಾಗ, ಸರ್ಕಾರ ಇದ್ದಾಗ ಪಕ್ಷ ಬೇಧ ಮರೆತು ಭೇಟಿ ಮಾಡುವುದು ಸಾಮಾನ್ಯ, ಅದರಂತೆ ಬಿಜೆಪಿಯ ಶಾಸಕ ಬಿ.ಪಿ.ಹರೀಶ್ ಹಾಗೂ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್ ಭೇಟಿ ಮಾಡಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವ ನೀಡಬೇಕಿಲ್ಲ ಎಂದರು.

### ಡಿಕೆಶಿ ಭೇಟಿಯಾದ ಬಿಪಿ ಹರೀಶ್, ಸಿದ್ದೇಶ್

ಬಿವೈ ವಿಜಯೇಂದ್ರ ಹಾಗೂ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ಯತ್ನಾಳ್ ಅವರನ್ನು ಇತ್ತೀಚೆಗೆ ಬಿಜೆಪಿ ಹೈಕಮಾಂಡ್ ಪಕ್ಷದಿಂದ ಉಚ್ಚಾಟನೆ ಮಾಡಿ ಆದೇಶಿಸಿದೆ. ಇದರ ಬೆನ್ನಲ್ಲೇ ಯತ್ನಾಳ್ ಕಾಂಗ್ರೆಸ್ ಸೇರುವ ಕುರಿತು ಹಾಗೂ ಹೊಸ ಪಕ್ಷ ಕಟ್ಟುವ ಕುರಿತು ಹೇಳಿಕೆಗಳು ಬಂದಿದ್ದವು. ಸದ್ಯ, ಅವರ ಜೊತೆ ಸ್ಟ್ರಾಂಗ್ ಆಗಿ ಗುರುತಿಸಿಕೊಂಡಿದ್ದ ದಾವಣಗೆರೆ ಭಾಗದ ನಾಯಕರುಗಳಾದ ಮಾಜಿ ಕೇಂದ್ರ ಸಚಿವ ಜಿಎಂ ಸಿದ್ದೇಶ್ವರ್ ಹಾಗೂ ಬಿಪಿ ಹರೀಶ್ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿರುವುದು ಸಾಕಷ್ಟು ಚರ್ಚೆಗೆ ಎಡೆಮಾಡಿಕೊಟ್ಟಿದೆ.



## ಪಶುಸಂಗೋಪನೆ ಮೀನುಗಾರಿಕೆ ಇಲಾಖೆಯ ದಿನಗೂಲಿ ನೌಕರರಿಗೆ ಪಿಂಚಣಿ ನೀಡಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರದ ಪಶುಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಮೂರು ದಶಕಗಳವರೆಗೆ ಸೇವೆ ಸಲ್ಲಿಸಿರುವವರಿಗೆ ಪಿಂಚಣಿಯನ್ನು ನೀಡುವಂತೆ ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಅಲ್ಲದೆ ಮೂರು ತಿಂಗಳೊಳಗೆ ಪಿಂಚಣಿಯನ್ನು ನಿಗದಿಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಹೈಕೋರ್ಟ್‌ನ ಈ ಆದೇಶ, ಈ ಎರಡೂ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿದವರಿಗೆ ಪಿಂಚಣಿಯಲ್ಲಿ ಏನಾದರೂ ತಾರತಮ್ಯವಾಗಿದ್ದರೆ ಅಂಥ ತಾರತಮ್ಯಗಳನ್ನು ಸರಿಪಡಿಸಬೇಕು ಎಂದೂ ಅದು ಆದೇಶಿಸಿದೆ.

ಸುಮಾರು ಮೂರು ದಶಕಗಳವರೆಗೆ ಈ ಎರಡೂ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದ 14 ಮಂದಿಗೆ ಪಿಂಚಣಿ ನೀಡಬೇಕು ಎಂದು ಕರ್ನಾಟಕ ಆಡಳಿತಾತ್ಮಕ



ನ್ಯಾಯಾಧೀಕರಣ (ಕೆಎಟಿ) ಆದೇಶ ಹೊರಡಿಸಿತ್ತು. ಇದನ್ನು ರದ್ದು ಮಾಡಬೇಕೆಂದು ಕೋರಿ ರಾಜ್ಯ ಪಶುಸಂಗೋಪನಾ ಇಲಾಖೆ ಹಾಗೂ ಮೀನುಗಾರಿಕೆ ಇಲಾಖೆಯ ಆಯುಕ್ತರು ಕರ್ನಾಟಕ ಹೈಕೋರ್ಟ್ ನಲ್ಲಿ ಮನವಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಕೃಷ್ಣ ಎಸ್ ದೀಕ್ಷಿತ್ ಹಾಗೂ ರಾಮಚಂದ್ರ ಹುದ್ದಾರ್

**ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ**

**ಕೋರ್ಟ್ ಹೇಳಿದ್ದೇನು**

ಅರ್ಜಿದಾರ ಕಾಳಪ್ಪ ಹಾಗೂ ಇನ್ನಿತರ 13 ಮಂದಿಯು ಪಶುಸಂಗೋಪನಾ ಇಲಾಖೆಯಲ್ಲಿ ಸುಮಾರು 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆದರೆ, ಅವರಿಗೆ ಪಿಂಚಣಿ ನೀಡಲು ರಾಜ್ಯ ಸರ್ಕಾರ ನಿರಾಕರಿಸಿದೆ. ಆದರೆ, ಇವರಂತೆಯೇ ಸೇವೆ ಸಲ್ಲಿಸಿರುವ ಇತರ ದಿನಗೂಲಿ ನೌಕರರಿಗೆ ಪಿಂಚಣಿಯನ್ನು ಮಂಜೂರು ಮಾಡಲಾಗಿದೆ. ಇದು ಸಂವಿಧಾನದ 14 (ಸಮಾನತೆ) ಮತ್ತು 16ನೇ ಪರಿಚ್ಛೇದ (ಸಾರ್ವಜನಿಕ ಉದ್ಯೋಗದಲ್ಲಿ ಸಮಾನಾವಕಾಶ) ನೀಡಿರುವ ಹಕ್ಕನ್ನು ಉಲ್ಲಂಘಿಸಿದಂತಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಅವರ ನೇತೃತ್ವದ ವಿಭಾಗೀಯ ಪೀಠವು ಆಯುಕ್ತರ ಅರ್ಜಿಯನ್ನು ವಜಾಗೊಳಿಸಿದೆ.

ಪಿಂಚಣಿ ನೀಡಬೇಕೆಂದು ಆಗ್ರಹಿಸಿ ನ್ಯಾಯಾಲಯದ ಮೊರೆ ಹೋಗಿದ್ದವರಲ್ಲಿ ಕಾಳಪ್ಪ ಎಂಬುವರು ಪ್ರಮುಖರು. ಇವರು ಹಾಗೂ ಇವರೊಂದಿಗೆ 13 ಮಂದಿ, ಪಶುಸಂಗೋಪನಾ ಇಲಾಖೆಯಲ್ಲಿ ಸುಮಾರು 30 ವರ್ಷಗಳ ಕಾಲ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿದ್ದರು. ಆದರೆ, ಅವರಿಗೆ ಪಿಂಚಣಿ ನೀಡಲು ಇಲಾಖೆ ನಿರಾಕರಿಸಿತ್ತು ಹಾಗಾಗಿ ಅವರೆಲ್ಲರೂ ಮೊದಲು ಕೆಎಟಿ ಮೊರೆ ಹೋಗಿದ್ದರು.

ಅಲ್ಲಿ ಅವರಿಗೆ ಜಯ ಸಿಕ್ಕಿತ್ತು. ಆದರೆ, ಅಲ್ಲಿ ಬಂದ ಆದೇಶವನ್ನು ಹೈಕೋರ್ಟ್ ನಲ್ಲಿ ಇಲಾಖೆಯ ಆಯುಕ್ತರು ಪ್ರಶ್ನೆ ಮಾಡಿದ್ದರು. ಇದೀಗ ನೌಕರರಿಗೆ ಅಲ್ಲಿಯೂ ಜಯ ಸಿಕ್ಕಂತಾಗಿದೆ.

ಸರ್ಕಾರದ ಇತರೆ ನೌಕರರಂತೆ ಕಾಳಪ್ಪ ಹಾಗೂ ಅವರೊಂದಿಗಿನ 13 ದಿನಗೂಲಿ ನೌಕರರನ್ನು ಪರಿಗಣಿಸಬೇಕಿದೆ. ಅಅವರಿಗೆ ಮೂರು ತಿಂಗಳಲ್ಲಿ ಪಿಂಚಣಿ ನೀಡಬೇಕಿದೆ ಹಾಗೂ ಅವರ ಹಿಂಬಾಕಿಯನ್ನೂ ಪಾವತಿಸಬೇಕು ಎಂದು ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ.

ಅಲ್ಲದೆ, ಕಾಳಪ್ಪ ಹಾಗೂ ಅವರ ಸಹ ನೌಕರರ ವಿಚಾರದಲ್ಲಿ ಆದಂತೆ ಯಾರಿಗೂ ಆಗಬಾರದು. ಇವರ ಉದ್ಯೋಗದಂತೆಯೇ ಸೇವೆಗೆ ನಿಯೋಜಿಸಲಾಗಿರುವ ಇತರ ದಿನಗೂಲಿ ನೌಕರರಿಗೂ ಪಿಂಚಿಣಿ ಸೌಲಭ್ಯ ಕೈತಪ್ಪದಂತೆ ನೋಡಿಕೊಳ್ಳಬೇಕು ಎಂದು ನಿರ್ದೇಶಿಸಿದ್ದಾರೆ. ಅಲ್ಲದೆ, ಈಗ ತಾನು (ಹೈಕೋರ್ಟ್) ನೀಡುತ್ತಿರುವ ಆದೇಶದ ಪಾಲನಾ ವರದಿಯನ್ನು ಸಹ ಹೈಕೋರ್ಟ್‌ಗೆ ಸಲ್ಲಿಸಬೇಕು ಎಂದು ನ್ಯಾಯಪೀಠ ಹೇಳಿದೆ.

## ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ಮಧ್ಯರಾತ್ರಿ ಗುಂಡಿನ ದಾಳಿ

■ ಮುತ್ತಪ್ಪ ರೈ ಮಗನ ಮೇಲಿನ ಡೆಡ್ಲಿ ಅಟ್ಯಾಕ್‌ಗೆ ಆಸ್ತಿ ವಿವಾದ ಕಾರಣ ದಾಳಿ ನಡೆಸಿದವರು ಯಾರು ■ ಗುಂಡಿನ ದಾಳಿಯಿಂದ ಬಚಾವ್ ಆಗಿದ್ದೇ ರೋಚಕ

• ಉದಯವಾಹಿನಿ, ಕಲಬುರಗಿ

ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರಾಯ್ ರೈ ಮೇಲೆ ಮಾರಣಾಂತಿಕ ದಾಳಿ ನಡೆದಿದೆ. ಬಿಡದಿಯ ಅವರ ನಿವಾಸದ ಮುಂದೆ ಮಧ್ಯರಾತ್ರಿ ಸುಮಾರು 1:30ರ ಸುಮಾರಿಗೆ ರಿಕ್ಕಿ ರೈ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿರುವ ರಿಕ್ಕಿ ರೈ ಅವರನ್ನು ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ಇನ್ನು, ರಿಕ್ಕಿ ರೈ ಅವರ ಮೇಲೆ ಮಾರಣಾಂತಿಕ ದಾಳಿ ನಡೆಯಲು ಆಸ್ತಿ ವಿವಾದವೇ ಕಾರಣ ಎಂಬ ಮಾತುಗಳು ಇದೀಗ ಕೇಳಿಬರುತ್ತಿವೆ. ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ರಿಕ್ಕಿ ರೈ ವಿರುದ್ಧ ಕೆಲವರು ಕತ್ತಿ ಮಸೆಯುತ್ತಿದ್ದರು ಎಂಬುದು ಅವರೆ ವಕೀಲ ನಾರಾಯಣಸ್ವಾಮಿ ಅವರ ಹೇಳಿಕೆಯಿಂದ ದೃಢಪಟ್ಟಿದೆ.

ರಿಕ್ಕಿ ರೈ ಮೇಲಿನ ಮಾರಣಾಂತಿಕ ದಾಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ವಕೀಲ

**ಅಟ್ಯಾಕ್ ಶೂಟೌಟ್ ಹಿಂದೆ ಲೇಡಿ**



ನಾರಾಯಣಸ್ವಾಮಿ, ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳು ಇದ್ದವು. ಅದೇ ರೀತಿ ಅನ್ಯ ಪ್ರಕರಣಗಳ ವಿಚಾರಣೆಯೂ ನಡೆಯುತ್ತಿದ್ದು, ಇಂತದ್ದೇ ಕಾರಣಕ್ಕೆ ರಿಕ್ಕಿ ರೈ ಮೇಲೆ ಗುಂಡಿನ ದಾಳಿ ನಡೆದಿದೆ ಎಂಬುದುನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಿಕ್ಕಿ ರೈ ಮೇಲಿನ ಪ್ರಕರಣಗಳನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ಆದರೆ ಇಂತದ್ದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಮೇಲೆ ಗುಂಡಿನ ದಾಳಿ ನಡೆದಿದೆ ಎಂದು ಹೇಳುವುದು ಕಷ್ಟ ಎಂದು ವಕೀಲ ನಾರಾಯಣಸ್ವಾಮಿ ಹೇಳಿದ್ದಾರೆ. ಸಾಮಾನ್ಯವಾಗಿ ರಿಕ್ಕಿ ರೈ ಅವರೇ ತಮ್ಮ ಫಾರ್ಚೂನರ್ ಕಾರನ್ನು ಡ್ರೈವ್ ಮಾಡುತ್ತಾರೆ. ಆದರೆ ನಿನ್ನೆ ರಾತ್ರಿ ಮಾತ್ರ ಅವರ ಕಾರು ಚಾಲಕನಿಗೆ ಡ್ರೈವ್ ಮಾಡಲು ಹೇಳಿ, ಅವರು ಹಿಂಬದಿ ಸೀಟಿನಲ್ಲಿ ಕುಳಿತುಕೊಂಡಿದ್ದರು. ಇದು ಅವರು ಗಂಭೀರವಾಗಿ ಗಾಯಗೊಳ್ಳದಿರಲು ಪ್ರಮುಖ ಕಾರಣ ಎಂದು ಮೂಲಗಳು ತಿಳಿಸಿವೆ. ಒಟ್ಟಿನಲ್ಲಿ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ನಡೆದಿರುವ ಗುಂಡಿನ ದಾಳಿ, ರಾಮನಗರ ಜಿಲ್ಲೆಯಲ್ಲಿ ಸದ್ದು ಮಾಡುತ್ತಿದೆ. ಗುಂಡಿನ ದಾಳಿ ನಡೆಸಿದವರು ರಿಕ್ಕಿ ರೈ ಅವರೊಂದಿಗೆ ಆಸ್ತಿ ವಿವಾದ ಹೊಂದಿದ್ದರು ಎಂಬ ಮಾತುಗಳು ಕೇಳಿಬರುತ್ತಿವೆ.

### ರಿಕ್ಕಿ ರೈ ಅವರಿಗೆ ಕಿವಿ ಮತ್ತು ಕೈ ಭಾಗದಲ್ಲಿ ಗಾಯ

ಮಾಜಿ ಭೂಗತ ದೊರೆ ಮತ್ತು ಜಯ ಕರ್ನಾಟಕ ಸಂಘಟನೆ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಮುತ್ತಪ್ಪ ರೈ ಅವರ ಪುತ್ರ ರಿಕ್ಕಿ ರೈ ಅವರ ಮೇಲೆ, ರಾಮನಗರ ಜಿಲ್ಲೆಯ ಬಿಡದಿ ಬಳಿಯ ಅವರ ನಿವಾಸದ ಮುಂದೆ, ಮಧ್ಯರಾತ್ರಿ 1:30ರ ಸುಮಾರಿಗೆ ಗುಂಡಿನ ದಾಳಿ ನಡೆದಿತ್ತು. ಬಿಡದಿಯಿಂದ ಬೆಂಗಳೂರಿಗೆ ಹೊರಟಿದ್ದ ರಿಕ್ಕಿ ರೈ ಅವರ ಕಾರನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು, ಅವರ ಮೇಲೆ ಮೂರು ಸುತ್ತು ಗುಂಡು ಹಾರಿಸಿ ಪರಾರಿಯಾಗಿದ್ದರು. ದಾಳಿಯ ವೇಳೆ ರಿಕ್ಕಿ ರೈ ಕಾರು ಚಾಲಕ ಮತ್ತು ಅವರ ಗನ್‌ಮ್ಯಾನ್ ಉಪಸ್ಥಿತರಿದ್ದು, ಗುಂಡೇಟಿನಿಂದ ಗಾಯಗೊಂಡ ರಿಕ್ಕಿ ರೈ ಅವರನ್ನು ಅದೇ ಕಾರಿನಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಿಕ್ಕಿ ರೈ ಅವರಿಗೆ ಕಿವಿ ಮತ್ತು ಕೈ ಭಾಗದಲ್ಲಿ ಗಾಯಗಳಾಗಿದ್ದು, ಯಾವುದೇ ಪ್ರಾಣಾಪಾಯವಿಲ್ಲ ಎಂದು ವೈದ್ಯರು ಸ್ಪಷ್ಟಪಡಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.99 ₹/L ಬಂಗಾರ: ₹9,758/Gram24ct ₹8,945/Gram22ct ಬೆಳ್ಳಿ: ₹100.00/Gram

### ಬ್ರಾಹ್ಮಣರು ಮೇಲೆ ನಿಂದನೆ, ಹೀಯಾಳಿಸುವುದು, ಅಪಮಾನ ಸಹಿಸುವುದಿಲ್ಲ ರಾಜ್ಯಾದ್ಯಂತ ಹೋರಾಟ:ಎಸ್.ರಘುನಾಥ್

# ಇಂತಹ ಕಹಿ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು

• ಉದಯವಾಹಿನಿ, ಬೆಂಗಳೂರು

ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆದು ಪರೀಕ್ಷೆ ಬರೆಯುವಂತೆ ವಿದ್ಯಾರ್ಥಿಗೆ ಹೇಳಿದರು ಇಂತಹ ಕಹಿ ಘಟನೆಗಳು ವಿಪ್ರ ಸಮುದಾಯಕ್ಕೆ ಅಪಮಾನ ಮಾಡಿರುವ ಖಂಡನೆ ವ್ಯಕ್ತಪಡಿಸಿ ಕುರಿತು ಮಾಧ್ಯಮಗೋಷ್ಠಿ ಏರ್ಪಡಿಸಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್.ರಘುನಾಥ್ ರವರು, ಹಿರಿಯ ಉಪಾಧ್ಯಕ್ಷರಾದ ಆರ್.ಲಕ್ಷ್ಮಿ ಕಾಂತ್‌ರವರು ಭಾಗವಹಿಸಿದ್ದರು. ವಿಪ್ರ ಮುಖಂಡರುಗಳಾದ ರವಿಶಂಕರ, ಶಂಕರನಾರಾಯಣ್ ಶಾಸ್ತ್ರಿ, ಶ್ರೀನಿವಾಸಮೂರ್ತಿ ಜೋಯಿಸ್‌ರವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಧ್ಯಕ್ಷರಾದ ಎಸ್.ರಘುನಾಥ್‌ರವರು ಮಾತನಾಡಿ ಬ್ರಾಹ್ಮಣ ಸಮಾಜವನ್ನು ಹೀಯಾಳಿಸುವುದು,


ಉದಯವಾಹಿನಿ ಚಿತ್ರ

ನಿಂದಿಸುವುದು, ಅಪಹಾಸ್ಯಕ್ಕೆ ಒಳಪಡಿಸುವುದು, ಬ್ರಾಹ್ಮಣರ ಮೇಲೆ ದೌರ್ಜನ್ಯವೆಸುಗುವುದು ಸಾಮಾನ್ಯವಾಗಿದೆ, ಬ್ರಾಹ್ಮಣರು ಅಲ್ಪಸಂಖ್ಯಾತರಾಗಿದ್ದಾರೆ. ಇಂತಹ ಕಹಿ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳ ಬೇಕು ಎಂದು ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರಿಗೆ ಮನವಿ ಮಾಡಲಾಗಿದೆ. ಶಿಕ್ಷಣ ಸಚಿವರು ವಿದ್ಯಾರ್ಥಿ ಪರೀಕ್ಷೆ ಬರೆಯಲು ಅವಕಾಶ ನೀಡುತ್ತೇವೆ ಎಂದು ಹೇಳಿದ್ದಾರೆ.

**ಪೂರ್ವನಿಯೋಜಿತ ಸಂಚು**

**ಆರ್.ಲಕ್ಷ್ಮಿಕಾಂತ್ ಯಾರು ಏನು ಬೇಕಾದರು ಬ್ರಾಹ್ಮಣರ ಮೇಲೆ ದಬ್ಬಾಳಿಕೆ ಮಾಡಬಹುದು ಎಂದು ತಿಳಿದಿದ್ದಾರೆ, ಜನಿವಾರ ವಿವಾದ ಇಡಿ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಪರೀಕ್ಷೆ ಬರೆಯಲು ಲಕ್ಷಾಂತರ ವಿದ್ಯಾರ್ಥಿಗಳು ಬರುತ್ತಾರೆ, ಅದರಲ್ಲಿ ಬ್ರಾಹ್ಮಣ ವಿದ್ಯಾರ್ಥಿಗೆ ಈ ಪರೀಕ್ಷೆ ಮಾಡಬೇಕು ಎಂದರೆ ಪೂರ್ವನಿಯೋಜಿತ ಸಂಚು ಎಂದು ಕಾಣುತ್ತದೆ. ಸಂವಿಧಾನದಲ್ಲಿ ಬ್ರಾಹ್ಮಣರಿಗೆ ಬದುಕಲು ಅವಕಾಶ ನೀಡಿದೆ.**

**ಬ್ರಾಹ್ಮಣರಿಗೆ ಅಪಮಾನ, ತೇಜೋವಧೆ ಮಾಡಿದರೆ ಉಗ್ರ ಪ್ರತಿಭಟನೆ ಮಾಡಲಾಗುವುದು. ಸರ್ಕಾರ ಇಂತಹ ಘಟನೆಗಳ ವಿರುದ್ಧ ತತಕ್ಷಣ ಕ್ರಮ ಕೈಗೊಳ್ಳಬೇಕು, ಹೋಂ ಗಾರ್ಡ್ ಕೆಲಸದ ಆದೇಶ ಪಾಲಿಸುತ್ತಾನೆ ಅವನನ್ನ ಬಲಿಪಶು ಮಾಡುವ ಬದಲು ಅಧಿಕಾರಿಗಳ ತಲೆದಂಡ ವಾಗಬೇಕು. ನಿರ್ದೇಶಕ ಅನುರಾಗ್ ಕಶ್ಯಪ್‌ರವರು ಬ್ರಾಹ್ಮಣರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೆ ವ್ಯಕ್ತಪಡಿಸುತ್ತೇವೆ ಅವರ ಮೇಲೆ ಪೊಲೀಸ್ ಠಾಣೆಗೆ ದೂರು ನೀಡಲಾ ಗುವುದು. ಬ್ರಾಹ್ಮಣರು ಸಮಾಜ, ದೇಶ ಜನರಿಗೆ ಒಳ್ಳೆಯದಾಗಬೇಕು ಎಂದು ಪೂಜೆ, ಹೋಮ ಹವನ ಮಾಡುತ್ತಾರೆ ಎಂದು ಹೇಳಿದರು.**

ಸಿ.ಇ.ಟಿ.ಪ್ರಾಧಿಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿರುವುದು ಸಮಾಧಾನಕರ ಸಂಗತಿ. ಜನಿವಾರ ಕಿತ್ತು ಹಾಕಿರುವುದರಿಂದ ಬ್ರಾಹ್ಮಣ ಸಮುದಾಯವು ರಾಜ್ಯಾದ್ಯಂತ ಅಕ್ರೋಶ ವ್ಯಕ್ತಪಡಿಸುತ್ತಿದ್ದಾರೆ, ಎಲ್ಲಾ ಕಡೆಗಳಲ್ಲಿ ಪ್ರತಿಭಟನೆಯಾಗುತ್ತಿದೆ. ವಿಪ್ರ ಸಮುದಾಯದಕ್ಕೆ ಆಗಿರುವ ನೋವು, ಸಂಕಷ್ಟಗಳು ಎದುರಿಸುತ್ತಿರುವ ಸಮಸ್ಯೆಗಳು ಕುರಿತು ಮಹಾಸಭಾ ದಿಂದ ಮುಖ್ಯಮಂತ್ರಿಗಳಿಗೆ ಮನವಿ ಮಾಡಿ ಕೊಳ್ಳಲಾಗುವುದು. ಸಿ.ಇ.ಟಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬ್ರಾಹ್ಮಣ ವಿದ್ಯಾರ್ಥಿಗೆ ಶಿಕ್ಷಣಕ್ಕೆ ಬೇಕಾದ ಆರ್ಥಿಕ ಸಹಾಯ ಮಹಾಸಭಾದಿಂದ ನೀಡಲಾಗುವುದು, ನಮ್ಮ ಸಂಪ್ರಾದಯ, ಸಂಸ್ಕೃತಿ ಎತ್ತಿಹಿಡಿದಿದ್ದಾನೆ ಎಂದು ಹೇಳಿದರು.

ಜಿಲ್ಲಾ ಪ್ರತಿನಿಧಿಗಳಾದ ಜಿ.ಎಸ್.ನಾಗೇಶ್, ಸತೀಶ್ ಉರಾಳ್, ಕೆ.ಎನ್.ರವಿಕುಮಾರ್, ಅಂಬಿಕಾ ರಾಮಚಂದ್ರ, ಮಂಜುನಾಥ್ ವಿಪ್ರಮುಖಂಡರುಗಳು ಉಪಸ್ಥಿತರಿದ್ದರು.

## ಮಹಾಭಾರತ ಪ್ರವಚನ ಮಾಲಿಕೆ



• ಉದಯವಾಹಿನಿ, ಬೆಂಗಳೂರು

ಶ್ರೀ ಪೂರ್ಣಪ್ರಜ್ಞ ಪ್ರತಿಷ್ಠಾನದ ವತಿಯಿಂದ ಏಪ್ರಿಲ್ 21 ರಿಂದ 27ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಮಹಾಭಾರತ ಪ್ರವಚನ ಮಾಲಿಕೆಯಲ್ಲಿ ಸಭಾಪರ್ವ, ವನಪರ್ವ ವಿಷಯವಾಗಿ ಧಾರ್ಮಿಕ ಪ್ರವಚನ. ಸ್ಥಳ: ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-24

## ಭಗವದ್ಗೀತೆ, ನಾಟ್ಯ ಶಾಸ್ತ್ರಕ್ಕೆ ಯುನೆಸ್ಕೋ ಮನ್ನಣೆ ಭಾರತೀಯರಿಗೆ ದೊರಕಿದ ಜಾಗತಿಕ ಗೌರವ

• ಉದಯವಾಹಿನಿ, ಬೆಂಗಳೂರು

ಭಾರತದ ಹಿಂದೂ ಧಾರ್ಮಿಕ ಪವಿತ್ರ ಗ್ರಂಥವಾದ ಭಗವದ್ಗೀತೆ, ಭರತ ಮುನಿ ರಚಿಸಿರುವ ನಾಟ್ಯಶಾಸ್ತ್ರಕ್ಕೆ ಯುನೆಸ್ಕೋ ಮನ್ನಣೆ ದೊರೆತಿರುವುದು ಭಾರತೀಯರಿಗೆ ದೊರಕಿದ ಜಾಗತಿಕ ಗೌರವವಾಗಿದೆ. ಯುನೆಸ್ಕೋದ ವಿಶ್ವಸರಣೆ ನೋಂದಣಿಯಲ್ಲಿ ಸೇರಿರುವುದು ನಮ್ಮ ದೇಶದ ಜ್ಞಾನ ಸಂಸ್ಕೃತಿ, ಇತಿಹಾಸ, ಸಮುದ್ಧತೆಯ ಹಿರಿಮೆಯನ್ನು ಸಾಕ್ಷೀಕರಿಸುತ್ತದೆ. ಇದು ಭಾರತದ ಶ್ರೀಮಂತ ಸಂಸ್ಕೃತಿಗೆ ಶ್ರೇಷ್ಠ ಗೌರವ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಬಣ್ಣಿಸಿದ್ದಾರೆ.

ಈ ಕುರಿತು ತಮ ಅಧಿಕೃತ ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ದೇಶದ ಹೆಮೆಯ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಮ ಪರಂಪರೆಯ ರಕ್ಷಣೆ, ಐತಿಹಾಸಿಕ ಸಾರಕಗಳ ಅಭಿವದ್ಧಿ, ನಮ್ಮ ಸಂಸ್ಕೃತಿಯ ಪೋಷಣೆಯ ಕಾರ್ಯ ಸಮರೋಪಾದಿಯಲ್ಲಿ ಸಾಗಿರುವುದು ವಿಶ್ವವೇ ಭಾರತವನ್ನು ಗೌರವದಿಂದ ನೋಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಕೊಂಡಾಡಿದ್ದಾರೆ.

## ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕಕ್ಕೆ ಅಗ್ರ ಸ್ಥಾನ

• ಉದಯವಾಹಿನಿ, ಬೆಂಗಳೂರು

ಕಳೆದ 2023-24 ಸಾಲಿನ ಮುಂಗಾರು ಹಾಗೂ ಹಿಂಗಾರು ಬೆಳೆಗಳಿಗೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಲ್ಲಿ ನೂತನ ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ದೊಡ್ಡ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಅಗ್ರ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ. ಬೆಳೆ ವಿಮೆ ಅನುಷ್ಠಾನ ಮಾಡುವಲ್ಲಿ ಅಗ್ರ 3 ಸ್ಥಾನದಲ್ಲಿರುವ ದೇಶದ ಮೂರು ಜಿಲ್ಲೆಗಳ ಪೈಕಿ ರಾಜ್ಯದ ಹಾವೇರಿ ಮತ್ತು ಕೊಪ್ಪಳ ಪ್ರಥಮ ಸ್ಥಾನ ಪಡೆಯುವ ಮೂಲಕ ರಾಜ್ಯ ಕೃಷಿ ಇಲಾಖೆಯ ಹಿರಿಮೆ ಹೆಚ್ಚಿಸಿದೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದು ರೈತರನ್ನು ಅನಿಶ್ಚಿತ ನಷ್ಟದಿಂದ ಪಾರು ಮಾಡುವ ದಿಶೆಯಲ್ಲಿ ನಮ್ಮ ಕೃಷಿ ಇಲಾಖೆ, ಸ್ಥಳೀಯ ಕೃಷಿ ಅಧಿಕಾರಿಗಳು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕೃಷಿ ಸಚಿವ ಎನ್.ಚಲುವ ರಾಯಸ್ವಾಮಿಯವರ ನೇತೃತ್ವ, ವಿಶೇಷ ಕಾಳಜಿಯಿಂದ ರಾಜ್ಯ ಕೃಷಿ ಇಲಾಖೆ ಮಹತ್ವದ ಸಾಧನೆ ಮಾಡಿದ್ದು, ಕೇಂದ್ರ ಸರ್ಕಾರವು ರಾಜ್ಯ ಕೃಷಿ ಇಲಾಖೆಗೆ ದೇಶದಲ್ಲೇ ಪ್ರಥಮ ಸ್ಥಾನ ನೀಡಿ ಗೌರವಿಸಿದೆ. ಇದೇ ವೇಳೆ ಪ್ರಥಮ ಸ್ಥಾನ ಪಡೆದ ರಾಜ್ಯ ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗ, ರಾಜ್ಯದ ಅನ್ನದಾತರಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ.

## ಅಟಲ್ ಬಿಹಾರಿ ವಾಜಪೇಯಿ ಈಜುಕೊಳ ಉದ್ಘಾಟನೆ

• ಉದಯವಾಹಿನಿ, ಯಲಹಂಕ

ಅಳ್ಳಾಳಸಂದ್ರ, ಕೆರೆ ಸಮೀಪದಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಿರುವ ಅಟಲ್ ಬಿಹಾರಿ ವಾಜಪೇಯಿ ಈಜುಕೊಳವನ್ನು ಶಾಸಕ ಎಸ್.ಆರ್.ವಿಶ್ವನಾಥ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಖಾಸಗಿ ಈಜುಕೊಳಗಳಲ್ಲಿ ದುಬಾರಿ ಹಣ ನೀಡಿ ಈಜು ತರಬೇತಿ ಪಡೆಯುವುದು ಸಾಮಾನ್ಯ ಜನರಿಗೆ ಕಷ್ಟವಾಗುತ್ತಿತ್ತು. ಈ ದಿಸೆಯಲ್ಲಿ ಒಂದೇ ಸೂರಿನಡಿಯಲ್ಲಿ ಬ್ಯಾಡ್ಮಿಂಟನ್ ಕೋರ್ಟ್, ಜಿಮ್ ಸೌಲಭ್ಯ ಒಳಗೊಂಡಂತೆ 8 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಈಜುಕೊಳ ನಿರ್ಮಿಸಿ, ಕೈಗೆಟುವ ದರದಲ್ಲಿ ತರಬೇತಿ ಪಡೆಯಲು ಅನುಕೂಲ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಸ್ಫೂರ್ತಿ ಕಕ್ಷನ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿಶ್ವೇಶ್ವರಯ್ಯ ಮಾತನಾಡಿ, ಈಜುಕೊಳದಲ್ಲಿ, ಮಕ್ಕಳು ಹಾಗೂ ಯುವಜನಾಂಗದವರಿಗೆ ತರಬೇತಿ ನೀಡಲು ತಜ್ಞ ತರಬೇತುದಾರರನ್ನು ನೇಮಿಸಲಾಗಿದೆ. ಆ ಮೂಲಕ ರಾಜ್ಯ ಹಾಗೂ ದೇಶಕ್ಕೆ ಉತ್ತಮ ಈಜುಪಟುಗಳನ್ನು ಕೊಡುಗೆ ನೀಡಬೇಕೆಂಬುದು ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು. ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸುಧಾಕರರೆಡ್ಡಿ, ಪಾಲಿಕೆ ಮಾಜಿ ಸದಸ್ಯ ಎಂ.ಮುನಿರಾಜು, ಮುಖ್ಯ ತರಬೇತುದಾರ ಮಧುಕುಮಾರ್.ಬಿ.ಎಂ, ಬಿಜೆಪಿ ಮುಖಂಡರಾದ ಎಸ್.ಸೋಮಶೇಖರ್, ಎ.ಎನ್.ಮಧುಸೂದನ್, ರವೀಂದ್ರ, ವೆಂಕಟೇಗೌಡ ಮತ್ತಿತರರು ಉಪಸ್ಥಿತರಿದ್ದರು.

## ಗಣಿ ಬಾಧಿತ ಜಿಲ್ಲೆಗಳಲ್ಲಿ ಹಲಸು ಬೆಳೆಗೆ ಉತ್ತೇಜನ

• ಉದಯವಾಹಿನಿ, ಬೆಂಗಳೂರು

ಗಣಿಗಾರಿಕೆಯಿಂದ ಬಾಧಿತವಾಗಿರುವ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಸಿದ್ದು, ಶಂಕರ ತಳಿಯ ಚಂದ್ರಹಲಸು ಬೆಳೆಯುವ ರೈತರಿಗೆ ಉತ್ತೇಜನ ನೀಡಲು ಕರ್ನಾಟಕ ಗಣಿ ಪರಿಸರ ಪುನಶ್ಚತನ ನಿಗಮ ಮುಂದಾಗಿದೆ. ಇದಕ್ಕಾಗಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ನೆರವಿನಲ್ಲಿ ಯೋಜನೆಯ ರೂಪುರೇಷೆ ಸಿದ್ಧವಾಗುತ್ತಿದೆ. ತುಮಕೂರು, ಚಿತ್ರದುರ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿನ ಗಣಿ ಬಾಧಿತ ಗ್ರಾಮಗಳ ರೈತರಿಗೆ ಚಂದ್ರಹಲಸಿನ ವಿಶೇಷ ತಳಿಯ ಸಸಿಗಳ ವಿತರಣೆ, ತಾಂತ್ರಿಕ, ಆರ್ಥಿಕ ನೆರವು, ಹಣ್ಣುಗಳ ಸಂಸ್ಕರಣೆ ಹಾಗೂ ಸಂರಕ್ಷಣೆ, ಮಾರುಕಟ್ಟೆ ಒದಗಿಸುವುದು, ವಿದೇಶಗಳಿಗೆ ರಫ್ತಿನವರೆಗೂ ವಿವಿಧ ಹಂತಗಳಲ್ಲಿ ನೆರವಾಗುವ ವಿಸ್ತೃತ ಯೋಜನೆಯೊಂದನ್ನು ಅನುಷ್ಠಾನಕ್ಕೆ ತರುವ ಪ್ರಸ್ತಾವ ಕೆಎಂಇಆರ್‌ಸಿ ಮುಂದಿದೆ. ನಿಗಮದ ಮೇಲುಸ್ತುವಾರಿ ಪ್ರಾಧಿಕಾರಿಯಾಗಿರುವ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ, ಅವರ ಸಲಹೆಗಾರರಾಗಿರುವ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್, ನಿಗಮದ ಅಧ್ಯಕ್ಷೆ ಉಮಾ ಮಹದೇವನ್, ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಬಿಜೂರ್ ನೇತೃತ್ವದ ತಂಡವು ತೋಟಗಾರಿಕಾ ಇಲಾಖೆ ಅಧಿಕಾರಿಗಳು, ಐಐಎಚ್‌ಆರ್, ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿಗಳೊಂದಿಗೆ ಫೆಬ್ರುವರಿಯಲ್ಲಿ ಮೊದಲ ಸುತ್ತಿನ ಚರ್ಚೆ ನಡೆಸಿದೆ.

# ಕೆಲವೇ ನಿಮಿಷಗಳಲ್ಲಿ ರೆಡಿಯಾಗುತ್ತೆ ರಸ್ತೆ!

### ಬೆಂಗಳೂರಿನ ರಸ್ತೆ ಗುಂಡಿಗಳನ್ನು ಮುಚ್ಚಲು ಬಂತು 'ಇಕೋಫಿಕ್ಸ್'

• ಉದಯವಾಹಿನಿ, ಬೆಂಗಳೂರು

ಅಂತೂ ಇಂತೂ ಬೆಂಗಳೂರು ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಒಂದು ವ್ಯವಸ್ಥೆಯಂತೂ ಸಿದ್ಧವಾಗಿದೆ. ಆದರೆ, ಈ ಬಾರಿ ಮನುಷ್ಯರಿಂದ ಗುಂಡಿಗಳನ್ನು ಮುಚ್ಚುತ್ತಿಲ್ಲ, ಬದಲಿಗೆ ಹೊಸ ತಂತ್ರಜ್ಞಾನದ ಸಹಾಯದಿಂದ ಗುಂಡಿಗಳನ್ನು ಮುಚ್ಚುವಂಥ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಬಿಬಿಎಂಪಿಯು ಮೊರೆ ಹೋಗಿರುವ ಹೊಸ ಈ ತಂತ್ರಜ್ಞಾನವನ್ನು ಹೊಂದಿ ರುವ ಯಂತ್ರದ ಹೆಸರು ಇಕೋಫಿಕ್ಸ್. ಕಬ್ಬಿಣ, ಸ್ಟೀಲ್, ಟಾರ್, ಸಿಮೆಂಟ್, ಜಲ್ಲಿ ಕಲ್ಲುಗಳನ್ನು ಬಳಸಿ ಗಂಜಿಯಂಥ ಗಾರೆಯನ್ನು ತಯಾರಿಸುವ ಇಕೋಫಿಕ್ಸ್ ಯಂತ್ರ, ಆ ಗಾರೆಯನ್ನು ನಿರ್ದಿಷ್ಟ ರಸ್ತೆ ಗುಂಡಿಗಳಿಗೆ ತುಂಬಿ ಅದನ್ನು ಸಮತಟ್ಟು ಮಾಡಿ ಅವುಗಳನ್ನು ಸರಿಪಡಿಸುತ್ತದೆ. ಅಲ್ಲದೆ, ಈ ಯಂತ್ರದಿಂದ ತುಂಬಿಸಲ್ಪಟ್ಟ ಗುಂಡಿಗಳಲ್ಲಿ ಮತ್ತೆ ತಗ್ಗು ಬೀಳುವುದು ಇತ್ಯಾದಿ ಯಾವುದೇ ದೋಷಗಳು ಕಂಡುಬರುವುದಿಲ್ಲ. ಆ ರೀತಿಯಲ್ಲಿ ಈ ಯಂತ್ರ ದೀರ್ಘಕಾಲ ಬಾಳಿಕೆ ಬರು ವಂಥ ಕೆಲಸವನ್ನು ಮಾಡುತ್ತದೆ.

ಕೇವಲ ಫಿಲ್ ಮಾಡುವುದಷ್ಟೇ ಅಲ್ಲ, ಇದನ್ನು ಬೇಗನೆ ಒಣಗಿಸಲು ಸಹ ಈ ಯಂತ್ರವು ಹಾಟ್ ಏರ್ ಬ್ಲೋ ಮಾಡುವಂಥ ವ್ಯವಸ್ಥೆಯನ್ನು ಹೊಂದಿದೆ. ಗುಂಡಿ ಮುಚ್ಚಿದ ಕೆಲವೇ


ಉದಯವಾಹಿನಿ ಚಿತ್ರ

- **ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳಿಂದ ಹೈರಾಣಾಗಿರುವ ಜನ.**
- **ಇದೇ ಹಿನ್ನೆಲೆಯಲ್ಲಿ ಹೊಸದಾದ ಇಕೋಫಿಕ್ಸ್ ಎಂಬ ಯಂತ್ರದ ಮೊರೆ ಹೋಗಿರುವ ಬಿಬಿಎಂಪಿ.**
- **ಕೆಲವೇ ನಿಮಿಷಗಳಲ್ಲಿ ಗುಂಡಿಗಳನ್ನು ಮುಚ್ಚಿ ಸಂಚಾರವನ್ನು ಸರಾಗವಾಗಿಸುವ ಯಂತ್ರ ಇದು.**

ನಿಮಿಷಗಳಲ್ಲಿ ವಾಹನಗಳು ಸರಾಗವಾಗಿ ಓಡಾಡಬಹುದು.

ಈ ಯಂತ್ರವನ್ನು ಕೇಂದ್ರ ರಸ್ತೆ ದುರಸ್ತಿ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್) ಹಾಗೂ ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ (ಸಿಆರ್ ಆರ್ ಐ) ಜಂಟಿಯಾಗಿ ನಿರ್ಮಿಸಿವೆ. ಈ ಯಂತ್ರದ ಮತ್ತೊಂದು ವಿಶೇಷವೇನೆಂದರೆ, ಇದು ರಸ್ತೆಯಲ್ಲಿ ನೀರು ನಿಂತಿದ್ದರೂ ಕೂಡ ಗುಂಡಿಗಳನ್ನು ಸಮರ್ಥವಾಗಿ ಮುಚ್ಚಬಲ್ಲದು.

**ಗೇಮ್ ಚೇಂಜರ್ ಯಂತ್ರ:** ಇದುವರೆಗೆ ಭಾರತದಂಥ ದೇಶಗಳಲ್ಲಿ ನಾನಾ ರೀತಿಯಲ್ಲಿ ಗುಂಡಿಗಳನ್ನು ಮುಚ್ಚಲಾಗಿದೆ. ಮೊದಲೆಲ್ಲಾ ಕಾರ್ಮಿಕರ ಸಹಾಯದಿಂದ ಗುಂಡಿಗಳನ್ನು ಮುಚ್ಚಲಾಗುತ್ತಿತ್ತು. ಇತ್ತೀಚೆಗೆ ವಿದೇಶಗಳಲ್ಲಿ ಇದ ಕ್ಕಾಗಿ ನಾನಾ ರೀತಿಯ ತಂತ್ರಜ್ಞಾನಗಳು ಬಂದಿವೆ. ಈ ತಂತ್ರ ಜ್ಞಾನಗಳನ್ನು ಬಳಸಿಕೊಂಡು ಭಾರತದಲ್ಲೂ ಗುಂಡಿಗಳನ್ನು ಮುಚ್ಚಲಾಗಿದೆ. ಆದರೆ, ಈಗ ಬಂದಿರುವ ಇಕೋಫಿಕ್ಸ್ ಯಂತ್ರವು ಒಂದು ರೀತಿಯಲ್ಲಿ ಅತ್ಯಾಧುನಿಕವಾಗಿದ್ದು, ಈ ಕ್ಷೇತ್ರದಲ್ಲಿ ಇದೊಂದು ಬದಲಾವಣೆ ತರುವಂಥದ್ದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ಕಳೆದ ವರ್ಷವೇ ಪೈಲಟ್ ಪ್ರಾಜೆಕ್ಟ್**


**ಕಳೆದ ವರ್ಷ ಡಿಸೆಂಬರ್ ನಲ್ಲೇ ಈ ಯಂತ್ರದ ಪೈಲಟ್ ಪ್ರಾಜೆಕ್ಟ್ ಶುರುವಾಗಿತ್ತು. 2024ರ ಡಿಸೆಂಬರ್ 10ರಂದು ಬೆಂಗಳೂರಿನಲ್ಲಿ ಈ ಯಂತ್ರದ ಪೈಲಟ್ ಪ್ರಾಜೆಕ್ಟ್ ಶುರುವಾಗಿತ್ತು. ರಾಜ್ಯ ಹೆದ್ದಾರಿ 256ರಲ್ಲಿ ಸಿಎಸ್‌ಐಆರ್, ಸಿಆರ್ ಆರ್ ಐ ಸಂಸ್ಥೆಗಳು ಜಂಟಿಯಾಗಿ ಈ ಪ್ರಾಜೆಕ್ಟ್ ಅನ್ನು ಶುರು ಮಾಡಿದ್ದವು. ಆ ರಸ್ತೆಯಲ್ಲಿನ ತಗ್ಗು, ಗುಂಡಿಗಳನ್ನು ಮುಚ್ಚಲು ಈ ಯಂತ್ರವನ್ನು ಬಳಸಲಾಗಿತ್ತು. ಈ ಪ್ರಾಜೆಕ್ಟ್ ನಲ್ಲಿ ರಾಮುಕಾ ಗ್ಲೋಬಲ್ ಸರ್ವೀಸಸ್ ಎಂಬ ಖಾಸಗಿ ಸಂಸ್ಥೆಯ ತಜ್ಞರೂ ಭಾಗಿಯಾಗಿದ್ದರು. ಅಲ್ಲಿ ಈ ಯಂತ್ರದ ಕಾರ್ಯವೈಖರಿ ಹಾಗೂ ಈ ಯಂತ್ರದಿಂದ ಆಗಿರುವ ಕೆಲಸದ ಗುಣಮಟ್ಟ ಎರಡನ್ನೂ ತಾಳೆ ಹಾಕಿ ನೋಡಿ ಈ ಯಂತ್ರವನ್ನು ಉಳಿದ ಕಡೆಗಳಲ್ಲಿ ಗುಂಡಿ ಮುಚ್ಚಲು ಬಳಸಬಹುದೆಂದು ತೀರ್ಮಾನಿಸಲಾಯಿತು.**

## 2025ನೇ ಸಾಲಿನ ಸಿಇಟಿ ಅರ್ಜಿ ತಿದ್ದುಪಡಿಗೆ ಮೇ.2ರವರೆಗೆ ಅವಕಾಶ

• ಉದಯವಾಹಿನಿ, ಬೆಂಗಳೂರು

ವಿದ್ಯಾರ್ಥಿಗಳು ಈಗಾಗಲೇ ಸಲ್ಲಿಸಿರುವ 2025ನೇ ಸಾಲಿನ ಸಿಇಟಿ ಅರ್ಜಿಯಲ್ಲಿ ಇನ್ನೂ ಏನಾದರೂ ತಪ್ಪುಗಳಿದ್ದು, ಅವುಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಇಚ್ಛಿಸುವವರಿಗೆ ಮೇ 2ರವರೆಗೂ ಕರ್ನಾಟಕ ಪರೀಕ್ಷಾ ಪ್ರಾಧಿಧಿಕಾರ ಅವಕಾಶ ನೀಡಿದೆ. ಮೀಸಲಾತಿ, ವಿಶೇಷ ಪ್ರವರ್ಗ, ಶೈಕ್ಷಣಿಕ ವಿವರಗಳು, ಕ್ಲಾಸ್ ಕೋಡ್ ಇತ್ಯಾದಿ ತಪ್ಪಾಗಿದ್ದರೆ ಅವುಗಳನ್ನು ಸರಿ ಮಾಡಿಕೊಳ್ಳಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್ ಪ್ರಸನ್ನ ತಿಳಿಸಿದ್ದಾರೆ. ಅಭ್ಯರ್ಥಿಗಳ ಹೆಸರು, ತಂದೆ/ತಾಯಿ ಹೆಸರು, ಜನ್ಮ ದಿನಾಂಕ, 10ನೇ ತರಗತಿ ಹಾಗೂ 12ನೇ ತರಗತಿಯ ನೋಂದಣಿ ಸಂಖ್ಯೆ ಇತ್ಯಾದಿ ಮಾಹಿತಿಗಳು ತಪ್ಪಾಗಿ ನಮೂದು ಮಾಡಿದ್ದಲ್ಲಿ ದಾಖಲೆ ಸಮೇತ ಪ್ರಾಧಿಕಾರಕ್ಕೆ ಬಂದು ಮನವಿ ಸಲ್ಲಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಕೃಷಿಕರ ಕೋಟಾದಡಿ ಪ್ರಾಯೋಗಿಕ ಪರೀಕ್ಷೆ ಬರೆಯಲು ಸಿಇಟಿ ಅರ್ಜಿಯಲ್ಲಿ ನಮೂದಿಸದೇ ಇದ್ದಲ್ಲಿ ನಾಳೆಯೊಳಗೆ ತಿದ್ದುಪಡಿ ಮಾಡಿಕೊಳ್ಳಬೇಕು.



ಹೊಸದಾಗಿ ಕೃಷಿಕರ ಕೋಟಾ ನಮೂದಿಸಿದವರು ಏ.21ರಂದು ತಮ್ಮ ದಾಖಲೆಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಬೇಕು ಎಂದು ಅವರು ತಿಳಿಸಿದ್ದಾರೆ. ಸಿಇಟಿ ಕೀ ಉತ್ತರ ಪ್ರಕಟ : ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮುಗಿದಿದ್ದು, ನಿನ್ನೆಯೇ ಎಲ್ಲಾ ನಾಲ್ಕು ವಿಷಯಗಳ 16 ವರ್ಷನ್‌ಗಳ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಕೀ ಉತ್ತರಗಳನ್ನು ಪ್ರಕಟಿಸಿದ್ದು, ಆಕ್ಷೇಪಣೆಗಳು ಇದ್ದಲ್ಲಿ ಏ.22ರ ಸಂಜೆ 5 ಗಂಟೆ ಒಳಗೆ ಆನ್‌ಲೈನ್ ಮೂಲಕ ಸಲ್ಲಿಸಬಹುದು ಎಂದು ಅವರು ತಿಳಿಸಿದ್ದಾರೆ.

ಆಕ್ಷೇಪಣೆ ಸಲ್ಲಿಸುವ ಸಂದರ್ಭದಲ್ಲಿ ಪತ್ರಿಕೆಯ ವಿವರ, ಪರೀಕ್ಷಾ ದಿನಾಂಕ, ವರ್ಷನ್ ಕೋಡ್, ಪ್ರಶ್ನೆ ಸಂಖ್ಯೆ, ಪೂರಕ ದಾಖಲೆಗಳನ್ನು ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು. ಈ ಮಾಹಿತಿ ಸರಿ ಇಲ್ಲದಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

## ಕರೆಂಟ್, ನೀರು, ಹಾಲು, ಬಸ್ಸು, ಮೆಟ್ರೋ, ಡೀಸೆಲ್ ಆಯ್ತು ಈಗ ಮಕ್ಕಳ ಪಠ್ಯಪುಸ್ತಕ ದರವೂ ಹೆಚ್ಚಳ ಗ್ಯಾರಂಟಿ

• ಉದಯವಾಹಿನಿ, ಬೆಂಗಳೂರು

ಹಾಲು, ನೀರು, ವಿದ್ಯುತ್ ಮತ್ತಿತರ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನರು ಪಠ್ಯಪುಸ್ತಕ ದರದ ಹೆಚ್ಚಳವನ್ನು ಸಹಿಸಿಕೊಳ್ಳಬೇಕಾಗಿದೆ. ಈ ಬಾರಿ ಪಠ್ಯ ಪುಸ್ತಕದ ದರಶೇ 10 ರಷ್ಟು ಏರಿಕೆಯಾಗಗಲಿದೆ. ದರ ಏರಿಕೆಯನ್ನು ಕರ್ನಾಟಕ ಟೆಕ್ಸ್ ಬುಕ್ ಸೊಸೈಟಿ ಖಚಿತಪಡಿಸಿದೆ. ಖಾಸಗಿ ಶಾಲೆಗಳಿಂದ ಡಿಸೆಂಬರ್ ತಿಂಗಳಲ್ಲಿ ಇಂಡೆಂಟ್ ಪಡೆದಿದ್ದ ಸಂಸ್ಥೆ ಮುಂಗಡ ಶೇ.10ರಷ್ಟು ಹಣವನ್ನು ಆನ್ ಲೈನ್ ಮೂಲಕ ಪಾವತಿಸಿಕೊಂಡಿತ್ತು. ಖಾಸಗಿ ಶಾಲೆಗೆ ಇಂಡೆಂಟ್ ಪಡೆದಿದ್ದಕ್ಕಿಂತ ಶೇ. 10 ರಷ್ಟು ದರ ಹೆಚ್ಚಳ ಮಾಡಿರುವುದು ಪೋಷಕರಿಗೆ ಹೊರೆಯಾಗಿ ಪರಿಣಮಿಸುವುದು ಖಚಿತವಾಗಿದೆ.

ಶಾಲಾ ಪಠ್ಯಪುಸ್ತಕದ ಬೆಲೆ ಏರಿಕೆ ವಿಚಾರ ಕುರಿತಂತೆ ಪ್ರತಿಕ್ರಿಯಿಸಿರುವ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಅವರು, ಕೇವಲ 10% ಅಲ್ಲ ಕೆಲ ಪುಸ್ತಕಗಳ ಮೇಲೆ 100% ವರೆಗೂ ದರ ಏರಿಕೆ ಮಾಡಿದೆ ಎಂದು


ಉದಯವಾಹಿನಿ ಚಿತ್ರ

ಮಾಹಿತಿ ನೀಡಿದ್ದಾರೆ. ಇದರ ಹೊರೆ ಯನ್ನ ಖಾಸಗಿ ಶಾಲೆಗಳು ಪೋಷಕರ ಮೇಲೆನೇ ಹಾಕಬೇಕಾಗುತ್ತೆ. ಶಾಲಾ ಶುಲ್ಕದ ಜೊತೆಗೇನೇ ಈ ದರವನ್ನ ಸೇರಿಸೋದು ಅವಶ್ಯಕತೆ ಇರುತ್ತೆ ಎಂದಿದ್ದಾರೆ.

ಈಗಾಗಲೇ ಎಲ್ಲದರ ಬೆಲೆ ಏರಿಕೆಯಾಗಿರೋದರಿಂದ ಜನರಿಗೆ ತೊಂದರೆ ಆಗ್ತಾ ಇದೆ ಎಂದು ಸಾಕಷ್ಟು ಬಾರಿ ನಾವು ಸರ್ಕಾರಕ್ಕೂ ಮನವಿ ಮಾಡಿದ್ದೇವೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ ಹೀಗಾಗಿ ಪಠ್ಯ ಪುಸ್ತಕ ದರವನ್ನು ಅನಿವಾರ್ಯವಾಗಿ ಏರಿಕೆ ಮಾಡಬೇಕಿದೆ ಎಂದಿದ್ದಾರೆ.

## ಸಿದ್ದು ಸರ್ಕಾರದ ಹಿಂದೂ ವಿರೋಧಿ ಭಾವನೆ ಎಲ್ಲಾ ಇಲಾಖೆಗಳನ್ನು ಆವರಿಸಿದೆ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ಮನೋಭಾವನೆ ತುಂಬಿ ತುಳುಕಿ ಎಲ್ಲಾ ಇಲಾಖೆಗಳಲ್ಲಿಯೂ ಪ್ರವೇಶಿಸಿದೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿ ಕುಮಾರ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ತೀರ್ಥಹಳ್ಳಿ ಮತ್ತು ಬೀದರ್‌ನಲ್ಲಿ ನಡೆದ ಅಧಿಕಾರಿಗಳ ನಿಂದನೀಯ ಕೃತ್ಯಗಳಿಂದ ಇದು ಸ್ಪಷ್ಟವಾಗಿದೆ ಎಂದಿದ್ದಾರೆ. ತೀರ್ಥಹಳ್ಳಿಯಲ್ಲಿ ಬ್ರಾಹ್ಮಣ ವಿದ್ಯಾರ್ಥಿಯಿಂದ ಜನಿವಾರವನ್ನು ಬಲವಂತವಾಗಿ ತೆಗೆಸಿಕೊಳ್ಳಲಾಗಿದೆ, ಬೀದರ್‌ನಲ್ಲಿ ಜನಿವಾರ ತೆಗೆಯಲು ನಿರಾಕರಿಸಿದ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅನುಮತಿ ನಿರಾಕರಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಇದು ಹಿಂದುಗಳ ಧಾರ್ಮಿಕ ಸ್ವಾತಂತ್ರ್ಯಕ್ಕೆ ಎದುರಾದ ದೊಡ್ಡ ಸಮಸ್ಯೆ.

**ಹೀಗೆ ಹಿಂದು ವಿರೋಧಿ ಕೃತ್ಯಗಳು ಪುನಃ ಪುನಃ ನಡೆಯುತ್ತಿವೆ. ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿದ ನಾಜೂಕಾದ ವಿಷಯಗಳಲ್ಲಿ ಜನಿವಾರ ತೆಗೆಸುವಂತಹ ನಿಷ್ಟುರ ತೀರ್ಮಾನಗಳನ್ನು ಅಧಿಕಾರಿಗಳು ತಾವೇ ತೆಗೆದುಕೊಳ್ಳುವುದಿಲ್ಲ. ನಾನು ಖಚಿತವಾಗಿ ಹೇಳುತ್ತೇನೆ**

**- ಎನ್.ರವಿ ಕುಮಾರ್**



ಈ ರೀತಿಯ ಸೂಚನೆಗಳು, ಮಾರ್ಗಸೂಚಿಗಳನ್ನು ಸರ್ಕಾರವೇ ನೀಡಿದೆ. ಸಂಬಂಧಿತ ಸಚಿವರು ಈ ನಿಂದನೀಯ ಘಟನೆ ಬಗ್ಗೆ ಸ್ಪಷ್ಟನೆ ನೀಡಬೇಕು. ಈ ನಿಂದನಾರ್ಹ ಘಟನೆಯ ಕುರಿತಾಗಿ ಸಂಪೂರ್ಣ ತನಿಖೆ ನಡೆಯಬೇಕು ಎಂದು ರವಿ ಕುಮಾರ್ ಆಗ್ರಹಿಸಿದ್ದಾರೆ.

**ತಾಲಿಬಾನ್ ರೀತಿಯ ಆಡಳಿತ**

**ಕೆಲವು ತಿಂಗಳ ಹಿಂದೆ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಮುನ್ನ ಕೆಲವು ಮಹಿಳೆಯರ ಮಂಗಳಸೂತ್ರ ತೆಗೆಯಲು ಸೂಚಿಸಲಾಗಿತ್ತು. ಸಿದ್ದರಾಮಯ್ಯ ಅವರು ಪ್ರಜಾಪ್ರಭುತ್ವಾಧಾರಿತ, ಸಕಾರಾತ್ಮಕ, ನಿಜವಾದ ಧರ್ಮನಿರಪೇಕ್ಷ ಸರ್ಕಾರವನ್ನು ನಡೆಸುತ್ತಿದ್ದಾರೋ ಅಥವಾ ತಾಲಿಬಾನ್ ರೀತಿಯ ಆಡಳಿತ ನಡೆಸುತ್ತಿದ್ದಾರೋ ಎಂಬ ಅನುಮಾನ ಉಂಟಾಗುತ್ತದೆ ಎಂದು ಪ್ರಶ್ನಿಸಿದ್ದಾರೆ.**

## ಹೆಚ್‌ಡಿಕೆ ಹೇಳಿಕೆಗೆ ಕುರುಬರ ಸಂಘ ಖಂಡನೆ

• ಉದಯವಾಹಿನಿ, ಬೆಂಗಳೂರು

ಹಿಂದುಳಿದ ವರ್ಗ ಕುರುಬ ಸಮುದಾಯದವರು ಸರ್ಕಾರದಿಂದ ಅತಿ ಹೆಚ್ಚು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಹೇಳಿಕೆಯನ್ನು ಕರ್ನಾಟಕ ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ವಿ. ಸೋಮಶೇಖರ್ ರವರು ತೀವ್ರವಾಗಿ ಖಂಡಿಸಿದ್ದಾರೆ. ನಗರದ ಗಾಂಧಿನಗರದಲ್ಲಿರುವ ಸಂಘದ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ನಮ್ಮ ಸಮುದಾಯದ ಕುಲಕಸುಬು ಕುರಿ ಕಾಯುವುದು ಮತ್ತು ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ


ಉದಯವಾಹಿನಿ ಚಿತ್ರ



ತೀರ ಹಿಂದುಳಿದಿದ್ದು ಇಂತಹ ಸಮುದಾಯದ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿ ಇಂತಹ ಕೀಳು ಮಟ್ಟದ ಹೇಳಿಕೆ ನೀಡಿರುವುದು ಸರಿಯಲ್ಲ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯನವರು ರಾಜ್ಯದ ಬಡಜನರಿಗೆ ಅನ್ನಭಾಗ್ಯದ ಮೂಲಕ ಹಸಿವನ್ನು ನೀಗಿಸಿದ್ದು ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಎಲ್ಲಾ ಜಾತಿ ಜನಾಂಗದವರ ಮನಸ್ಸು ಗೆದ್ದಿರುವ ನಾಯಕ ಮುಖ್ಯಮಂತ್ರಿಗಳ ಯಶಸ್ಸನ್ನು ನೋಡಿ ಸಹಿಸಲಾಗದೆ ಕುಮಾರಸ್ವಾಮಿಯವರು ಸುಳ್ಳು ಹೇಳಿಕೆ ನೀಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಯಾವ ಜಾತಿ ಜನಾಂಗ ದವರು ಎಷ್ಟೆಷು ಸೌಲಭ್ಯ ಪಡೆದಿದ್ದಾರೆ, ಎಷ್ಟು ಜನ ವಿದ್ಯಾವಂತರಿದ್ದಾರೆ, ಉದ್ಯೋಗದಲ್ಲಿದ್ದಾರೆ, ಎಷ್ಟು ಫ್ಯಾಕ್ಟರಿ, ಉದ್ದಿಮೆ, ಶಿಕ್ಷಣ ಸಂಸ್ಥೆಗಳು ಇವೆ, ಸರ್ಕಾರದಿಂದ ಯಾರು ಎಷ್ಟು ಯೋಜನೆಗಳನ್ನು ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ಕುಮಾರಸ್ವಾಮಿಯವರು ರಾಜ್ಯದ ಜನತೆಗೆ ಸತ್ಯ ತಿಳಿಸಲಿ ಎಂದು ಸವಾಲು ಹಾಕಿದ್ದಾರೆ. ಕುಮಾರಸ್ವಾಮಿಯವರು ನಮ್ಮ ಸಮುದಾಯದ ಬಗ್ಗೆ ಇದೇ ರೀತಿ ಮಾತನಾಡಿದರೆ ಮುಂದಿನ ದಿನಗಳಲ್ಲಿ ಅವರು ಭಾಗವಹಿಸುವ ರಾಜ್ಯದ ಜಿಲ್ಲೆ, ತಾಲ್ಲೂಕು ಕಾರ್ಯಕ್ರಮಗಳಲ್ಲಿ ಘೇರಾವ್ ಮಾಡಿ ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ ಎಂದರು.

## ಕಸದ ತೊಟ್ಟಿಯಲ್ಲಿ ನವಜಾತ ಶಿಶು ಪತ್ತೆ

• ಉದಯವಾಹಿನಿ, ಬೆಂಗಳೂರು

ಯಲಹಂಕದ ಕಸದ ತೊಟ್ಟಿಯಲ್ಲಿ ನವಜಾತ ಶಿಶುವಿನ ಶವ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನೊಬ್ಬನನ್ನು ಯಲ ಹಂಕ ಪೊಲೀಸರು ಬಂಧಿಸಿದ್ದಾರೆ. ಏಪ್ರಿಲ್ 2 ರಂದು ಗಾಂಧಿನಗರದ 2ನೇ ಅಡ್ಡರಸ್ತೆಯ ಕಸದತೊಟ್ಟಿಯಲ್ಲಿ ಕಂಬಳಿ ಸುತ್ತಿ ಬಿಸಾಡಿದ್ದ ಶಿಶುವನ್ನು ನೋಡಿದ ಸ್ಥಳೀಯರು, ಪೊಲೀಸರಿಗೆ ತಿಳಿಸಿದ್ದರು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಶಿಶುವನ್ನು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಪರೀಕ್ಷಿಸಿದ ವೈದ್ಯರು ಶಿಶು ಮೃತಪಟ್ಟಿರುವು ದಾಗಿ ತಿಳಿಸಿದರು. ಪ್ರಕರಣ ದಾಖಲಿಸಿಕೊಂಡು ಪೋಷಕರ ಪತ್ತೆಗಾಗಿ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ ನಡೆಸಲಾಯಿತು. ವೃದ್ಧರೊಬ್ಬರು ಹಸುಗೂಸನ್ನು



ಕಂಬಳಿ ಯಲ್ಲಿ ಸುತ್ತಿಕೊಂಡು ಸೈಕಲ್‌ನಲ್ಲಿ ತೆರಳುತ್ತಿರುವ ದೃಶ್ಯ ಕಂಡು ಬಂದಿತ್ತು. ಆ ವ್ಯಕ್ತಿಯನ್ನು ಪತ್ತೆ ಮಾಡಿ ವಿಚಾರಿಸಿದಾಗ, ಮನೆ ಸಮೀಪದ ಯುವತಿಯೊಬ್ಬಳು ಮಗು ನೀಡಿರುವುದಾಗಿ ತಿಳಿಸಿದ್ದರು ಎಂದು ಮೂಲಗಳು ಹೇಳಿವೆ. ಯುವತಿಯನ್ನು ಪತ್ತೆಹಚ್ಚಿ ವಿಚಾರಣೆ ನಡೆಸಿದಾಗ, ಆಕೆ ಬಾಲಕಿ ಎಂಬುದು ತಿಳಿದುಬಂತು. 22 ವರ್ಷದ ಭರತ್ ಎಂಬಾತನ ಜತೆ ಸಂಬಂಧದಿಂದಾಗಿ ಮಗು ಜನಿಸಿತು. ಈ ವಿಷಯವನ್ನು ಯಾರಿಗೂ ತಿಳಿಸಬಾರದು ಎಂದು ಬೆದರಿಕೆ ಹಾಕಿದ್ದ. ಮಗು ಹುಟ್ಟುವಾಗಲೇ ಮೃತ ಪಟ್ಟಿತ್ತು. ಯಾರಿಗೂ ಗೊತ್ತಾಗಬಾರದೆಂದು ವೃದ್ಧರ ಕೈಗೆ ಕೊಟ್ಟು ಕಳುಹಿಸಿದ್ದೆ ಎಂದು ಬಾಲಕಿ ಮಾಹಿತಿ ನೀಡಿದ್ದಳು' ಎಂದು ಮೂಲಗಳು ತಿಳಿಸಿವೆ.

### ನಮ್ಮ ಮೆಟ್ರೋದಿಂದ ದಾಖಲೆ, ಏಪ್ರಿಲ್ 17 ರಂದು 9 ಲಕ್ಷ ಪ್ರಯಾಣಿಕರಿಂದ ಸಂಚಾರ

# ನಮ್ಮ ಮೆಟ್ರೋ, ಪ್ರಯಾಣಿಕರ ಸಂಖ್ಯೆಯಲ್ಲಿ ಹೊಸ ದಾಖಲೆ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಬೆಂಗಳೂರು ಜನರ ಸಂಚಾರಕ್ಕೆ ಜೀವನಾಡಿ ಎನಿಸಿಕೊಂಡಿರುವ ನಮ್ಮ ಮೆಟ್ರೋವನ್ನು ಅವಲಂಬಿಸುವವರ ಸಂಖ್ಯೆ ಹೆಚ್ಚಾಗಿದೆ. ಟ್ರಾಫಿಕ್ ಜಾಮ್ ಕಿರಿಕಿರಿಯಿಂದಾಗಿ ಸ್ವಂತ ವಾಹನವಿದ್ದರೂ ಸಮಯ ಉಳಿತಾಯ ಮಾಡಲು, ಜಂಜಾಟದಿಂದ ತಪ್ಪಿಸಿಕೊಳ್ಳಲು ನಮ್ಮ ಮೆಟ್ರೋ ಹತ್ತುತ್ತಿದ್ದಾರೆ. ಕಳೆದೊಂದು ವರ್ಷದಿಂದ ನಿತ್ಯ ನಮ್ಮ ಮೆಟ್ರೋದಲ್ಲಿ ಸರಾಸರಿ 6-7 ಲಕ್ಷ ಜನ ಸಂಚರಿಸುತ್ತಿದ್ದಾರೆ.

ನಮ್ಮ ಮೆಟ್ರೋ, ಪ್ರಯಾಣಿಕರ ಸಂಖ್ಯೆಯಲ್ಲಿ ಹೊಸ ದಾಖಲೆ ಬರೆದಿದೆ. ಏಪ್ರಿಲ್ 17, 2025 ರಂದು 9,08,153 ಪ್ರಯಾಣಿಕರು ಸಂಚರಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. 2024 ಆಗಸ್ಟ್ 14 ರಂದು ಒಂದೇ ದಿನ ನಮ್ಮ ಮೆಟ್ರೋದಲ್ಲಿ 9.17 ಲಕ್ಷ ಪ್ರಯಾಣಿಕರು ಸಂಚರಿಸಿರುವುದು ಈವರೆಗಿನ ದಾಖಲೆಯಾಗಿತ್ತು. ಇದೀಗ ಏಪ್ರಿಲ್ 17 ರ ಪ್ರಯಾಣಿಕರ ಸಂಖ್ಯೆ ಈ ದಾಖಲೆಯನ್ನು ಮುರಿದಿದೆ.


ಉದಯವಾಹಿನಿ ಚಿತ್ರ

**ಮೆಟ್ರೋ ವಿಸ್ತರಣೆ:** ನೇರಳೆ ಲೈನ್ ಮೆಟ್ರೋ ಮೈಸೂರು ರಸ್ತೆ ಸುತ್ತಮುತ್ತಲಿನ ಪ್ರದೇಶಕ್ಕೆ ವರದಾನವಾಗಿ ಪರಿಣಮಿಸಿದೆ. ಮೆಟ್ರೋ ಸಂಪರ್ಕ ಈಗ ಚಲ್ಲಘಟ್ಟದವರೆಗೆ ವಿಸ್ತರಿಸಿದ್ದು, ಇದು ರಾಮೋಹಳ್ಳಿಯಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಗರಿಗೆದರಲು ಪ್ರಮುಖ ಕಾರಣವಾಗಿದೆ.

**ಯಾವ ಮಾರ್ಗದಲ್ಲಿ ಎಷ್ಟು ಮಂದಿ ಪ್ರಯಾಣ?**

- **ಹಸಿರು ಮಾರ್ಗದಲ್ಲಿ ಪ್ರಯಾಣಿಸಿದವರ ಸಂಖ್ಯೆ 4,35, 156**
- **ನೇರಳೆ ಮಾರ್ಗ ಪ್ರಯಾಣಿಕರ ಸಂಖ್ಯೆ 2, 85, 240**
- **ಒಟ್ಟು ಪ್ರಯಾಣಿಕರ ಸಂಖ್ಯೆ 9, 08, 153**

ಮೆಟ್ರೋ ವಿಸ್ತರಣೆಯಿಂದಾಗಿ ಮೈಸೂರು ರಸ್ತೆಯ ಆಸುಪಾಸಿನವರಿಗೆ ಪ್ರತಿನಿತ್ಯ ಆಫೀಸ್, ಬಿಸ್ನೆಸ್ ವ್ಯವಹಾರಗಳಿಗೆ ಹೋಗಿ ಬರುವುದು ಸುಲಭವಾಗಿದೆ. ಇಲ್ಲಿಂದ ರಾಜರಾಜೇಶ್ವರಿ ಮೆಡಿಕಲ್ ಕಾಲೇಜು, ಕೆಂಗೇರಿ ಮೆಟ್ರೊ ಮತ್ತು ಬಸ್ ನಿಲ್ದಾಣ, ರೈಲು ನಿಲ್ದಾಣ ಕೆಲವೇ ಕಿಲೋಮೀಟರ್ ಅಂತರದಲ್ಲಿದ್ದು, ಗೋಪಾಲನ್ ಮಾಲ್, ಬಿಜಿಎಸ್ ಆಸ್ಪತ್ರೆ, ಸ್ಪರ್ಶ್ ಆಸ್ಪತ್ರೆ, ಪ್ರಮುಖ ಕ್ಲಬ್, ರೆಸ್ಟೋರೆಂಟ್‌ಗಳು ಕೆಲವೇ ಕಿ.ಮೀ. ದೂರದಲ್ಲಿವೆ. ಉತ್ತಮ ಕನೆಕ್ಟಿವಿಟಿ, ವಾಸಿಸಲು ಉತ್ತಮ ವಾತಾವರಣ, ಸುಸಜ್ಜಿತ ಆಸ್ಪತ್ರೆ, ಪ್ರಮುಖ ಶಿಕ್ಷಣ ಸಂಸ್ಥೆಗಳಿಗೆ ಹತ್ತಿರದಲ್ಲಿರುವುದರಿಂದ ಕೂಡ ಕೆಂಗೇರಿ ಸುತ್ತಮುತ್ತ ಪ್ರದೇಶಗಳಲ್ಲಿರುವ ನಿವೇಶನಗಳಿಗೆ ಬೇಡಿಕೆ ವ್ಯಕ್ತವಾಗಿದೆ. ಬೆಂಗಳೂರಿನಿಂದ ಹೊರಗಡೆಗೆ ಇಲ್ಲಿಂದ ಕಡಿಮೆ ಸಮಯದಲ್ಲಿ ಹೋಗಲು ಸಾಧ್ಯವಿರುವುದು ಸಹ ಜನರಿಗೆ ಇದು ಅನುಕೂಲವಾಗಿ ಪರಿಣಮಿಸಿದೆ.

**ನಮ್ಮ ಮೆಟ್ರೋದಲ್ಲಿ ಸರಾಸರಿ 6-7 ಲಕ್ಷ ಜನ ಸಂಚಾರ**

**ಸಂಚಾರ ದಟ್ಟಣೆಯಿಂದ ಹೈರಾಣಾಗಿರುವ ಬೆಂಗಳೂರು ಮಂದಿ , ನಗರದಲ್ಲಿ ಸಂಚರಿಸಲು ನಮ್ಮ ಮೆಟ್ರೋ ಪ್ರಯಾಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಸ್ವಂತ ವಾಹನವಿದ್ದವರೂ ಕೂಡಾ ಮೆಟ್ರೋ ಪ್ರಯಾಣವನ್ನೂ ಆದ್ಯತೆಯಾಗಿ ಮಾಡಿಕೊಂಡಿದ್ದಾರೆ. ಹೀಗಾಗಿ ಕಳೆದೊಂದು ವರ್ಷದಿಂದ ನಿತ್ಯ ನಮ್ಮ ಮೆಟ್ರೋದಲ್ಲಿ ಸರಾಸರಿ 6-7 ಲಕ್ಷ ಜನ ಸಂಚರಿಸುತ್ತಿದ್ದಾರೆ. ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆಯಲ್ಲಿ ಹೊಸ ದಾಖಲೆ ಬರೆದಿದ್ದು, ಏಪ್ರಿಲ್ 17 ರಂದು 9 ಲಕ್ಷ ಪ್ರಯಾಣಿಕರು ಸಂಚಾರ ಮಾಡಿದ್ದಾರೆ.**

ಅಂತರಾಳದಿಂದ... EDITORIAL

# ವಕ್ಫ್ ಕಾಯ್ದೆ: ವಿವಾದಿತ ಅಂಶಗಳು ಗಂಭೀರ ಪರಿಶೀಲನೆಗೆ ಒಳಪಡಲಿ




ವಕ್ಫ್ (ತಿದ್ದುಪಡಿ) ಕಾಯ್ದೆಯಲ್ಲಿ ಇರುವ ಕೆಲವು ಪ್ರಮುಖ ಅಂಶಗಳ ಕುರಿತು ವ್ಯಕ್ತವಾಗಿರುವ ಕಳವಳವನ್ನು ಸುಪ್ರೀಂ ಕೋರ್ಟ್ ಗಣನೆಗೆ ತೆಗೆದುಕೊಂಡಿದೆ. ಪ್ರಮುಖ ಅಂಶಗಳನ್ನು ಮುಂದಿನ ವಿಚಾರಣೆವರೆಗೆ ಜಾರಿಗೆ ತರಬಾರದು, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಹೇಳಿದೆ. ವಿವಾದಾತ್ಮಕ ತಿದ್ದುಪಡಿಗಳಿಗೆ ಸಂಬಂಧಿಸಿ ಕೆಲವು ಮಹತ್ವದ ಪ್ರಶ್ನೆಗಳನ್ನು ನ್ಯಾಯಪೀಠವು ಕೇಳಿದೆ. ಈ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಸರ್ಕಾರ ನೀಡಿಲ್ಲ. ಕೇಂದ್ರ ವಕ್ಫ್ ಪರಿಷತ್, ರಾಜ್ಯ ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರನ್ನೂ ಸದಸ್ಯರನ್ನಾಗಿ ಸೇರಿಸುವುದು, ವಕ್ಫ್ ಎಂದು ಘೋಷಿಸಲಾಗಿರುವ ಆಸ್ತಿಯನ್ನು ಡಿನೋಟಿಫೈ ಮಾಡುವುದು, ವಕ್ಫ್ ಆಸ್ತಿಯ ಸಿಂಧುತ್ವವನ್ನು ರದ್ದುಮಾಡಲು ಜಿಲ್ಲಾಧಿಕಾರಿಗೆ ಪರಮಾಧಿಕಾರ ನೀಡುವುದು ಮುಂತಾದ ವಿಚಾರಗಳಲ್ಲಿ ಪ್ರಶ್ನೆ ಕೇಳಲಾಗಿದೆ. ಮೇ 5ರಂದು ಮುಂದಿನ ವಿಚಾರಣೆ ನಡೆಯಲಿದೆ. ಅಲ್ಲಿಯವರೆಗೆ ಈ ಯಾವುದೇ ಅಂಶವನ್ನು ಜಾರಿಗೆ ತರುವುದಿಲ್ಲ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅನಿವಾರ್ಯವಾಗಿ ಭರವಸೆ ಕೊಡಬೇಕಾಯಿತು.

ತಿದ್ದುಪಡಿ ಕಾಯ್ದೆಗೆ ನ್ಯಾಯಾಲಯವು ತಡೆ ನೀಡಿದೆ ಎಂದು ಹೇಳಲಾಗದು. ಆದರೆ, ಕಾಯ್ದೆಯಲ್ಲಿ ಇರುವ ಕೆಲವು ಅಂಶಗಳ ಜಾರಿಯು ನಿರ್ದಿಷ್ಟ ಅವಧಿಯವರೆಗೆ ಸಾಧ್ಯವಿಲ್ಲ. ನ್ಯಾಯಾಲಯಕ್ಕೆ ಬೇಕಿದ್ದ ಭರವಸೆಯನ್ನು ನೀಡುವ ಮೂಲಕ ತಡೆಯಿಂದ ತಪ್ಪಿಸಿಕೊಳ್ಳುವಲ್ಲಿ ಸರ್ಕಾರ ಯಶಸ್ವಿಯಾಗಿದೆ. ಸರ್ಕಾರಕ್ಕೆ ಇನ್ನಷ್ಟು ಸಮಯ ಬೇಕಿತ್ತು. ಅದಕ್ಕಾಗಿ ಎರಡನೇ ದಿನದ ವಿಚಾರಣೆಯ ಸಂದರ್ಭದಲ್ಲಿ ವಿಚಾರಣೆ ಮುಂದೂಡುವಂತೆ ಮನವಿ ಮಾಡಿದೆ. ಲಿಖಿತ ಹೇಳಿಕೆಗಳನ್ನು ಸಲ್ಲಿಸಬೇಕಿರುವುದರಿಂದ ಸಮಯ ಬೇಕು ಎಂಬ ಕಾರಣ ಕೊಟ್ಟಿದೆ. ಸಾಂವಿಧಾನಿಕವಾಗಿ ಮತ್ತು ಪ್ರಾಯೋಗಿಕವಾಗಿ ಕಾಯ್ದೆಯ ಪರಿಣಾಮಗಳ ಕುರಿತು ನ್ಯಾಯಪೀಠವು ಆರಂಭದಲ್ಲಿಯೇ ಪ್ರಶ್ನೆಗಳನ್ನು ಎತ್ತಿತು. ಹಾಗಾಗಿ, ನ್ಯಾಯಾಲಯವು ಸರ್ಕಾರದ ನಿಲುವಿಗೆ ಪೂರಕವಾಗಿ ಇಲ್ಲ ಎಂಬುದು ಆರಂಭದಲ್ಲಿಯೇ ಸ್ಪಷ್ಟವಾಗಿತ್ತು. ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ, ನ್ಯಾಯ ಮೂರ್ತಿಗಳಾದ ಸಂಜಯ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠವು ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿದೆ.

> **ಮುಸ್ಲಿಂ ಸಮುದಾಯ, ಸಮುದಾಯದ ಸಂಘಟನೆಗಳು ಕಾಯ್ದೆಯ ಕೆಲವು ಅಂಶಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿವೆ. ಇತರರು ಕೂಡ ಕಾಯ್ದೆಯ ಈ ಅಂಶಗಳ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ಸಂವಿಧಾನವು ನೀಡಿರುವ ಸಮಾನತೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿಗೆ ಈ ಅಂಶಗಳು ವ್ಯತಿರಿಕ್ತವಾಗಿವೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.**

ಹಿಂದೂ ಧಾರ್ಮಿಕ ಟ್ರಸ್ಟ್‌ಗಳು, ದತ್ತಿಗಳಿಗೆ ಹಿಂದೂಯೇತರರನ್ನು ಸದಸ್ಯರನ್ನಾಗಿ ನೇಮಕ ಮಾಡಲು ಸರ್ಕಾರ ಸಿದ್ಧವಿದೆಯೇ ಎಂಬ ಪ್ರಶ್ನೆಯನ್ನು ನ್ಯಾಯಪೀಠವು ಕೇಳಿದೆ. ವಕ್ಫ್ ಕಾನೂನು ಸುಧಾರಣೆಯು ಸರ್ಕಾರದ ಉದ್ದೇಶ ಅಲ್ಲ; ಬದಲಿಗೆ ವಕ್ಫ್ ಮೇಲೆ ನಿಯಂತ್ರಣ ಹೇರಿ, ಅದರ ನಿರ್ವಹಣೆಯನ್ನು ಕೈಗೆ ತೆಗೆದುಕೊಳ್ಳುವುದು ಅದರ ಉದ್ದೇಶ ಎಂಬ ಸಂದೇಹಕ್ಕೆ ಇವೆಲ್ಲವೂ ಕಾರಣವಾಗಿವೆ. ವಕ್ಫ್ ಆಸ್ತಿಯ ನಿರ್ವಹಣೆಯ ಹೆಸರಿನಲ್ಲಿ ಎಲ್ಲಾ ಆಸ್ತಿಯನ್ನು ಸರ್ಕಾರ ವಶಕ್ಕೆ ಪಡೆಯಬಹುದು ಎಂಬ ಆತಂಕವು ಮುಸ್ಲಿಂ ಸಮುದಾಯದಲ್ಲಿ ಇದೆ. ಮಸೂದೆ ರಚನೆಗೆ ಮುನ್ನ ಸಮುದಾಯದ ಜೊತೆಗೆ ಸಮಾಲೋಚನೆ ನಡೆಸಿಲ್ಲ. ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಒಪ್ಪಿಸಲಾಗಿತ್ತು. ಆದರೆ, ಇಲ್ಲಿ ಅರ್ಥಪೂರ್ಣವಾದ ಸಮಾಲೋಚನೆ ನಡೆಯಲೇ ಇಲ್ಲ. ವಿರೋಧ ಪಕ್ಷಗಳ ಸದಸ್ಯರು ಮುಂದಿಟ್ಟ ಯಾವುದೇ ಶಿಫಾರಸನ್ನು ಮಸೂದೆಗೆ ಸೇರಿಸಿಕೊಂಡಿಲ್ಲ. ಕಾಯ್ದೆಯಲ್ಲಿ ಕೆಲವು ಉತ್ತಮ ಅಂಶಗಳೂ ಇವೆ ಎಂಬುದನ್ನು ನ್ಯಾಯಾಲಯ ಗುರುತಿಸಿದೆ. ಈ ಅಂಶಗಳನ್ನು ಉಳಿಸಿಕೊಳ್ಳಬೇಕು ಎಂದೂ ಹೇಳಿದೆ. ಆದರೆ, ವಿವಾದಾತ್ಮಕವಾದ ಎಲ್ಲಾ ಅಂಶಗಳನ್ನು ಗಂಭೀರ ಪರಿಶೀಲನೆಗೆ ಒಳಪಡಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಿದೆ.

---

# ರಾಮಾಯಣ



## ಅಯೋಧ್ಯಾ ಪಟ್ಟಣದಲ್ಲಿ ಅಪಶಕುನಗಳುಂಟಾದದ್ದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಪುರುಷೋತ್ತಮನಾದ ಶ್ರೀರಾಮನು ಕೈಮುಗಿದುಕೊಂಡು ವನಕ್ಕೆ ತೆರಳಿದ ಮೇಲೆ ಅಂತಃಪುರದಲ್ಲಿದ್ದ ಸ್ತ್ರೀಯರು ಒಬ್ಬರಿಗೊಬ್ಬರು ಅಕಟಕಟಾ ತಪಸ್ವಿವೇಷವನ್ನು ಧರಿಸಿಕೊಂಡು ವನಕ್ಕೆ ತೆರಳುವ ಶ್ರೀರಾಮನಿಗೆ ಗತಿಯಾವುದು ಆತನಿಗೆ ರಕ್ಷಕರಾರು ಆತನು ಎಲ್ಲಿಗೆ ಹೋಗುವನು ಆತನು ತನ್ನನ್ನು ಬೈದರೂ ಒಬ್ಬರಮೇಲೆ ಕೋಪಿಸುವವನಲ್ಲ. ಒಬ್ಬರಿಗೆ ಕೋಪಹುಟ್ಟುವ ವಚನಗಳನ್ನು ನುಡಿಯುವವನಲ್ಲ. ಯಾರಾದರೂ ಅಜ್ಞಾನದಿಂದ ಕೋಪಿಸಿ ಕೊಂಡಿದ್ದರೆ ಅವರ ಸುಖದುಃಖಗಳನ್ನು ತನ್ನದಾಗಿ ಭಾವಿಸಿ ಕೋಪಶಾಂತಿಯನ್ನು ಮಾಡುವನು. ಆ ಮಹಾತ್ಮನು ಕೌಸಲ್ಯಾದೇವಿಯಲ್ಲಿ ಹೇಗೆ ವಿಶ್ವಾಸಭಕ್ತಿಗಳಿಂದ ನಡೆಯುವನೋ ಹಾಗೆಯೇ ನಮ್ಮಲ್ಲಿಯೂ ವಿಶ್ವಾಸಭಕ್ತಿಗಳಿಂದ ನಡೆಯುವನು. ಕೈಕೇಯಾದೇವಿಯ ಮಾತಿಗೆ ಮರುಳಾದ ದಶರಥರಾಯನು ಅಂಥವನನ್ನು ವನಕ್ಕೆ ಕಳುಹಿಸಿದನು. ಶ್ರೀರಾಮನು ಸಮಸ್ತ ಲೋಕಗಳಿಗೂ ಸಮಸ್ತ ಜನರಿಗೂ ರಕ್ಷಕನು. ಅಯ್ಯೋ ದಶರಥರಾಯನು ಸತ್ಯಸಂಧನೂ ಸಮಸ್ತ ಪ್ರಾಣಿಗಳಿಗೂ ಲೋಕಕ್ಕೂ ಪ್ರಿಯವನ್ನೇ ಮಾಡುವವನೂ ಅತ್ಯಂತ ಕೀರ್ತಿವಂತನೂ ಆದ ಶ್ರೀರಾಮನನ್ನು ವನಕ್ಕೆ ಕಳುಹಿಸಿ ಪುತ್ರವಿಯೋಗದುಃಖದಿಂದ ಚೈತನ್ಯಗುಂದಿದನು ಎಂದು ನುಡಿಯುತ್ತ ಕರುವನ್ನು ಕಾಣದ ಹಸುವಿನಂತೆ ಗೋಳಾಡುತ್ತಾ ಅಳುತ್ತಿದ್ದರು.

ಆ ಸ್ತ್ರೀಯರ ರೋದನಧ್ವನಿಯನ್ನು ಕೇಳಿ ದಶರಥರಾಯನು ಅತ್ಯಂತ ದುಃಖಿತನಾದನು. ಗೃಹಸ್ಥರು ಅಡಿಗೆಯನ್ನೂ ಮಾಡಲಿಲ್ಲ. ಸೂರ್ಯನೂ ಅಸ್ತಂಗತನಾದನು. ಅಯೋಧ್ಯಾ ಪಟ್ಟಣದಲ್ಲಿ ಅನೇಕ ಅದ್ಭುತಗಳಾದವು! ಆನೆಗಳು ಕವಳಗಳನ್ನು ಬಿಟ್ಟವು. ಹಸುಗಳು ಕರುಗಳಿಗೆ ಹಾಲು ಕುಡಿಯಿಸಲಿಲ್ಲ. ಅಂತರಿಕ್ಷಮಾರ್ಗದಲ್ಲಿ ತ್ರಿಶಂಕು ಎಂಬ ನಕ್ಷತ್ರವೂ ಮಂಗಳನೂ ಬುಧನೂ ಬೃಹಸ್ಪತಿಯೂ ಚಂದ್ರನಿರುವ ರಾಶಿಗೆ ಬರುತ್ತಿದ್ದುವು. ಸಮಸ್ತ ನಕ್ಷತ್ರಗಳೂ ಆದಿತ್ಯಾದಿ ಗ್ರಹಗಳೂ ಕಾಂತಿಗುಂದಿದುವು. ವಿಶಾಖಾನಕ್ಷತ್ರಗಳು ಧೂಮಸಹಿತವಾಗಿ ಭಯಂಕರವಾಗಿ ತೋರುತ್ತಿದ್ದುವು. ಪ್ರಳಯಕಾಲದ ಚಂಡವಾಯುವಿನ ವೇಗದಿಂದ ಸಮುದ್ರವು ಅಲ್ಲೋಲ ಕಲ್ಲೋಲವಾಗುವಂತೆ ಅಯೋಧ್ಯಾ ಪಟ್ಟಣವು ತಲ್ಲಣಿಸಿತು. ಸಮಸ್ತ ದಿಕ್ಕುಗಳೂ ಅಂಧಕಾರಾ ಕ್ರಾಂತವಾದವು. ಇದ್ದಕ್ಕಿದ್ದಹಾಗೆ ಅಯೋಧ್ಯಾಪಟ್ಟಣದಲ್ಲಿದ್ದ ಜನರು ದೈನ್ಯಭಾವವನ್ನೈದಿದರು. ಆಹಾರ ಕ್ರೀಡೆಗಳಲ್ಲಿ ಒಬ್ಬರೂ ಮನಸ್ಸಿಡಲಿಲ್ಲ. ಸಮಸ್ತ ಜನರೂ ಶೋಕಾಗ್ನಿಯಿಂದ ಪರಿತಪಿಸಿ ಷಾರುಳಾಗಿದ್ದರು. ಅಯೋಧ್ಯಾಪಟ್ಟಣದ ಸಮಸ್ತ ಜನರೂ ಶ್ರೀರಾಮನನ್ನು ನೆನೆದು ಕಣ್ಣೀರನ್ನು ಬಿಡಾತ್ತ ವ್ಯಾಕುಲಚಿತ್ತರಾಗಿದ್ದತು. ಒಬ್ಬರಾದರೂ ಸಂತೋಷಚಿತ್ತರಾಗಿರಲಿಲ್ಲ. ತಂಗಾಳಿಯು ಬೀಸಲಿಲ್ಲ.. ಚಂದ್ರನೂ. ತಂಪಾಗಿ ತೋರಲಿಲ್ಲ. ಜಗತ್ತೆಲ್ಲವೂ ವ್ಯಾಕುಲವಾಗಿಯೇ ಇತ್ತು.

**ಸ್ತ್ರೀಯರು ಪುರುಷರನ್ನಾ:** ಬಯಸಲಿಲ್ಲ. ಪುರುಷಶು ಸ್ತ್ರೀಯರನ್ನು ಬಯಸಿಲ್ಲ. ಈ ಒಬ್ಬರೊಡ ನೊಬ್ಬರೂ ಮಾತನಾಡಲಿಲ್ಲ. ಸಮಸ್ತ ಜಗತ್ತೂ ಶ್ರೀಪಾಮಾನನ್ನೇ ಬಯಸಾಪ್ರಿಫ್ಟಾ ಅದರೊಳಗೂ ಶ್ರೀರಾಮನ ಸ್ನೇಹಿತರು ಶೋಕಧಾರಾಶ್ರಾಂಶಥಾಗಿ ಈ ರೀತಿಯಲ್ಲಿ ಪಟ್ಟಣವು ದೇವೇಂದ್ರನಿಲ್ಲದ ಅಮರಾವತೀ ಪಟ್ಟಣದಂತೆ ಭಯಂಕರವಾಗಿ ಸಮಸ್ತ ಪರ್ವತ ಕ್ಷಗಳ ಸಹಿತವಾಗಿ ಗೋಳಿಡುತ್ತಿತ್ತು.

**ದಶರಥರಾಯನ ಪ್ರಲಾಪ:** ಆಮೇಲೆ ದಶರಥರಾಯನು ವನವಾಸಕ್ಕೆ ತೆರಳುತ್ತಿ ಶ್ರೀರಾಮನನ್ನು ಕಾಣುವವರೆಗೂ ದೃಷ್ಟಿಯನ್ನು ತಿರುಗಿಸದೆ ನೋಡುತ್ತಿದ್ದನು. ಕೊನೆಗೆ ಅತ್ಯಂತ ಧರ್ಮಿಷ್ಠನಾದ ಆ ಕುಮಾರನ ರಥವು ನಡೆಯುತ್ತಿದ್ದ ಭೂಮಿಯಿಂದೆದ್ದ ಕೆಂಧೂಳಿಯು ಕಾಣಿಸದೆಹೋದಮೇಲೆ ದೃಷ್ಟಿಯನ್ನು ತಿರುಗಿಸಿ ದುಃಖಾತಿಶಯದಿಂದ ಮೂರ್ಛಿತನಾಗಿ ಬಿದ್ದನು.

ಆಗ ಕೌಸಲ್ಯಾದೇವಿಯು ಬಲದ ಭಾಗಕ್ಕೆ ಬಂದು ಆತನನ್ನು ಹಿಡಿದುಕೊಳ್ಳಲು ಕೈಕೇಯಾ ದೇವಿಯು ವಾಮಭಾಗಕ್ಕೆ ಬಂದು ಹಿಡಿದಳು. ದಶರಥರಾಯನು ಮೂರ್ಛೆಯನ್ನು ತಿಳಿದು ವ್ಯಥೆಪಡುತ್ತ ಕೈಕೇಯಾದೇವಿಯನ್ನು ನೋಡಿ ನೀನು ನನ್ನ ಶರೀರವನ್ನು ಮುಟ್ಟಬೇಡ. ನೀನು ಅತ್ಯಂತ ದುಷ್ಟಚರಿತ್ರಳು. ನಾನು ಇದು ಮೊದಲಾಗಿ ನಿನ್ನ ಮುಖವನ್ನು ನೋಡೆನು.


ಮುಂದುವರಿಯುವುದು...


---

# ಹಸಿವು ನೀಗಲು ಅನ್ನದೇವರ ಮುಂದೆ ಅನ್ಯ ದೇವರಿಲ್ಲ




ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ


ಅನ್ನವೇ ದೇವರು, ಅನ್ನವೇ ಪರಬ್ರಹ್ಮ .84 ಕೋಟಿ ಜೀವರಾಶಿಗಳಿಗೂ ಆಹಾರಬೇಕು .ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ ಭೂಮಿಯ ಮೇಲೆ ವಾಸ ಮಾಡುವ ಪ್ರತಿಯೊಂದು ಜೀವರಾಶಿಗೂ ಅನ್ನ ಬೇಕೇ ಬೇಕು .ರೈತರು ಬೆವರು ಸುರಿಸಿ ದುಡಿದಾಗ ಮಾತ್ರ ಆಹಾರ ಧಾನ್ಯ ಬೆಳೆಯಬಹುದು ಮತ್ತು ಅದರಿಂದ ಹಸಿವನ್ನು ಹಿಂಗಿಸಿಕೊಳ್ಳ ಬಹುದು, ಹಸಿದವರಿಗೆ ಮಾತ್ರ ಗೊತ್ತು ಅನ್ನದ ಬೆಲೆ .

ಕೂಡಿಟ್ಟ ಕೋಟಿ ಕೋಟಿ ಹಣವನ್ನು ಕೋಟೆಕಟ್ಟಿ ಇಡಲು ನೂರೆಂಟು ಯೋಚನೆಗಳನ್ನು ಯೋಜನೆಗಳನ್ನು ಮಾಡಿ, ಎಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೋ ಎಂದು ಭಯಬೀತರಾಗಿ ಚಿಂತೆಯ ಬದುಕನ್ನು ತಬ್ಬಿ ಕೊಳ್ಳುತ್ತಾರೆ .ಎಷ್ಟೇ ಕೂಡಿಟ್ಟರು ಹಸಿವೆಗೆ ಅನ್ನ ತಿನ್ನಬಹುದೇ ಹೊರತು ದುಡ್ಡು ಚಿನ್ನ ತಿನ್ನಲು ಬರುವುದಿಲ್ಲ. ಅಟ್ಟಿ ತಿನ್ನದ ಜೀವ ಸಂಕುಲವೇ ಇಲ್ಲವೆನ್ನುವುದಕ್ಕೆ ಚೀನಾ ದೇಶದ ಜನರ ಹಸಿವೆ ಸಾಕ್ಷಿ ಮಾನಸಿಕವಾಗಿ ಹಸಿದವನಿಗೆ ಏನು ತಿಂದರೂ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ .

ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಪ್ರಪಂಚದಲ್ಲಿ ಹಸಿವು ಎಂಬ ಭೀಕರ ರೋಗದಿಂದ ಬಳಲುತ್ತಿರುವವರ ಸಂಖ್ಯೆ 820 ಮಿಲಿಯನ್, ಭಾರತದಲ್ಲಿ ಪ್ರತಿನಿತ್ಯ 18000 ಮಕ್ಕಳು ಹಸಿವಿನಿಂದ ಕಣ್ಣು ಮುಚ್ಚುತ್ತಿವೆ, ಸುಮಾರು 85 ಲಕ್ಷ ಮಂದಿ ಮಕ್ಕಳು ಒಂದು ಹೊತ್ತಿನ ಊಟ ಇಲ್ಲದೆ ದಿನ ಮುಗಿಸುತ್ತಾರೆ. ಅಂದರೆ ಪ್ರಪಂಚದಲ್ಲಿ ಇಂದು ಹೆಚ್ಚು ಜನ ಸಾಯುತ್ತಿರುವುದು ಹಸಿವಿನಿಂದ ಎಂದರೆ ಆಶ್ಚರ್ಯ ಆಗಲಾರದು. ಈ ಹೊಟ್ಟೆಯನ್ನು ತುಂಬಿಸಲು ದಿನಂಪ್ರತಿ ಹೆಣಗಬೇಕಾದದ್ದು ಸತ್ಯವಾಗಿದೆ, ಕೂತು ತಿಂದರೆ ಕುಡಿಕೆ ಹೊನ್ನು ಸಾಲದು ಎಂಬ ಗಾದೆಯಂತೆ ಹೊಟ್ಟೆ ತುಂಬಿದ ನಂತರ ಅಥವಾ ತುಂಬಿಸಿಕೊಳ್ಳಲು ಕೆಲಸವನ್ನು ಮಾಡುತ್ತಾ ಆರೋಗ್ಯವನ್ನು ಸದೃಢವಾಗಿ ಇರಿಸಿಕೊಳ್ಳುವಲ್ಲಿ ಈ ಗಾದೆಮಾತು ನೆನಪಿಸುತ್ತದೆ. ಜ್ಞಾನದ ವಿದ್ಯೆ ಹಸಿವು ನಿರಂತರವಾದದ್ದು, ವಯೋಮಿತಿಯ ನಿರ್ಬಂಧವಿಲ್ಲ, ಇನ್ನೂ ತಿಳಿದುಕೊಳ್ಳಬೇಕು ಎಂಬ ಹಸಿವು ಅಪೇಕ್ಷಣೀಯ.



ಸಂಪಾದನೆಯ ಹಸಿವು ಇರಬೇಕು ಅದು ಮಿತಿಯಲ್ಲಿರಬೇಕು, ತನ್ನ ಸಂಪಾದನೆಯಲ್ಲಿ ಕೆಲವು ಭಾಗವನ್ನಾದರೂ ಧರ್ಮಕಾರ್ಯಗಳಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ಅನಾಥಾಶ್ರಮಗಳಿಗೆ ಕೊಡಬೇಕು ,ಕೊಟ್ಟದ್ದು ಪರರಿಗೆ ತಿಳಿಯಬಾರದು, ಪುನೀತ್ ರಾಜಕುಮಾರ್ ಉತ್ತಮ ಉದಾಹರಣೆ ಆದರೂ' ತಾನೂ ಉಣ್ಣ ಪರರಿಗೂ ಕೊಡ' ಎನ್ನುವಂತಾದರೆ ಅವನನ್ನು ಧನಪಿಶಾಚಿ ,ಜಿಪುಣ ಎನ್ನುವರು. ಆಡಳಿತಗಾರರಿಗೆ ಜನತೆಯ ಹಿತದ ಹಸಿವು ಇರಬೇಕು ಸ್ವಾರ್ಥಕ್ಕೆ ಎಡೆ ಆಗಬಾರದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು, ಆದರೆ ಈಗ ಪ್ರತಿನಿಧಿಗಳೇ ಪ್ರಜೆಗಳು, ಕೇವಲ 'ಮತದಾರ ಪ್ರಭುಗಳು' ಪ್ರತಿನಿಧಿಗಳು ಜನ ಪರವಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಹಸಿವು ಹೊಂದಿರಬೇಕು. ಕೀರ್ತಿಗಾಗಿ ಹಸಿವನ್ನು ಹೊಂದಬೇಕು, ಕೀರ್ತಿ ಪ್ರಸಿದ್ಧಿ ಒಂದೇ ಅರ್ಥವಲ್ಲ, ದೇಶದ ನಾಯಕನನ್ನು ಕೊಂದವನೂ ಪ್ರಸಿದ್ಧಿ ಹೊಂದುವನು ,ಅದು ಕೀರ್ತಿಯಲ್ಲ ಯಾವುದೇ ವ್ಯಕ್ತಿ ತನ್ನ ಶಕ್ತಿ ಸಾಮರ್ಥ್ಯ, ಪ್ರತಿಭೆ , ತ್ಯಾಗ ಮನೋಭಾವ ಚಾಕಚಕ್ಯತೆ ಕುಶಲತೆ ಅಗಾಧ ಜ್ಞಾನ ಇವುಗಳಿಂದ ಕೀರ್ತಿ ತನ್ನಿಂದ ತಾನೇ ಬರುತ್ತದೆ .

ಹೀಗಾಗಿ ಹಸಿವು ಮಾನವನ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ಗಳಿಸಿದೆ, ಮಾನವ ತನ್ನ ಹುಟ್ಟಿನಿಂದ ತೊಡಗಿ ಮರಣದವರೆಗೆ ಹಸಿವಿನ ನಂಟು ಅವನ ಜೊತೆ ಜೊತೆಯಲ್ಲಿ ಪಯಣಿಸುತ್ತಲೇ ಇರುತ್ತದೆ, ಕೊನೆಯದಾಗಿ ಉಲ್ಲೇಖಿಸಲೇ ಬೇಕಾದ ವಿಷಯವೆಂದರೆ ಸಭೆ-ಸಮಾರಂಭಗಳಲ್ಲಿ, ಔತಣ ಕೂಟಗಳಲ್ಲಿ ನಾವು ಭಾರತೀಯರು ಸಾಕಷ್ಟು ಆಹಾರ ಪದಾರ್ಥಗಳನ್ನು ಮಾಡುತ್ತೇವೆ ಮಾಡುವುದನ್ನು ನಿಲ್ಲಿಸಿ ಹಿತಮಿತವಾಗಿ ಬಳಸಿ ಮಿಕ್ಕಿದ್ದನ್ನು ಉಳಿಸಿ, ಹಸಿದ ಹೊಟ್ಟೆಗೆ ಅದನ್ನು ನೀಡಿದಲ್ಲಿ ಪ್ರಯೋಜನ ವಾಗಿ ಅನೇಕ, ಹಸಿದವರಿಗೆ ಸಿಗಬಹುದು, ಈ ನಿಟ್ಟಿನಲ್ಲಿ ನಾವೆಲ್ಲ ಯೋಚನೆ ಮಾಡಬೇಕಿದೆ, ಮುಂದಿನ ದಿನಗಳಲ್ಲಿ ಹೀಗಾಗಲೆಂದು ಬಯಸೋಣವೇ.

---

# ಮಾರ್ಗದರ್ಶನಕ್ಕೆ ನಾನು ನಿಜವಾಗಿಯೂ ಕೃತಜ್ಞನು



- 6 ವಿದ್ಯಾರ್ಥಿಗಳು AIR 1,000 ಒಳಗಡೆ ಸ್ಥಾನ ಗಳಿಸಿದ್ದಾರೆ
- 10 ವಿದ್ಯಾರ್ಥಿಗಳು ೦AIR 2,000 ಒಳಗಡೆ ಸ್ಥಾನ ಗಳಿಸಿದ್ದಾರೆ
- 21 ವಿದ್ಯಾರ್ಥಿಗಳು AIR 5,000 ಒಳಗಡೆ ಸ್ಥಾನಗಳಿಸಿದ್ದಾರೆ
- 32 ವಿದ್ಯಾರ್ಥಿಗಳು AIR 10,000 ಒಳಗಡೆ ಸ್ಥಾನ ಗಳಿಸಿದ್ದಾರೆ
- 29 ವಿದ್ಯಾರ್ಥಿಗಳು 99ಕ್ಕಿಂತ ಜಾಸ್ತಿ ಪರ್ಸೆಂಟೈಲ್ ಅಂಕಗಳನ್ನು ಪಡೆದಿದ್ದಾರೆ
- 203 ವಿದ್ಯಾರ್ಥಿಗಳು ಎಇಇ ಅಡ್ವಾನ್ಸ್ಡ 2025 ಗೆ ಅರ್ಹತೆ ಪಡೆದಿದ್ದಾರೆ

ಜೇಇಇ 2025 ಫಲಿತಾಂಶಗಳು: ದೀಕ್ಷಾ ವೇದಾಂತು ವಿದ್ಯಾರ್ಥಿಗಳು ಮತ್ತೊಮ್ಮೆ ತಮ್ಮ ಅಪರೂಪದ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ತಿಳಿಸಿದ್ದಾರೆ. ಕರ್ನಾಟಕ ಪಿಯು ಪರೀಕ್ಷೆಯಲ್ಲಿ ಟಾಪ್ 10 ಸ್ಥಾನಗಳಲ್ಲಿ 15 ವಿದ್ಯಾರ್ಥಿಗಳನ್ನು ಪಡೆದ ನಂತರ, ದೀಕ್ಷಾ ವೇದಾಂತು ವಿದ್ಯಾರ್ಥಿಗಳು ಜೇಇಇ 2025 ನಲ್ಲಿ ಗಮನಾರ್ಹ ಸಾಧನೆ ಸಾಧಿಸಿದ್ದಾರೆ.

ಬೆಂಗಳೂರು ನಗರದ ದೀಕ್ಷಾ ವೇದಾಂತು ಮುಖ್ಯ ಕ್ಯಾಂಪಸ್‌ನ ವಿದ್ಯಾರ್ಥಿ ಕೇತನ್ ಹೆಗಡೆ (AIR 860) ತಮ್ಮ ಪ್ರಯಾಣದ ಬಗ್ಗೆ ಹೀಗೆ ಪ್ರತಿಕ್ರಿಯಿಸಿದ್ದಾರೆ ನನ್ನ ಅಂಕಗಳನ್ನು ನೋಡಿ ನನಗೆ ಸಂತೋಷವಾಗಿದೆ, ದೀಕ್ಷಾ ವೇದಾಂತು ನೀಡಿದ ನಿರಂತರ ಬೆಂಬಲ, ಪರಿಣಿತ ಮಾರ್ಗದರ್ಶನಕ್ಕೆ ನಾನು ನಿಜವಾಗಿಯೂ ಕೃತಜ್ಞನು.

ಸಂರಚಿತ ಅಧ್ಯಯನ ವಿಧಾನ, ಪರೀಕ್ಷಾ- ನಿರ್ದಿಷ್ಟ ತಯಾರಿ ತಂತ್ರಗಳು, ಸಮಗ್ರ ವಸ್ತು ವಿಶೇಷವಾಗಿ NCERT, KNOWVO ಆ್ಯಪ್‌ಗಳ ಸಂಯೋಜನೆ ನನಗೆ ಬಲವಾದ ನೆರವನ್ನು ನೀಡಿತು. ಕ್ಯಾಂಪಸ್‌ನಲ್ಲಿ ವಾಸಿಸುವುದರಿಂದ ಮಾರ್ಗದರ್ಶಕರೊಂದಿಗೆ ಸಮೀಪ ಸಂಪರ್ಕದಲ್ಲಿರಲು ಸಹಾಯವಾಯಿತು, ನಿಯಮಿತ ಮಾಕ್ ಪರೀಕ್ಷೆಗಳು ನನ್ನ ಪರೀಕ್ಷೆಯಲ್ಲಿ ಉತ್ತಮಗೊಳಿಸಲು ಪರಿಣಾಮಕಾರಿಯಾಗಿದ್ದವು.

**ಉತ್ತಮ ಸಾಧಕರು**

- ಧನುಷ್ ಕುಮಾರ್ ಎ (AIR 143)
- ಹೃಷಿಕೇಶ್ ಎಲ್ (AIR 355)
- ಕೇತನ್ ಹೆಗಡೆ (AIR 860)
- ಸಂಹಿತ್ ರಾವ್ (AIR 907)
- ವರ್ಚಸ್ ಜಾಸ್ತಿ (AIR 925)
- ಎನ್ ರೋಹಿತ್ (AIR 965)


**ದೀಕ್ಷಾ ವೇದಾಂತು ಸಂಸ್ಥೆಯ ಸ್ಥಾಪಕ ಡಾ. ಶ್ರೀಧರ್ ಜಿ ಅವರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಹೀಗೆ ಹೇಳಿದರು:** ಇದು ದೀಕ್ಷಾ ವೇದಾಂತುವಿನ ಹೆಮ್ಮೆಯ ಕ್ಷಣವಾಗಿದೆ. ಈ ಯಶಸ್ಸು ನಿರಂತರ ವಿದ್ಯಾರ್ಥಿ ಪ್ರಯತ್ನ, ನಿಖರವಾದ ಶೈಕ್ಷಣಿಕ ಮಾರ್ಗದರ್ಶನ, ಕಾಲಪರೀಕ್ಷಿತ ಪಾಠ ಮತ್ತು ಮೌಲ್ಯಮಾಪನ ವ್ಯವಸ್ಥೆ, ತಂತ್ರಜ್ಞಾನದ ಸಮಗ್ರ ಸಂಯೋಜನೆಯ ಫಲವಾಗಿದೆ.

ಎಇಇ ನೀಡುವ ಶೈಕ್ಷಣಿಕ ತೀವ್ರತೆಯಲ್ಲಿ ಗಮನವನ್ನು ಕಾಪಾಡಿಕೊಳ್ಳುವುದು ಸುಲಭದ ಕೆಲಸವಲ್ಲ, ನಮ್ಮ ವಿದ್ಯಾರ್ಥಿಗಳ ಶ್ರಮ ಮತ್ತು ಸಮರ್ಪಣೆಯನ್ನು ನಾನು ಅಭಿನಂದಿಸುತ್ತೇನೆ. 25 ವರ್ಷಗಳಿಗಿಂತ ಹೆಚ್ಚು ಕಾಲ, ದೀಕ್ಷಾ ವೇದಾಂತು JEE, NEET ಮತ್ತು KCET ತರಬೇತಿಯಲ್ಲಿ ಅತ್ಯುತ್ತಮತೆಯ ಸಂಕೇತವಾಗಿ ನಿಂತಿದೆ.

JEE ಮೆನ್ 2025 ಫಲಿತಾಂಶಗಳು ದೀಕ್ಷಾ ವೇದಾಂತು ಅವರ ಖ್ಯಾತಿಯನ್ನು ಭಾರತದ ಅತ್ಯಂತ ನಂಬಿಗಸ್ತ, ಫಲಿತಾಂಶೋತ್ತಮ ಶೈಕ್ಷಣಿಕ ಸಂಸ್ಥೆಗಳಲ್ಲೊಂದು ಎಂದು ಮತ್ತೊಮ್ಮೆ ದೃಢಪಡಿಸಿವೆ. ಈಗ JEE ಅಡ್ವಾನ್ಸ್ಡ 2025 ಕಡೆ ತೀವ್ರವಾದ ಗಮನ ಹರಿಸಲು ದೀಕ್ಷಾ ವೇದಾಂತು ಸಿದ್ಧವಾಗಿದೆ, ಉತ್ತಮ ಫಲಿತಾಂಶಗಳ ನಿರೀಕ್ಷೆಯಲ್ಲಿದೆ.

---

# ರಾಷ್ಟ್ರೀಯ ಮಟ್ಟದ ಹ್ಯಾಕಥಾನ್





ಜೈನ್ (ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ), ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗವು ಇನ್ಸೆಪ್ಟ್ರಿಸ್ INCEPTRIX 2025 ಅನ್ನು ಘೋಷಿಸಿದೆ - ಇದು ಮೇ 89, 2025 ರಂದು ಕನಕಪುರದ ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ 24 ಗಂಟೆಗಳ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್ ಆಗಿದೆ. ಬುದ್ಧಿವಂತ ನಾವೀನ್ಯತೆಯ ಮೂಲಕ ನಾಳೆಯ ಜಗತ್ತನ್ನು ರೂಪಿಸುವುದು ಎಂಬ ಥೀಮ್‌ನೊಂದಿಗೆ, ಈ ಕಾರ್ಯಕ್ರಮವು ಎಲ್ಲಾ ವಿಭಾಗಗಳ ಯು ಜಿ/ಪಿ ಜಿ ವಿದ್ಯಾರ್ಥಿಗಳನ್ನು ಸೃಜನಶೀಲ ತಾಂತ್ರಿಕ ಪರಿಹಾರಗಳನ್ನು ಪ್ರದರ್ಶಿಸಲು ಆಹ್ವಾನಿಸುತ್ತದೆ. ತಂಡಗಳು (45 ಸದಸ್ಯರು, ಕನಿಷ್ಠ ಒಬ್ಬ ಮಹಿಳೆ) ತಜ್ಞರ ಮಾರ್ಗದರ್ಶನ, ನೆಟ್‌ವರ್ಕಿಂಗ್‌ನಿಂದ ಪ್ರಯೋಜನ ಪಡೆಯುತ್ತವೆ, 1,75,000 ಮೌಲ್ಯದ ಬಹುಮಾನಗಳಿಗಾಗಿ ಸ್ಪರ್ಧಿಸುತ್ತವೆ. ನೋಂದಣಿಗಳು, ಪಿಪಿಟಿ ಸಲ್ಲಿಕೆಗಳು ಏಪ್ರಿಲ್ 1020, 2025 ರಿಂದ ತೆರೆದಿರುತ್ತವೆ. ಅಂತಿಮ ಸ್ಪರ್ಧಿಗಳನ್ನು ಏಪ್ರಿಲ್ 25 ರಂದು ಘೋಷಿಸಲಾಗುತ್ತದೆ. ಡೆಲ್, ಶೆಲ್, ಇತರ ಕಂಪನಿಗಳ ಉದ್ಯಮ ಮುಖಂಡರು ತೀರ್ಪು ನೀಡುತ್ತಾರೆ.

**ನೋಂದಾಯಿಸಿ:** HTTPS://INCEPTRIX2025.XYZ
**ಸಂಪರ್ಕಿಸಿ:** TECHCOUNCIL.FET@JAINUNIVERSITY.AC.IN
91 8296019911, 91 9557562499, 91 8310228282.

---

## ದಿನಕ್ಕೊಂದು ಮುಕ್ತಕ -87





ಹೆಚ್.ಎಸ್. ಪ್ರತಿಮಾ


**ಕನ್ನಡಾಂಬೆಯ ಮಗಳು ಹಾಸನದ ಕವಯಿತ್ರಿ**
**ಚೆನ್ನಿಗನ ಕರುಣದಲಿ ಕಾವ್ಯ ರಚಿಪೆ**
**ಹೊನ್ನಂತೆ ರಂಜಿಸಲಿ ಕವಿ ಕಾವ್ಯ ಕಮ್ಮಟದಿ**
**ಧನ್ಯಳಾಗುವೆ ಅಂದು ಲಕ್ಷ್ಮಿದೇವಿ...**

**ಭಾವಾರ್ಥ:** ಸಾಹಿತ್ಯ ಲೋಕದಲ್ಲಿ ಹಲವರು ಬರುತ್ತಾರೆ. ಅದರಲ್ಲಿ ನಿಜವಾದ ಪ್ರತಿಭೆಗಳನ್ನು ಹುಡುಕಿ ತೆಗೆಯುವುದು ಬಹಳ ಕಷ್ಟ. ಸಾಹಿತ್ಯ ಎಂಬುದು ಎಲ್ಲರನ್ನೂ ಕೈಬಿಸಿ ಕರೆಯುತ್ತದೆ. ಆದರೆ ಅದರಲ್ಲಿ ಉಳಿಯುವುದು ಬಹಳ ವಿರಳ. ಕನ್ನಡಾಂಬೆಯ ಮಗಳು ಹಾಸನದ ಕವಯಿತ್ರಿಯಾಗಿ ರಾಜ್ಯದ ಎಲ್ಲೆಡೆಯೂ ಹಾಸನದ ಹೆಸರನ್ನು ಉಳಿಸುತ್ತಾ, ಅಂತರಾಷ್ಟ್ರದ ಮಟ್ಟದ ವರೆಗೂ ಸಹ ಬರಹದ ಛಾಪನ್ನು ಮೂಡಿಸುತ್ತಾ ಚೆನ್ನಿಗನ ಕರುಣದಲಿ ಕಾವ್ಯ ರಚಿಸುವವಳು. ವಿನಂತಿ ರಂಜಿಸುತ ಕವಿ ಕಾವ್ಯ ಕಮ್ಮಟಗಳಲ್ಲಿ ಮುಖಾಂತರ ಕವನಗಳನ್ನು ರಚಿಸುತ್ತ ಸಾಗುತ್ತಿರುವವಳು ಕವಯಿತ್ರಿ ಎಲ್ಲೆಡೆಯೂ ಯಶಸ್ವಿಯನ್ನು ಪಡೆಯುತ್ತಾ ಹೆಸರುವಾಸಿಯಾದಾಗ ಅಂದಿನ ದಿನದಲ್ಲೇ ಯಾಕೆ ಧನ್ಯಳಾಗುತ್ತಾಳೆ.

---

# ಕರುಳಿನ ಆರೋಗ್ಯ, ಯಕೃತ್ ಕಾರ್ಯಗಳ ನಡುವಿನ ಸಂಬಂಧ



ದೇಹದ ಅತ್ಯಂತ ಪ್ರಮುಖ ಭಾಗಗಳಲ್ಲಿ ಯಕೃತ್, ಪಿತ್ತಜನಕಾಂಗ ಒಂದಾಗಿದೆ. ನಿರ್ವಿಷೀಕರಣ, ಪೋಷಕಾಂಶಗಳ ಚಯಾಪಚಯ, ರೋಗನಿರೋಧಕ ವ್ಯವಸ್ಥೆ ನಿಯಂತ್ರಣ ಸೇರಿದಂತೆ ಮಾನವ ದೇಹದಲ್ಲಿನ 500ಕ್ಕೂ ಹೆಚ್ಚಿನ ಕಾರ್ಯಗಳ ಜವಾಬ್ದಾರಿಯನ್ನು ಯಕೃತ್ ಹೊಂದಿರುತ್ತದೆ. ಪಿತ್ತಜನಕಾಂಗದ ಪ್ರಾಮುಖ್ಯತೆಯನ್ನು ಅನೇಕರು ಅರಿತಿದ್ದರೂ, ಈ ಅಂಗದ ಆರೋಗ್ಯ ನಮ್ಮ ಕರುಳಿನ ಸ್ಥಿತಿಯೊಂದಿಗೆ ಹತ್ತಿರದ ಸಂಬಂಧ ಹೊಂದಿರುತ್ತದೆ ಎಂದು ಕೆಲವರಿಗೆ ಮಾತ್ರ ತಿಳಿದಿರಬಹುದು. ಕರುಳು ಮತ್ತು ಯಕೃತ್ ನಡುವಿನ ಸತತ ಸಂವಹನವನ್ನು ಗಟ್-ಲಿವರ್ ಆಯ್ಯಕ್ಸಿಸ್ ಎನ್ನುವರು.ದೇಹದ ಒಟ್ಟಾರೆ ಚಯಾಪಚಯ ಮತ್ತು ರೋಗ 'ನಿರೋಧಕತೆಯ ಸಮತೋಲನವನ್ನು ನಿರ್ವಹಿಸಲು ಇದು ಮೂಲಾಧಾರವಾಗಿರುತ್ತದೆ.

ಯಕೃತ್ತಿಗೆ ರಕ್ತ ಪೂರೈಕೆಯ ಸುಮಾರು ಶೇ.70 ರಷ್ಟು ಭಾಗ ಪೋರ್ಟಲ್ ಅಭಿಧಮನಿ ಮೂಲಕ ಬರುತ್ತದೆ. ಅಂದರೆ ಕರುಳಿನಲ್ಲಿ ಹೀರಿಕೊಳ್ಳಲಾಗುವ ಪೋಷಕಾಂಶಗಳು, ವಿಷ ಪದಾರ್ಥಗಳು ಮತ್ತು ಸೂಕ್ಷ್ಮಜೀವಿಯ ಉಪ ಉತ್ಪನ್ನಗಳು ಮುಂತಾದವುಗಳು ಯಕೃತ್ ಮೂಲಕ ಸಾಗುತ್ತವೆ. ಆರೋಗ್ಯಕರ ಕರುಳು ಗೇಟ್‌ಕೀಪರ್ ರೀತಿಯಲ್ಲಿ ಕೆಲಸ ಮಾಡುತ್ತದೆ ಅಲ್ಲದೆ, ರಕ್ತವನ್ನು ಪ್ರವೇಶಿಸುವ ಮತ್ತು ಅಂತಿಮವಾಗಿ ಯಕೃತ್ ಅನ್ನು ತಲುಪುವ ಯಾವ ವಸ್ತುವನ್ನಾದರೂ ಇದು ನಿಯಂತ್ರಿಸುತ್ತದೆ.

ಆದರೆ, ಕರುಳಿನ ಕೋಮಲವಾದ ಸೂಕ್ಷ್ಮಜೀವಿಯ ಸಮ ತೋಲನಕ್ಕೆ ಅಡ್ಡಿಯಾದಲ್ಲಿ(ಈ ಸ್ಥಿತಿಯನ್ನು ಡಿಸ್ ಬಯೋಸಿಸ್ ಎನ್ನುವರು) ಇದರಿಂದ ಯಕೃತ್‌ನ ಕಾರ್ಯಗಳ ಮೇಲೆ ದೂರಗಾಮಿ ಪರಿಣಾಮಗಳು ಉಂಟಾಗಬಹುದು. ಡಿಸ್‌ಬಯೋಸಿಸ್ ಸ್ಥಿತಿಯಿಂದಾಗಿ ಕರುಳಿನ ಗೋಡೆಗಳ ಮೂಲಕ ಪ್ರವೇಶ ಸಾಧ್ಯತೆಯನ್ನು ಹೆಚ್ಚಿಸುವುದಕ್ಕೆ ದಾರಿಯಾಗಬಹುದು. ಇದಕ್ಕೆ 'ಲೀಕಿ ಗಟ್' (ಸೋರುವ ಕರುಳು) ಎನ್ನುವರು. ಇಂತಹ ಸ್ಥಿತಿಯಲ್ಲಿ ಕರುಳಿನ ಮೂಲಕ ಬ್ಯಾಕ್ಟೀರಿಯಾ, ಎಂಡೊಟಾಕ್ಸಿನ್‌ಗಳು ಮತ್ತು ಇತರೆ ಹಾನಿಕಾರಕ ವಸ್ತುಗಳು ಕರುಳಿನ ಗೋಡೆಯ ಮೂಲಕ ಸಾಗಿ ಪೋರ್ಟಲ್ ರಕ್ತ ಪರಿಚಲನೆಯನ್ನು ಪ್ರವೇಶಿಸುತ್ತದೆ.

ಇವು ಯಕೃತ್ ಅನ್ನು ತಲುಪಿದಾಗ ಉರಿಯೂತಕ್ಕೆ ಚಾಲನೆ ನೀಡಬಹುದು ಅಲ್ಲದೆ, ಅಲ್ಲಿ ಕೊಬ್ಬು ಶೇಖರಣೆಯಾಗಲು ಕೊಡುಗೆ ನೀಡಬಹುದು. ಜೊತೆಗೆ ಪಿತ್ತಜನಕಾಂಗಕ್ಕೆ ಹಾನಿವುಂಟಾಗುವುದರ ವೇಗವನ್ನು ಹೆಚ್ಚಿಸಬಹುದು. ಆಲ್ಕೋಹಾಲ್‌ಯೇತರ ಫ್ಯಾಟಿಲಿವರ್ ರೋಗ(ಎನ್‌ಎಎಫ್‌ಎಲ್‌ಡಿ), ಆಲ್ಕೋಹಾಲಿಕ್ ಲಿವರ್ ರೋಗ ಮತ್ತು ಲಿವರ್ ಸಿರಾಸಿಸ್‌ಗಳಂತಹ ಸ್ಥಿತಿಗಳಲ್ಲಿ ವಿಶೇಷವಾಗಿ ಈ ಸಂಪರ್ಕ ಸ್ಪಷ್ಟವಾಗಿ ಕಂಡುಬರುತ್ತದೆ. ಸಂಸ್ಕರಿತ ಆಹಾರಗಳು ಮತ್ತು ಸಕ್ಕರೆಗಳನ್ನೊಳಗೊಂಡ ಆಹಾರಕ್ರಮ, ಅತಿಯಾದ ಮದ್ಯಸೇವನೆ, ಆಲಸಿ ಅಭ್ಯಾಸಗಳು, ದೀರ್ಘಕಾಲದ ಒತ್ತಡ, ಆಯ್ಯಂಟಿಬಯಾಟಿಕ್ಸ್‌ಗಳನ್ನು ಪದೇ ಪದೇ ಬಳಸುವುದು ಮುಂತಾದ ಅಂಶಗಳು ಅನಾರೋಗ್ಯಕರ ಕರುಳು ಮತ್ತು ಅಂತಿಮವಾಗಿ ಅನಾರೋಗ್ಯಕರ ಪಿತ್ತಜನಕಾಂಗಕ್ಕೆ ಕೊಡುಗೆ ನೀಡುತ್ತವೆ.

---

# ಇದ್ದಕ್ಕಿದ್ದಂತೆ ರಕ್ತದಲ್ಲಿ ಶುಗರ್ ಲೆವೆಲ್ ಕಮ್ಮಿಯಾಗಿ ಬಿಟ್ಟರೆ ಕೂಡಲೇ ಇಂತಹ ಆಹಾರಗಳನ್ನು ಸೇವನೆ ಮಾಡಿ

ಮಧುಮೇಹ ಎನ್ನುವುದು ಹಿಂದೆಲ್ಲಾ ಇದನ್ನು ಶ್ರೀಮಂತರ ಕಾಯಿಲೆ ಎಂದೇ ಕರೆಯಲಾಗುತ್ತಿತ್ತು. ಯಾಕೆಂದ್ರೆ, ಶ್ರೀಮಂತರಿಗೆ ಮಾತ್ರ ಈ ಕಾಯಿಲೆ ಕಾಣಿಸಿಕೊಳ್ಳುತ್ತಿತ್ತು ಆದರೆ ಈಗ ಹಾಗಲ್ಲ, ಬಡವ-ಬಲ್ಲಿದ ಎಂಬ ಭೇದವಿಲ್ಲದೆ ಅರಮನೆಯಲ್ಲಿ ವಾಸಿಸುವ ಜನರಿಂದ ಹಿಡಿದು, ಗುಡಿಸಲಿನಲ್ಲಿ ವಾಸಿಸುವ ಜನರವರೆಗೂ ಕೂಡ ಈ ಕಾಯಿಲೆ ಪೆಡಂಭೂತವಾಗಿ ಕಾಡುತ್ತಿದೆ ಅಷ್ಟೇ ಯಾಕೆ ಸಣ್ಣ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಕೂಡ ಈ ಕಾಯಿಲೆಯ ಕಾಟ ತಪ್ಪಿದ್ದಲ್ಲ






ಇನ್ನು ಈ ಕಾಯಿಲೆಯಲ್ಲೂ ಕೂಡ ಎರಡು ವಿಧಗಳಿವೆ. ಹೈಪೊಗ್ಲೈಸೆಮಿಯಾ ಹಾಗೂ ಹೈಪರ್ ಗ್ಲೈಸೆಮಿಯಾ. ಅಂದರೆ ನಿಯಮಿತ ಅಂಶಕ್ಕಿಂತ ಸಕ್ಕರೆ ಕಡಿಮೆ ಇದ್ದರೆ ಅದನ್ನು ಹೈಪೊಗ್ಲೈಸೆಮಿಯಾ ಎಂದು ಕರೆಯುತ್ತಾರೆ (ರಕ್ತದಲ್ಲಿ ಸಕ್ಕರೆ ಮಟ್ಟ ತುಂಬಾನೇ ಕಡಿಮೆ ಆಗುವುದು) ಇನ್ನೊಂದು ನಿಗದಿತ ಅಂಶಕ್ಕಿಂತ ಸಕ್ಕರೆ ಹೆಚ್ಚಾಗಿದ್ದರೆ ಅದನ್ನು ಹೈಪರ್ ಹೈಪೊಗ್ಲೈಸೆಮಿಯಾ ಎಂದು ಕರೆಯುತ್ತಾರೆ

**ರಕ್ತದಲ್ಲಿ ಶುಗರ್ ಲೆವೆಲ್ ಇದಕ್ಕಿದ್ದಂತೆ ಕಡಿಮೆ ಆಗುವುದು**

ಹೈಪೋಗ್ಲಿಸಿಮಿಯ ಅಂದರೆ ರಕ್ತದಲ್ಲಿ ಶುಗರ್ ಲೆವೆಲ್ ಇದಕ್ಕಿ ದ್ದಂತೆ ಕಡಿಮೆ ಆಗುತ್ತಾ ಬರುವುದು. ಈ ಬಗ್ಗೆ ತಜ್ಞರು ಹೇಳುವ ಪ್ರಕಾರ ಒಂದು ವೇಳೆ ಶುಗರ್ ಲೆವೆಲ್ 70, ಇದ್ದರೆ, ಅದನ್ನು ಹೈಪೋಗ್ಲಿ ಸಿಮಿಯ ಎಂದು ಹೇಳಲಾಗುತ್ತದೆ.

ಒಂದು ವೇಳೆ ರಕ್ತದಲ್ಲಿ ಸಕ್ಕರೆಮಟ್ಟ ಇದ್ದಕ್ಕಿದ್ದಂತೆ ಕಡಿಮೆಯಾ ದಾಗ ಏನು ಮಾಡಬೇಕು ಅಥವಾ ಸಕ್ಕರೆಯನ್ನು ಸಮತೋಲನಗೊಳಿಸಲು ಯಾವ ಆಹಾರ ಪದಾರ್ಥಗಳನ್ನು ಸೇವಿಸಬೇಕು ಎಂದು ನಮಗೆ ಅನೇಕ ಬಾರಿ ಅರ್ಥವಾಗುವುದಿಲ್ಲ.

ವಿಶೇಷವಾಗಿ ಇನ್ಸುಲಿನ್, ಔಷಧಿಗಳನ್ನು ತೆಗೆದುಕೊಳ್ಳುವ ಜನರಲ್ಲಿ ಸಕ್ಕರೆ ಕಡಿಮೆಯಾಗುವ ಅಪಾಯ ಹೆಚ್ಚಾಗುತ್ತದೆ. ಇದ ರಿಂದಾಗಿ, ಹಲವು ಬಾರಿ ಸಕ್ಕರೆ ಮಟ್ಟ ತೀವ್ರವಾಗಿ ಇಳಿಯುತ್ತದೆ. ಪ್ರಮುಖವಾಗಿ ದೇಹದಲ್ಲಿ ಸಕ್ಕರೆ ಮಟ್ಟ ಕಡಿಮೆಯಾದಾಗ, ಇದ್ದಕ್ಕಿದ್ದಂತೆ ಗಾಬರಿ ಪ್ರಾರಂಭವಾಗುತ್ತದೆ, ತಲೆತಿರುಗುವಿಕೆ ಕಾಣಿಸಿಕೊಳ್ಳುತ್ತದೆ, ತಲೆನೋವು ಮತ್ತು ತಿರುಗುವಿಕೆ ಯಂತಹ ರೋಗಲಕ್ಷಣಗಳು ಕಂಡುಬರುತ್ತದೆ. ಇನ್ನೂ ಕೆಲವೊಮ್ಮೆ ಸರಿಯಾಗಿ ನಿದ್ದೆಯೂ ಬರದೆ, ನಿದ್ರಾಹೀನತೆ ಸಮಸ್ಯೆ ಕೂಡ ಉಂಟಾಗುತ್ತದೆ. ಒಂದು ವೇಳೆ ಇಂತಹ ಲಕ್ಷಣಗಳು ಕಂಡು ಬಂದರೆ, ತಕ್ಷಣವೇ ವೈದ್ಯರ ಸಲಹೆ ಪಡೆದುಕೊಂಡು ಶುಗರ್ ಪರೀಕ್ಷೆ ಮಾಡಿಸಿ ಕೊಳ್ಳಬೇಕು.

**ಗ್ಲೂಕೋಸ್ ಮಾತ್ರೆಗಳು:** ಆರೋಗ್ಯ ತಜ್ಞರ ಪ್ರಕಾರ, ಸಕ್ಕರೆ ಮಟ್ಟ ಇದ್ದಕ್ಕಿದ್ದಂತೆ ಕಡಿಮೆಯಾ ದಾಗ ಗ್ಲೂಕೋಸ್ ಮಾತ್ರೆಗಳನ್ನು ತೆಗೆದುಕೊಳ್ಳ ಬಹುದು. ಅವು ಗಳನ್ನು ಯಾವಾಗಲೂ ನಿಮ್ಮೊಂದಿಗೆ ಕೊಂಡೊಯ್ಯಿರಿ. ನಿಮಗೆ



ರಕ್ತದಲ್ಲಿನ ಸಕ್ಕರೆ ಕಡಿಮೆಯಾದಾಗ, 1 ಟ್ಯಾಬ್ಲೆಟ್ ತೆಗೆದುಕೊಳ್ಳಿ. ಆದರೆ ಟ್ಯಾಬ್ಲೆಟ್‌ನ ಗ್ರಾಂ ಬಗ್ಗೆ ಗಮನ ಕೊಡಿ. 15 ರಿಂದ 20 ಗ್ರಾಂ ಗ್ಲೂಕೋಸ್ ನೊಂದಿಗೆ ಸಕ್ಕರೆಯನ್ನು ಸುಲಭವಾಗಿ ಸಮತೋಲನ ಗೊಳಿಸಬಹುದು. ಈ ಟ್ಯಾಬ್ಲೆಟ್ ತಿಂದ ನಂತರ 10-15 ನಿಮಿಷಗಳ ಕಾಲ ಕಾಯಿರಿ. ಆದರೆ ಮಧುಮೇಹ ಇರುವವರು ಈ ಬಗ್ಗೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು. ಯಾವುದಕ್ಕೂ ಒಮ್ಮೆ ವೈದ್ಯರ ಸಲಹೆ ಪಡೆದುಕೊಂಡರೆ ಒಳ್ಳೆಯದು.

**ತಾಜಾ ಹಣ್ಣುಗಳು ಅಥವಾ ಒಣ ಹಣ್ಣುಗಳನ್ನು ಸೇವಿಸಿ:** ರಕ್ತದಲ್ಲಿ ಶುಗರ್ ಲೆವೆಲ್ ಕಡಿಮೆ ಆಗುವ ಸಮಸ್ಯೆ ಇರುವವರು ತಾಜಾ ಹಾಗು ಸ್ವಲ್ಪ ಸಿಹಿಯಾದ ಹಣ್ಣುಗಳನ್ನು ಸೇವಿಸಿ. ಇಲ್ಲಾಂದ್ರೆ, ಹಣ್ಣುಗಳ ಬದಲಿಗೆ ಒಣಗಿದ ಹಣ್ಣುಗಳನ್ನು ಕೂಡ ಸೇವನೆ ಮಾಡಬಹುದು. ಶುಗರ್ ಲೆವೆಲ್ ಕಡಿಮೆ ಆಗುವ ಸಮಸ್ಯೆ ಇದ್ದರೆ, ಕೂಡಲೇ ಬಾಳೆಹಣ್ಣು, ದ್ರಾಕ್ಷಿ, ಮಾವಿನಹಣ್ಣು ಮತ್ತು ಕಿತ್ತಳೆ ಹಣ್ಣುಗಳನ್ನು ಸೇವನೆ ಮಾಡಿ. ಇಲ್ಲಾಂದ್ರೆ ಸಡನ್ ಆಗಿ ಈ ರೀತಿ ಸಮಸ್ಯೆ ಆದರೆ 2 ಚಮಚ ಒಣದ್ರಾಕ್ಷಿಗಳನ್ನು ಸೇವಿಸಿ; ಇದು ದೇಹದ ಶುಗರ್ ಲೆವೆಲ್ ಅನ್ನು ಸಮತೋಲನದಲ್ಲಿಡಲು ನೆರವಾ ಗುತ್ತದೆ.

**ಸಿಹಿ ಕ್ಯಾಂಡಿ:** ಹೈಪೊಗ್ಲಿಸಿಮಿಯಾ, ರಕ್ತದಲ್ಲಿ ಶುಗರ್ ಲೆವೆಲ್ ಕಡಿಮೆ ಆಗುವ ಸಂದರ್ಭದಲ್ಲಿ, ತಕ್ಷಣವೇ ಕಾರ್ಬೋಹೈಡ್ರೇಟ್ ಸೇವಿಸಿ. ನೀವು 15 ಗ್ರಾಂ ಕಾರ್ಬೋಹೈಡ್ರೇಟ್‌ಗಳನ್ನು ತೆಗೆದುಕೊಳ್ಳ ಬಹುದು.ಇದಕ್ಕಾಗಿ ನೀವು ಅಂಟಂಟಾದ ಕ್ಯಾಂಡಿಗಳನ್ನು ತಿನ್ನಬಹುದು.

ಕಾಯಿಲೆಯನ್ನು ಕೂಡ ನಿಯಂತ್ರಣದಲ್ಲಿ ನೆರವಿಗೆ ಬರುತ್ತದೆ. ಇನ್ನು ಮಧುಮೇಹಿಗಳಲ್ಲಿ ಸಮಯಕ್ಕೆ ಸರಿಯಾಗಿ ಇನ್ಸುಲಿನ್ ಇಂಜೆಕ್ಷನ್ ತೆಗೆದುಕೊಳ್ಳದೆ ಇದ್ದರೂ ಕೂಡ ಈ ರೀತಿ ಆಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಈ ಸಮಸ್ಯೆಯ ಬಗ್ಗೆ ಎಚ್ಚರಿಕೆ ವಹಿಸಿ.

### ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು: ಡಿಸಿ

# ಏ.30ರಂದು ಸಂಭ್ರಮದ ಬಸವ ಜಯಂತಿ ಆಚರಣೆಗೆ ನಿರ್ಧಾರ

• ಉದಯವಾಹಿನಿ ಕಲಬುರಗಿ

ಇದೇ ಏ. 30 ರಂದು ಕಲಬುರಗಿ ಜಿಲ್ಲೆಯಾದ್ಯಂತ ಸಂಭ್ರಮ-ಸಡಗರದಿಂದ ಬಸವ ಜಯಂತಿ ಆಚರಣೆಗೆ ಇಲ್ಲಿನ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಅಂದು ಬೆ.9 ಗಂಟೆಗೆ ಕಲಬುರಗಿ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಯಂತ್ಯೋತ್ಸವ ಸಮಿತಿಯ ಸಂಯುಕ್ತಾಶ್ರಯದಲ್ಲಿ ಜಗತ್ ವೃತ್ತದಲ್ಲಿರುವ ಸಾಂಸ್ಕೃತಿಕ ನಾಯಕ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡುವುದು ಮತ್ತು ವೇದಿಕೆ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಯಿತು. ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಜಿಲ್ಲಾ ಉಸ್ತುವಾರಿ ಸಚಿವರು ಒಳಗೊಂಡಂತೆ ಚುನಾಯಿತ ಜನಪ್ರತಿನಿಧಿಗಳನ್ನು ಆಹ್ವಾನಿಸುವುದು, ಆಮಂತ್ರಣ ಪತ್ರಿಕೆ ಸಿದ್ದಪಡಿಸಿ ಗಣ್ಯರಿಗೆ ಮುಂಚಿತವಾಗಿ ವಿತರಿಸಲು ಮತ್ತು ಉಪನ್ಯಾಸಕರನ್ನು ನಿಯೋಜಿಸಲು ಸಭೆಯಲ್ಲಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು.

ಕರ್ನಾಟಕ ಪರಿಸರ ಮಾಲಿನ ನಿಯಂತ್ರಣ ಮಂಡಳಿ ಸದಸ್ಯರು ಮತ್ತು ವೀರಶೈವ ಮಹಾಸಭೆ ಜಿಲ್ಲಾಧ್ಯಕ್ಷ ಶರಣು ಮೋದಿ ಮಾತನಾಡಿ, ಬಸವ ಜಯಂತಿ ಅಂಗವಾಗಿ ಏಪ್ರಿಲ್ 29 ರಂದು ಅಪ್ಪ ಜಾತ್ರೆ ಮೈದಾನದಲ್ಲಿ ಸಮಾಜದ ಸಮಾವೇಶ ಮಾಡಲಾಗುತ್ತಿದ್ದು, ಸುಮಾರು 25 ಸಾವಿರ ಜನ ಸಂಖ್ಯೆ ಬರುವ ನಿರೀಕ್ಷೆ ಇರುವುದರಿಂದ ಕುಡಿಯುವ ನೀರು, ವಿದ್ಯುತ್, ಪೊಲೀಸ್ ಬ್ಯಾರಿಕೇಡ್, ಪಾರ್ಕಿಂಗ್, ಸ್ವಚ್ಛತೆ ಬಗ್ಗೆ ಜಿಲ್ಲಾಡಳಿತ ಗಮನ ಹರಿಸಬೇಕು.

ವಿಶೇಷವಾಗಿ ಜಗತ್ ವೃತ್ತ ಮತ್ತು ಬಸವಣ್ಣನವರ ಪ್ರತಿಮೆ ಸುತ್ತ ಸೌಂದರ್ಯೀಕರಣ ಕೆಲಸಗಳು ಆಗಬೇಕು. ಏಪ್ರಿಲ್ 30 ರಂದು ಸಂಜೆ 4 ಗಂಟೆಗೆ ನಗರೇಶ್ವರ ಶಾಲೆಯಿಂದ ಬಸವಣ್ಣನವರ ಮತ್ತು ಬಸವಾದಿ ಶರಣರ ಭಾವಚಿತ್ರದ ಮೆರವಣಿಗೆ ನಡೆಯಲಿದ್ದು, ಮೆರವಣಿಗೆಯುದ್ದಕ್ಕೂ ಅಗತ್ಯ ಕ್ರಮ ವಹಿಸಬೇಕು ಎಂದರು. ವಿಧಾನ ಪರಿಷತ್ ಶಾಸಕ ಬಿ.ಜಿ.ಪಾಟೀಲ ಮಾತನಾಡಿ ರಾಜ್ಯದಲ್ಲಿಯೆ ಕಲಬುರಗಿ ಬಸವ ಜಯಂತಿ ಮಾದರಿಯಾಗಿ ಆಚರಿಸಲಾಗುವುದು, ಎಲ್ಲರು ಇದಕ್ಕೆ ತನು ಮನ ಧನದಿಂದ ಸಹಕರಿಸಬೇಕು ಎಂದರು.

ಸಭೆಯಲ್ಲಿ ಎ.ಕೆ.ರಾಮೇಶ್ವರ, ಭೀಮಪ್ಪ ಬೋನಾಳ, ಡಾ.ವಿಶಾಲಾಕ್ಷ ಕರಡಿ, ಡಾ.ಸುಧಾ ಹಾಲಕಾಯಿ, ಸುನೀಲ ಮಾನ್ಪಡೆ, ಮಹೇಶ ಹುಬ್ಬಿ, ರವಿಂದ್ರ ಶಾಬಾದಿ ಸೇರಿದಂತೆ ಅನೇಕರು ಮಾತನಾಡಿ ಬಸವ ಜಯಂತಿ ಅಂಗವಾಗಿ ಶರಣರ ವಚನಗಳ ಒಳಗೊಂಡ ಪುಸ್ತಕಗಳನ್ನು ವಿತರಿಸಬೇಕು, ಸಮ-ಸಮಾಜಕ್ಕೆ ದುಡಿದ ಮತ್ತು ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆಗೈದ ಸಾಧಕರನ್ನು ಗುರುತಿಸಿ ಸತ್ಕರಿಸಬೇಕು, ಶಾಲಾ-ಕಾಲೇಜು, ವಸತಿ ನಿಲಯಗಳಲ್ಲಿ ವಚನ ಸ್ಪರ್ಧೆ ಆಯೋಜಿಸಬೇಕು ಎಂದರು.



ಉದಯವಾಹಿನಿ ಚಿತ್ರ

**ಜಿಲ್ಲೆಯಾದ್ಯಂತ ಎಲ್ಲಾ ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಲ್ಲಿ ಏಪ್ರಿಲ್ 30 ರಂದು ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಬೇಕು. ತಾಲ್ಲೂಕಾ ಮಟ್ಟದಲ್ಲಿ ತಹಶೀಲ್ದಾರರು ಪೂರ್ವಭಾವಿ ಸಭೆ ನಡೆಸಿ ಅಗತ್ಯ ಕ್ರಮವಹಿಸಬೇಕು. ಕಲಬುರಗಿ ನಗರದಲ್ಲಿ ಜಿಲ್ಲಾಡಳಿತದಿಂದ ನಡೆಯುವ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರಿಕೆವಹಿಸಬೇಕು. ನಿರಂತರ ಕುಡಿಯುವ ನೀರು ಪೂರೈಕೆ, ವಿದ್ಯುತ್ ವ್ಯತ್ಯಯ ಆಗದಂತೆ ಎಚ್ಚರವಹಿಸಬೇಕು. ಜಗತ್ ವೃತ್ತ ಮತ್ತು ಬಸವೇಶ್ವರ ಪ್ರತಿಮೆ ಸುತ್ತ ಸ್ವಚ್ಛತೆ, ನೈರ್ಮಲ್ಯ ಕಾಪಾಡಬೇಕು ಮತ್ತು ಅಗತ್ಯ ಪೊಲೀಸ್ ಭದ್ರತೆ ಒದಗಿಸಬೇಕು -ಡಿ.ಸಿ. ಬಿ.ಫೌಜಿಯಾ ತರನ್ನುಮ್**

### ಕಲಬುರಗಿಗೆ ರಥಯಾತ್ರೆ

**ಬಾಗಲಕೋಟೆಯ ಕೂಡಲ ಸಂಗಮದಲ್ಲಿ ಇದೇ ಏಪ್ರಿಲ್ 29 ಮತ್ತು 30 ರಂದು ಎರಡು ದಿನಗಳ ಕಾಲ ಅನುಭವ ಮಂಟಪ-ಬಸವಾದಿ ಶರಣರ ವೈಭವ ಕಾರ್ಯಕ್ರಮ ಆಯೋಜಿಸಿದ ಪ್ರಯುಕ್ತ ಈ ಬಗ್ಗೆ ನಾಡಿನಾದ್ಯಂತ ವ್ಯಾಪಕ ಪ್ರಚೂರಪಡಿಸಲು ಹೊರಟಿರುವ ರಥಯಾತ್ರೆಯು ಏಪ್ರಿಲ್ 24 ರಂದು ಬೆಳಿಗ್ಗೆ ಕಲಬುರಗಿ ನಗರಕ್ಕೆ ಆಗಮಿಸಲಿದ್ದು, ಅಂದು ಬಸವ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಗಮಿಸಿ ರಥಕ್ಕೆ ಸ್ವಾಗತ ಕೋರಬೇಕು ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರು ಮನವಿ ಮಾಡಿದರು.**

**ಈ ಬಾರಿ ಯಾರ ಬಳಿಯು ಜಯಂತಿ ಆಚರಣೆಗೆ ಚಂದಾ ಹಣ ಎತ್ತದೆ ಕಲಬುರಗಿಯಲ್ಲಿ ಎಲ್ಲಾ ಸಮಾಜದವರನ್ನು ಸೇರಿಸಿ ಅದ್ದೂರಿಯಾಗಿ ಬಸವ ಜಯಂತಿ ಆಚರಣೆ ಮಾಡಲು ನಿರ್ಧರಿಸಿದ್ದು, ಸಮ-ಸಮಾಜಕ್ಕೆ ದುಡಿದ ಬಸವಣ್ಣನವರ ಆಚಾರ-ವಿಚಾರಗಳು ರಾಜ್ಯದುದ್ದಕ್ಕೂ ತಲುಪುವಂತೆ ಮಾದರಿ ಜಯಂತಿ ಕಾರ್ಯಕ್ರಮಕ್ಕೆ ರೂಪುರೇಷೆ ಸಿದ್ದಪಡಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಎಲ್ಲಾ ಶರಣರ 100 ವಚನಗಳನ್ನು ಒಳಗೊಂಡ ಕಿರುಪಸ್ತಕ ಹಂಚಲಾಗುವುದು -ಎಂ.ವೈ.ಪಾಟೀಲ ಅಫಜಲಪೂರ ಶಾಸಕರು ಮತ್ತು ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ**

## ಮಿನಿ ನ್ಯೂಸ್

### ವಿದ್ಯುತ್ ತಗುಲಿ ವ್ಯಕ್ತಿಗೆ ಗಾಯ

• ಉದಯವಾಹಿನಿ ಗೋಕರ್ಣ

ಇಲ್ಲಿಯ ತಲಗೇರಿಯಲ್ಲಿ ಹಲಸಿನ ಮರ ಕಡಿಯುವಾಗ. ಮರಕ್ಕೆ ವಿದ್ಯುತ್ ತಗಲಿ ವ್ಯಕ್ತಿಯೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡವರನ್ನು ತಲಗೇರಿಯ ನಿವಾಸಿ ಬೀರಾ ಎಚ್. ಗೌಡ ಎಂದು ಗುರುತಿಸಲಾಗಿದೆ. ಹಲಸಿನ ಮರಕ್ಕೆ ವಿದ್ಯುತ್ ತಗಲಿದ್ದರಿಂದ ಮರ ಕಡಿಯುತ್ತಿದ್ದ ಬೀರಾ ಮರದಿಂದ ಕೆಳಗೆ ಬಿದ್ದಿದ್ದಾರೆ. ತಕ್ಷಣ ಇವರನ್ನು ಕೂಡಲೇ ಗೋಕರ್ಣ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ. ಈ ಬಗ್ಗೆ ಪೊಲೀಸರು ಸ್ಥಳಕ್ಕೆ ತೆರಳಿ ಮಾಹಿತಿ ಕಲೆಹಾಕಿದ್ದಾರೆ.

### ಬೆಲೆ ಏರಿಕೆ ನೀತಿ ವಿರೋಧಿಸಿ ಪ್ರತಿಭಟನೆ

• ಉದಯವಾಹಿನಿ ರಾಮದುರ್ಗ

ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳ ಬೆಲೆ ಏರಿಕೆ ನೀತಿಯನ್ನು ಪ್ರತಿಭಟಿಸಿ ಸಿ.ಪಿ.ಐ (ಎಂ) ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಬೆಲೆ ಏರಿಕೆಯನ್ನು ತಕ್ಷಣವೇ ನಿಯಂತ್ರಿಸಬೇಕು ಎಂದು ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು. ಕೇಂದ್ರದ ಚುಕ್ಕಾಣಿ ಹಿಡಿದರೆ ಬೆಲೆ ಏರಿಕೆ ನಿಯಂತ್ರಣದಲ್ಲಿ ತಂದು ಎಲ್ಲರಿಗೂ ಒಳ್ಳೆಯ ದಿನಗಳನ್ನು ನೀಡುತ್ತೇವೆ ಎಂದು ಹೇಳಿದ ಕೇಂದ್ರದ ಮೋದಿ ಸರ್ಕಾರ ಕಳೆದ 2 ಅವಧಿ ಮುಗಿಸಿ 3ನೇ ಅವಧಿಗೂ ಪ್ರಧಾನಿ ಆದರೂ ಬೆಲೆಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತೈಲ ಬೆಲೆಗಳು ಮಾರುಕಟ್ಟೆಯಲ್ಲಿ ಕಡಿಮೆ ಇದ್ದರೂ ಡಿಸೈಲ್ ಮತ್ತು ಪೆಟ್ರೋಲ್ ದರ ಏರಿಕೆ ಮಾಡಿ ಬಡವರಿಗೆ ಕೊಂಡುಕೊಳ್ಳುವ ಶಕ್ತಿ ಇಲ್ಲದಂತೆ ಮಾಡಿದ್ದಾರೆ. ಬಂಡವಾಳ ಶಾಹಿಗಳ ಜೇಬು ತುಂಬುವ ಕೆಲಸ ಮಾಡುತ್ತಿರುವುದು. ಚುನಾಯಿತ ಪ್ರತಿನಿಧಿಗಳು ತಮ್ಮ ವೇತನ ಹೆಚ್ಚು ಮಾಡಿಕೊಳ್ಳಲು ಮುಂದಾಗುತ್ತಾರೆಯೇ ಹೊರತು ದುಡಿಯುವ ಜನರ ವೇತನ ಕುರಿತು ಮಾತನಾಡುವುದೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಇಕ್ಕಟ್ಟಾದ ತಿರುವು: ಪ್ರವಾಸಿಗರ ಪರದಾಟ

• ಉದಯವಾಹಿನಿ ಕಳಸ

ಹೆಬ್ಬೊಳೆ ಸೇತುವೆ ಕಾಮಗಾರಿ ಕಾರಣಕ್ಕೆ ಈ ರಸ್ತೆಯಲ್ಲಿ ಸಂಚಾರ ನಿಲ್ಲಿಸಿ ಎರಡು ತಿಂಗಳುಗಳು ಕಳೆದಿವೆ. ಹೀಗಾಗಿ, ಹಳುವಳ್ಳಿ– ಹೊರನಾಡು ಪರ್ಯಾಯ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿವೆ. ಆದರೆ, ಈ ರಸ್ತೆಯ ಇಕ್ಕಟ್ಟಾದ ತಿರುವುಗಳು ವಾಹನ ಸಂಚಾರಕ್ಕೆ ತೊಡಕಾಗಿವೆ.

ಏ.25ರವರೆಗೆ ಹೆಬ್ಬೊಳೆ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಆದರೆ ಈ ಸೇತುವೆಯ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದ್ದು ಮುಂದಿನ ವಾರ ಮುಗಿಯುವುದು ಅನುಮಾನ ಎಂದು ಗ್ರಾಮಸ್ಥರು ಹೇಳುತ್ತಿದ್ದಾರೆ.

ಮಕ್ಕಳ ಬೇಸಿಗೆ ರಜೆ ಪ್ರಾರಂಭವಾಗಿರುವ ಕಾರಣಕ್ಕೆ ಹೊರನಾಡಿನ ಅನ್ನಪೂರ್ಣೇಶ್ವರಿ ದರ್ಶನಕ್ಕೆ ಪ್ರವಾಸಿಗರು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದ್ದಾರೆ. ಪ್ರತಿದಿನವೂ ನೂರಾರು ಪ್ರವಾಸಿ ವಾಹನಗಳು ಕಳಸ, ಹಳುವಳ್ಳಿ ಮೂಲಕ ಹೊರನಾಡಿಗೆ ಸಾಗಿ ಅಲ್ಲಿಂದ ಶೃಂಗೇರಿಗೆ ಹೋಗುತ್ತಿವೆ. ಆದರೆ, ಹಳುವಳ್ಳಿ–ದಾರಿಮನೆ ನಡುವಿನ 8 ಕಿ.ಮೀ ರಸ್ತೆ ಅತ್ಯಂತ ಇಕ್ಕಟ್ಟಾಗಿದೆ. ಈ ರಸ್ತೆಯಲ್ಲಿ ಅನೇಕ ತಿರುವುಗಳು ಇದ್ದು ಅಪಾಯಕಾರಿಯಾಗಿವೆ. ಎರಡು ತಿಂಗಳುಗಳಲ್ಲಿ ಅನೇಕ ಸಣ್ಣ ಅಪಘಾತಗಳು ಸಂಭವಿಸಿದ್ದು ರಸ್ತೆ ಮಧ್ಯೆ ಪ್ರವಾಸಿಗರ ಘರ್ಷಣೆ ಮಾಮೂಲಿ ದೃಶ್ಯವಾಗಿದೆ.

### ಚೌಡೇಶ್ವರಿ ದೇವಿ ಭವ್ಯ ಮೆರವಣಿಗೆ

• ಉದಯವಾಹಿನಿ ಹಿರೀಸಾವೆ

ಇಲ್ಲಿನ ಚೌಡೇಶ್ವರಿ ದೇವಿಯನ್ನು ಹೊನ್ನೇನಹಳ್ಳಿ ಗ್ರಾಮಕ್ಕೆ ಭಕ್ತರು ಭವ್ಯ ಮೆರವಣಿಗೆ ಮೂಲಕ ಕರೆತರಲಾಯಿತು. ಚೌಡೇಶ್ವರಿ ದೇವಿಯ ತವರು ಮನೆಯಾದ ಹೊನ್ನೇನಹಳ್ಳಿಗೆ ಕರೆದುಕೊಂಡು ಹೋಗುವುದು ವಾಡಿಕೆ. ಹೊನ್ನೇನಹಳ್ಳಿಯಲ್ಲಿ ಬೆಳಿಗ್ಗೆ ಪಂಚ ಕಳಸ ಪ್ರತಿಷ್ಠಾಪನೆ, ವಿನಾಯಕ, ನಾಗದೇವತೆ, ಈಶ್ವರ ಮತ್ತು ಲಕ್ಷ್ಮೀದೇವಿಗೆ ಕ್ಷೀರಾಭಿಷೇಕ ನಡೆಯಿತು. ಬೆಳಿಗ್ಗೆ ಗ್ರಾಮಸ್ಥರು ಹಿರೀಸಾವೆಗೆ ಆಗಮಿಸಿ, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಮಂಗಳವಾದ್ಯದೊಂದಿಗೆ ದೇವಿಯನ್ನು ದೊಡ್ಡ ಬೀದಿ, ಉಯ್ಯಾಲೆ ಕಂಬದ ಆವರಣ, ಹಳೆ ಬಿ.ಎಂ.ರಸ್ತೆ, ಶ್ರವಣಬೆಳಗೊಳ ರಸ್ತೆ ಮೂಲಕ ದೇವರನ್ನು ಗ್ರಾಮಕ್ಕೆ ಕರೆತಂದರು. ಮಹಿಳೆಯರು ಪೂರ್ಣ ಕುಂಭ ಮತ್ತು ಧೂಪದಾರತಿಯೊಂದಿಗೆ ದೇವಿ ಬರಮಾಡಿಕೊಂಡರು. ಗ್ರಾಮದ ಹೆಣ್ಣು ಮಕ್ಕಳು ನಿಂಬೆಹಣ್ಣಿನ ಆರತಿ, ಪುಷ್ಪಾರ್ಚನೆ ಮಾಡಿದರು. ನಂತರ ದೇವಿಯ ತೂಗುಯ್ಯಾಲೆ ಉತ್ಸವ ನಡೆಸಿದರು. ವೈಕುಂಠ ಮಂಟಪ ಉದ್ಘಾಟನೆ ಮಾಡಲಾಯಿತು. ಚಂಡಿಕಾ ಹೋಮ ಸೇರಿದಂತೆ ಹಲವು ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

## ಅಂದೋಲ ಸ್ವಾಮಿಜೀ ಸನಾತನ ಧರ್ಮದ ವಸುದೈವ ಕುಟುಂಬಕಂ ಎನ್ನುವ ತತ್ವದ ಮೇಲೆ ನಡೆಯಬೇಕು: ಕಾಂಗ್ರೇಸ್ ಅಧ್ಯಕ್ಷ ಬಸವರಾಜ ಮಾಲಿ

• ಉದಯವಾಹಿನಿ ಚಿಂಚೋಳಿ

ಸ್ವಾಮಿಜೀ ಆದವರು ಸನಾತನ ಧರ್ಮದ ಬಗ್ಗೆ ಮಾತನಾಡುವವರು ಸನಾತನ ಧರ್ಮದ ವಸುದೈವ ಕುಟುಂಬಕಂ ಎನ್ನುವ ತತ್ವದ ಮೇಲೆ ನಡೆಯುತ್ತಾರೆಯೇ ವಿನಹ ಧರ್ಮ ಧರ್ಮಗಳ ಮಧ್ಯೆ ದ್ವೇಷ ಬಿತ್ತುವ ಕೆಲಸ ಮಾಡುವುದಿಲ್ಲ,ಮಾಡಬಾರದು ಎಂದು ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ ತಿಳಿಸಿದ್ದಾರೆ.

ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು,ಅಂದೋಲದ ಸಿದ್ಧಲಿಂಗಸ್ವಾಮಿ ಹಿಂದು ಧರ್ಮದ ಬಗ್ಗೆ ಮಾತನಾಡುವ ಇವರು ಟೀಕಿಸುತ್ತಿರುವ ರಾಜಕಾರಣಿಗಳು ಹಿಂದೂಗಳಲ್ಲವೇ,ಅಂದೋಲದ ಶ್ರೀಗಳಿಗೆ ಪಶ್ಚಿಮ ಬಂಗಾಳದ ಸಿಎಂಗೆ ಏನು ಸಂಬಂಧ,ಸಚಿವ ಶಾಮನೂರು ಮಲ್ಲಿಕಾರ್ಜುನ ಅವರ ಮನೆತನದ ಇತಿಹಾಸ ಸಮಾಜಕ್ಕೆ ಶಾಮನೂರು ಕುಟಂಬದ ಕೊಡುಗೆ ಅಪಾರ ಆದರೆ ಅವರ ಬಗ್ಗೆ ಮಾತನಾಡಲು ಅಂದೋಲದ ಶ್ರೀಗಳಿಗೆ ಯೋಗ್ಯತೆಯಿದೆ,ಸ್ವಾಮೀಜಿ ಪ್ರಕಾರ ಬಿಜೆಪಿಯಲ್ಲಿ ಇರುವವರೆ ಹಿಂದೂಗಳು ಬಿಜೆಪಿ ಬಿಟ್ಟು ಬೇರೆ ಬೇರೆ ಪಕ್ಷಗಳಲ್ಲಿ ಇರುವವರು ಹಿಂದೂಗಳಲ್ಲವೇ ಎಂದು ಪ್ರಶ್ನಿಸಿದರು. ಅಂದೋಲ ಸ್ವಾಮೀಜಿ ಬರೀ ಮುಸ್ಲಿಮರನ್ನು ತೆಗಳಿ ಮಾತನಾಡುವುದು ಯಾರನ್ನು ಮೆಚ್ಚಿಸಲಿಕ್ಕೆ ಎಂದು ಪ್ರಶ್ನೆಯಾಗಿದೆ,ಬೇಕಾಬಿಟ್ಟಿ ಹೇಳಿಕೆ ಕೊಡುವುದು ಯಾವ ಹಿಂದೂ ಧರ್ಮದಲ್ಲಿ ಎಲ್ಲಿ ಉಲ್ಲೇಖವಾಗಿದೆ, ಬರೀ ಕಾವಿ ಹಾಕಿದರೆ ಸ್ವಾಮೀಜಿಗಳಾಗಲ್ಲ ಜಾತಿ ಜಾತಿಗಳ ಮನುಷ್ಯ ಮನುಷ್ಯರ ಭಾವನೆಗಳು, ಮನಸ್ಸುಗಳನ್ನು ಬೆಸೆದು ಮಠ ಕಟ್ಟಿದವರು ಮಾತ್ರ ನಿಜವಾದ ಸ್ವಾಮಿಯಾಗಲು ಸಾಧ್ಯವೆಂದರು.

**ಶಾಮನೂರು ಕುಟಂಬದ ಕೊಡುಗೆ ಅಪಾರ**

ರಾಜ್ಯದಲ್ಲಿ ಸಾವಿರಾರು ಮಠಗಳಿವೆ ಆದರೆ ಸಾಕಷ್ಟು ಬಡಮಕ್ಕಳಿಗೆ ಶಿಕ್ಷಣ ನೀಡಿ ಉತ್ತಮ ಸಂಸ್ಕಾರ ಸಂಸ್ಕೃತಿ ಕಲಿಸುತ್ತಿದ್ದಾರೆ,ದಾರಿ ತಪ್ಪಿದವರಿಗೆ ಸರಿದಾರಿಗೆ ತರುವ ಕೆಲಸ ಮಠಮಾನ್ಯಗಳು ಮಾಡುತ್ತಿವೆ,ಹಾಗೂ ಮಾನವ ಕೂಲ ಶ್ರೇಷ್ಠವಾದುದ್ದು,ಎಲ್ಲೋರು ಸಹ ಭಾಳ್ವೆಯಿಂದ ಬದುಕಬೇಕು ಎನ್ನುವ ಸಂದೇಶ ಮಠಗಳು ನೀಡುತ್ತಿವೆ ಯಾವ ಸ್ವಾಮಿಗಳು ರಾಜಕಾರಣದ ಬಗ್ಗೆ ಮಾತನಾಡಲ್ಲ,ಆದರೆ ಸಿದ್ದಲಿಂಗ ಸ್ವಾಮಿ ಮಾಡುತ್ತಿರುವುದು ಏನು,ಬರೀ ರಾಜಕಾರಣ ಮಾಡುತ್ತಿದ್ದು ಇವೆಲ್ಲವೂ ಮಾಡುವುದಾದರೆ ಕಾವಿ ಬಿಟ್ಟು ಬಿಜೆಪಿ ಪಕ್ಷಕ್ಕೆ ಸೇರಿಕೊಂಡು ರಾಜಕಾರಣ ಮಾಡಲಿ ಎಂದರು.

ಶಾಂತಿಗೆ ಹೆಸರಾದ ಚಿಂಚೋಳಿಯಲ್ಲಿ ಮುಂದಿನ ದಿನಗಳಲ್ಲಿ ಪ್ರಚೋದನಕಾರಿ ಭಾಷಣದ ಮೂಲಕ ಸಮಾಜಿಕ ಸ್ವಾಸ್ಥ್ಯ ಹಾಳು ಮಾಡುವ ಯಾವುದೇ ಭಾಷಣಕಾರರಿಗೂ ತಾಲ್ಲೂಕಿನಲ್ಲಿ ಪ್ರವೇಶಕ್ಕೆ ಅ ವಕಾಶ ತಾಲ್ಲೂಕಾಡಳಿತ ನೀಡಬಾರದು,ಒಂದ್ವೇಳೆ ಅವಕಾಶ ನೀಡಿದರೆ ಮುಂದಾಗುವ ಅನಾಹುತಕ್ಕೆ ತಾಲ್ಲೂಕಾಡಳಿತವೇ ನೇರಹೊಣೆಯಾಗಿರುತ್ತದೆ ಎಂದರು.

ಲಕ್ಷ್ಮಣ ಆವುಂಟಿ,ಅಬ್ದುಲ್ ಬಾಷೀದ್,ಸಂತೋಷ ಗುತ್ತೇದಾರ,ಅನೀಲ ಜಮಾದಾರ,ಆನಂದಕುಮಾರ ಟೈಗರ್,ಸುಭಾಷ್ಚಂದ್ರ,ಜಗನ್ನಾಥ ಕಲ್ಲೂರ,ಸೈಯದ್ ಶಬ್ಬೀರ,ನಾಗೇಶ ಗುಣಾಜೀ,ಖಲೀಲ್ ಪಟೇಲ ಸೇರಿದಂತೆ ರುಜು ಮಾಡಿ ಪ್ರಕಟನೆ ಹೊರಡಿಸಿದ್ದಾರೆ.

## ಬೇಸಿಗೆ ಶಿಬಿರ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬುನಾದಿ

• ಉದಯವಾಹಿನಿ ಬಾಗಲಕೋಟೆ

ನಮ್ಮ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನಡೆಸುವ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವದರಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಬೇಸಿಗೆ ಶಿಬಿರವು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬುನಾದಿ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಎಸ್. ಎಸ್.ದಳವಾಯಿ ಅವರು ಹೇಳಿದರು.

ಅವರು ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಆಶ್ರಯದಲ್ಲಿ ಮೂರು ದಿನಗಳ ಕಾಲ ನಡೆಯುವ ಬೇಸಿಗೆ ಶಿಬಿರಕ್ಕೆ ಸಸಿಗೆ ನೀರುಣಿಸಿ, ಉದ್ಘಾಟನೆ ಮಾಡಿ ಮಾತನಾಡಿದರು. ರೋರ್ಸ್ ಮತ್ತು ರೋರ್ಸ್‌ಗಳು ಪರಿಸರ ಸಂರಕ್ಷಣೆ ಮಾಡುವ ಸಂಕಲ್ಪ ಮಾಡಿ, ನಮ್ಮ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಗಳು ತಪ್ಪದೇ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಮಾತನಾಡಿ, ನಮ್ಮ ಪದವಿ ವಿದ್ಯಾರ್ಥಿಗಳಿಗೆ ಶಿಬಿರಗಳು ಉತ್ತಮ ನಡುವಳಿಕೆ ಕಲಿಸುತ್ತವೆ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿಜ್ಞಾ ವಿಧಿಯಂತೆ ವಿದ್ಯಾರ್ಥಿಗಳು ದೇವರು ಮತ್ತು ದೇಶ ಸೇವೆ ಮಾಡುವ ಮನೋಭಾವ ಬೆಳೆಸಿಕೊಂಡು, ಸಮಾಜ ಸೇವೆಯ ಮೂಲಕ ತಮ್ಮಲ್ಲಿ ನಂಬಿಕೆ ಮತ್ತು ವಿಶ್ವಾಸ ಗಳಿಸಲು ಸಾಧ್ಯವಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಚಾಲಕ ಪ್ರಮೋದ ಚೌಗಲೆ ಅವರು ಪಾಲ್ಗೊಂಡು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ರೋರಸ್ ಸ್ಕೌಟ್ಸ್ ಲೀಡರ್ ರವಿ ಗಡದನ್ನವರ ಅವರು ಅಳತೆ ಮತ್ತು ಅಂದಾಜು ಮಹತ್ವ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ರೋಸ್ ಲೀಡರ್ ಪ್ರೊ.ಪರಸಪ್ಪ ತಳವಾರ ಪ್ರಾಸ್ತಾವಿಕ ನುಡಿ ಹೇಳಿದರು.



ಉದಯವಾಹಿನಿ ಚಿತ್ರ

## ಸಾಗುವಳಿ ಚೀಟಿ, ಪಟ್ಟ ಪಹಣಿ ನೀಡಲು ಒತ್ತಾಯಿಸಿ ಧರಣಿ

### ಹೋರಾಟಕ್ಕೆ ಪ್ರತಿಕ್ರಿಯಿಸದ ತಹಶೀಲ್ದಾರ್, ಹಾಗೂ ಶಿವರಾಜ್ ತಂಗಡಗಿ

• ಉದಯವಾಹಿನಿ ಕಾರಟಗಿ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ತಾಲ್ಲೂಕ ಸಮಿತಿ ಕಾರಟಗಿ ನೇತ್ರತ್ವದಲ್ಲಿ ಕಾರಟಗಿ ತಹಶೀಲ್ದಾರರ ಕಛೇರಿ ಮುಂದೆ 19 ದಿನಗಳಿಂದ ಸಿಂಗನಾಳ ಗ್ರಾಮದ ಸರಕಾರಿ ಭೂಮಿ ಸರ್ವ ನಂ 63. ಮತ್ತು 7.8.9.10 ಮತ್ತು 116 . 117 ರಲ್ಲಿ ಮತ್ತು ಹುಳ್ಳಿಹಾಳ ಗ್ರಾಮದ ಸರ್ವೆನಂ 139ರಲ್ಲಿ ಸಾಗುವಳಿ ಮಾಡುವವರಿಗೆ ಸಾಗುವಳಿ ಚೀಟಿ ಪಟ್ಟ ಪಹಣಿ ನೀಡಲು ಒತ್ತಾಯಿಸಿ ಧರಣಿ ಮುಂದುವರೆದಿದ್ದು.ಈ ಹೋರಾಟಕ್ಕೆ ಕರ್ನಾಟಕ ಪ್ರಾಂತ ಕೃಷ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ ಚಂದ್ರಪ್ಪ ಹೊಸ್ಕರಾ ಭಾಗವಹಿಸಿ ಬೆಂಬಲಿಸಿದರು, ತರುವಾಯ

**ಮಹಿಳೆ ಅಸ್ವಸ್ಥ ಆಸ್ಪತ್ರೆಗೆ ದಾಖಲು**

ಸಾಗುವಳಿ ಚೀಟಿ ನೀಡುವಂತೆ ಸತತ 19 ದಿನಗಳ ಹೋರಾಟದಲ್ಲಿ ಇಂದು ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿ ಬಿಸಿಲಿನ ತಾಪಕ್ಕೆ ಅಮೀನಾ ಬಿ ಮಹಿಳೆಯೊಬ್ಬರು ರಕ್ತದ ಒತ್ತಡ ಏರುಪೇರಾಗಿ ಅಸ್ವಸ್ಥ ಗೊಂಡು. ಕಾರಟಗಿಯ ಸಮುದಾಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆಗೆ ಗಂಗಾವತಿ ಸಮುದಾಯ ಆಸ್ಪತ್ರೆಯೊಂದರಲ್ಲಿ. ದಾಖಲಿಸಿ ಚಿಕಿತ್ಸೆ ಮುಂದುವರೆದಿದೆ.



ಉದಯವಾಹಿನಿ ಚಿತ್ರ

ಮಹಿಳೆ ಅಸ್ವಸ್ಥಗೊಂಡು ಹೋರಾಟ ಮುಂದುವರಿಸಿದರೂ ಇಲ್ಲಿಯವರೆಗೆ 19 ದಿನಗಳಾದರೂ ಸಚಿವ ತಂಗಡಗಿಯವರನ್ನ ಹಾಗೂ ತಹಶೀಲ್ದಾರ್ ಕುಮಾರಸ್ವಾಮಿ ಎಂ ಇವರನ್ನು ಐದು ಆರು ಸಾರಿ ಭೇಟಿ ಮಾಡಿದರೂ ನಮ್ಮ ದಲಿತರ ಹೋರಾಟಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಹೋರಾಟಗಾರ ಬಸವರಾಜ್ ಎಂ ಬೇಸರ ವ್ಯಕ್ತಪಡಿಸಿ , ಪತ್ರಿಕೆ ಮೂಲಕ ತಿಳಿಸಿದ್ದಾರೆ

ಸಂದರ್ಭದಲ್ಲಿ ಎಂ,ಬಸವರಾಜ ಹುಸೇನಪ್ಪ ಕೆ, ಕರಿಯಪ್ಪ ಸಿಂಗನಾಳ ವಿಕಾಸ ಕರಿಯಪ್ಪ ಮುಖರತನಾಳ ಹನುಮಂತ ಸಿಡ್ಲಾ ಬಾವಿ ಮುದುಕಮ್ಮ ಭೋವಿ ದುರಗಮ್ಮ ಬಸಿರಿಹಾಳ ನಾಗಮ್ಮ ಯಮನಮ್ಮ ಲಕ್ಷ್ಮಿ ಬಸಮ್ಮ ಹುಲ್ಲೇಶ ಎಸ್ ಸಿ,. ಮತ್ತಿತರರು ಇದ್ದರು.

## ಜನಿವಾರ ತಗೆಸಿದ್ದು ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ

## ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು

• ಉದಯವಾಹಿನಿ ಮುದ್ದೇಬಿಹಾಳ

ಜನಿವಾರ ಸಂಸ್ಕಾರಕ್ಕೆ ತನ್ನದೆಯಾದ ಗೌರವವಿದೆ ಅದನ್ನು ಅರಿಯದೆ ಜನಿವಾರ ಕಟ್ ಮಾಡಿ ಕಸದ ಬುಟ್ಟಿಗೆ ಎಸೆದಿರುವುದು ನಮ್ಮ ಜನಿವಾರ ಸಮಾಜಗಳ ಹಿಂದೂ ಸಂಸ್ಕೃತಿ ಭಾವನೆಗಳಿಗೆ ಬಹುದೊಡ್ಡ ಧಕ್ಕೆಯಾಗಿದೆ ಎಂದು ತಾಲ್ಲೂಕ ವಿಪ್ರ ಸಮಾಜದ ಅಧ್ಯಕ್ಷ ಬಿ ಪಿ ಕುಲಕರ್ಣಿ ಬಜಾರ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ವಾಸುದೇವ ಶಾಸ್ತ್ರೀ ಹೇಳಿದರು.

ಶನಿವಾರ ಮುದ್ದೇಬಿಹಾಳ ತಾಲ್ಲೂಕಿನ ಜನಿವಾರ ಧರಿಸುವ 18 ಸಮಾಜಗಳ ನೇತೃತ್ವದಲ್ಲಿ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಭಾವನೆಗಳಿಗೆ ಚ್ಯುತಿ ತಂದ ಘಟನೆ ಖಂಡಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ನಡೆಸಿದ ಬೃಹತ್ ಹೋರಾಟ ಬೈಕ್ ಜಾಥ ನಂತರ ತಹಶೀಲ್ದಾರ ಕಚೇರಿ ಆವರಣದಲ್ಲಿ ಮಾತನಾಡಿದರು ಕರ್ನಾಟಕ ರಾಜ್ಯದಲ್ಲಿ ಹಿಂದೂ ವಿರೋಧಿ ಕೃತ್ಯಗಳು ಹಿಂದೂ ಧಾರ್ಮಿಕತಗೆ ಚ್ಯುತಿ ನಿಂದನೆ ಮಾಡುವ ಕಾರ್ಯ ಹೆಚ್ಚಾಗಿದೆ ಹಿಂದೂ ವಿರೋಧಿ ಧೋರಣೆಯನ್ನು ರಾಜ್ಯ ಸರಕಾರ ಮುಂದುವರೆಸಿದ್ದಲ್ಲಿ ಹಿಂದೂಗಳ ಮತವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರಲ್ಲದೆ ಜನಿವಾರ ತಗೆಸಿದ್ದ ಹಿಂದಿರುವ ಪ್ರಭಾವಿಗಳ ಮೇಲೆ ಕಠಿಣ ಕ್ರಮವಾಗಬೇಕು ಸಸ್ಪೆಂಡ್ ಮಾಡುವುದರಿಂದ ಏನು ಆಗುವುದಿಲ್ಲ ಹಿಂದೂ ಧಾರ್ಮಿಕ ನಿಂದನೆ ಮಾಡಿದವರಿಗೆ ಉಗ್ರ ಶಿಕ್ಷೆ ವಿಧಿಸಬೇಕು ಇಲ್ಲಾವಾದಲ್ಲಿ ಧರಣಿ ಸತ್ಯಾಗ್ರಹ ಹೋರಾಟ ಆರಂಭಿಸಬೇಕಾಗುತ್ತದೆ ಎಂದರು.

ಈ ವೇಳೆ ಚಿತ್ರ ನಿರ್ದೇಶಕ ಅನುರಾಗ ಕಶ್ಯಪ ಬ್ರಾಹ್ಮಣ ವಿರೋಧಿ ನಿಂದನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಅರವಿಂದ ಕುಲಕರ್ಣಿ, ವಿಜಯಕುಮಾರ್ ಬಡಿಗೇರ, ಸುರೇಶ ಕುಲಕರ್ಣಿ ಈರಣ್ಣ ಬಡಿಗೇರ ಮಾತನಾಡಿ ಸಿಇಟಿ ಪರೀಕ್ಷೆಯಲ್ಲಿ ಈ ಹಿಂದೆ ಹಿಂದೂ ಮಹಿಳೆಯರ ಕಾಲುಂಗರ ಮಾಂಗಲ್ಯ ತಗೆಸಿದ್ದರು ಈಗ ಜನಿವಾರ ತಗೆಸಿದ್ದಾರೆ ರಾಜ್ಯ ಕಾಂಗ್ರೆಸ್ ಸರಕಾರ ಸತತವಾಗಿ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಕೆಲಸವನ್ನು ಮಾಡುತ್ತಿದೆ ಇಂತಹ ಘಟನೆ ಅನ್ಯ ಧರ್ಮಿಯರ ವಿರುದ್ಧ ಮಾಡುವ ಧೈರ್ಯ ಸರಕಾರಕ್ಕೆ ಇಲ್ಲಾ ಹಿಂದೂಗಳು ಏನೆ ಮಾಡಿದರು ಸಹಿಸಿಕೊಳ್ಳುತ್ತಾರೆಂಬ ಭಾವನೆ ಈ ಸರಕಾರಕ್ಕಿದೆ ಎಂದು ಕಿಡಿಕಾರಿದರು.

ಮನವಿ ಪತ್ರವನ್ನು ಎಬಿವಿಪಿ ಹಿರಿಯ ಕಾರ್ಯಕರ್ತ ಉದಯಸಿಂಗ್ ರಾಯಚೂರು ಓದಿದರು ಮನವಿಯನ್ನು ತಹಶಿಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ, ಶಿಕ್ಷಣ ಸಚಿವರಿಗೆ ಗೃಹ ಸಚಿವರಿಗೆ ಸಲ್ಲಿಸಿದರು.

ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಿಂದ ಆರಂಭವಾದ ಬೈಕ್ ಜಾಥಾ ಶಾರದಾ ದೇವಿ ಮಂದಿರ , ಲಕ್ಷ್ಮೀ ವೆಂಕಟೇಶ್ವರ ದೇವಾಲಯ ಮಾರ್ಗವಾಗಿ ಗ್ರಾಮದೇವತೆ ಕಟ್ಟೆಯಿಂದ ಬಸವೇಶ್ವರ ವೃತ್ತ , ಕಿತ್ತೂರ ರಾಣಿ ಚೆನ್ನಮ್ಮ ವೃತ್ತ ಮಾರ್ಗವಾಗಿ ತಹಶಿಲ್ದಾರ ಕಚೇರಿಯ ವರಗೆ ಮಾಡಲಾಯಿತು.



ಉದಯವಾಹಿನಿ ಚಿತ್ರ

**ಬೃಹತ್ ಬೈಕ್ ಜಾಥಾ**

## ನೂತನ ಬಸ್ ಸಂಚಾರ ಆರಂಭ

• ಉದಯವಾಹಿನಿ ಕೌಜಲಗಿ

ಕುಲಗೋಡ ಕೌಜಲಗಿ ಭಾಗದ ಪ್ರಯಾಣಿಕರ ಅನುಕೂಲಕ್ಕಾಗಿ ವಾಕರಸಾಸಂ ಚಿಕ್ಕೋಡಿ ವಿಭಾಗೀಯ ಗೋಕಾಕ ಘಟಕದ ವತಿಯಿಂದ ನೂತನವಾಗಿ ಕುಲಗೋಡ ಕೌಜಲಗಿ-ಬೆಳಗಾವಿ ಎರಡು ಬಸ್ಸುಗಳು ಆರಂಭಗೊಡಿವೆ. ವಾಕರಸಾಸಂ ಚಿಕ್ಕೋಡಿ ವಿಭಾಗೀಯ ನಿಯಂತ್ರಣಾಧಿಕಾರಿ ಶಶಿಧರ ಮತ್ತು ಗೋಕಾಕ ಡಿಪೋದ ವ್ಯವಸ್ಥಾಪಕ ಸುನೀಲ ಹೊನವಾಡ ಈ ಮಾರ್ಗದ ಸಾರಿಗೆ ವ್ಯವಸ್ಥೆ ಕುರಿತು ಆದೇಶ ಹೊರಡಿಸಿದ್ದಾರೆ. ಕುಲಗೋಡ-ಕೌಜಲಗಿ-ಬೆಳಗಾವಿ ನೂತನ ಬಸ್ಸಿಗೆ ಸಮೀಪದ ಕುಲಗೋಡ ಗ್ರಾಮದ ಬಸ್ ನಿಲ್ದಾಣದಲ್ಲಿ ಕಬ್ಬು- ತೆಂಗು ಹೊಮಾಲೆಗಳಿಂದ ಅಲಂಕರಿಸಿ ಗ್ರಾಮದ ಮುಖಂಡರು ಗುರುವಾರ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕುಲಗೋಡ ಗ್ರಾಮದ ಮುಖಂಡರು, ಯುವಕರು, ಪ್ರಯಾಣಿಕರು ಇದ್ದರು. ನೂತನವಾಗಿ ಕುಲಗೋಡ ಕೌಜಲಗಿ- ಬೆಳಗಾವಿ 61ನೇ ಮಾರ್ಗದ ವೇಗದೂತ ಸಾರಿಗೆ ಮುಂಜಾನೆ 10.45 ಕ್ಕೆ ಕುಲಗೋಡದಿಂದ ಬಿಡುಗಡೆಯಾಗಿ, ಕೌಜಲಗಿ, ಬೆಟಗೇರಿ,ಮಮದಾಪುರ, ಕೊಳವಿ, ಅಂಕಲಗಿ, ಹುದಲಿ ಮೂಲಕ ಬೆಳಗಾವಿಗೆ ಮಧ್ಯಾಹ್ನ 1 ಗಂಟೆಗೆ ತಲುಪಲಿದ್ದು, ಇದೇ ಸಾರಿಗೆ ಮರಳಿ ಮಧ್ಯಾಹ್ನ 1.30 ಕ್ಕೆ ಬೆಳಗಾವಿ ನಗರದಿಂದ ಬಿಡುಗಡೆಯಾಗಿ, ಹುದಲಿ, ಅಂಕಲಗಿ, ಕೊಳವಿ, ಮಮದಾಪುರ, ಕೌಜಲಗಿ ಮೂಲಕ ಕುಲಗೋಡ ಗ್ರಾಮಕ್ಕೆ ಸಾಯಂಕಾಲ 3.45 ಕ್ಕೆ ತಲುಪಲಿದೆ. ಇನ್ನೊಂದು ಕುಲಗೋಡ-ಕೌಜಲಗಿ ಬೆಳಗಾವಿ 62ನೇ ಮಾರ್ಗದ ವೇಗದೂತ ಸಾರಿಗೆ ಮುಂಜಾನೆ 11.15ಕ್ಕೆ ಕುಲಗೋಡದಿಂದ ಬಿಡುಗಡೆಯಾಗಿ, ಕೌಜಲಗಿ-ಹುಲಕುಂದ ಯರಗಟ್ಟಿ-ನೇಸರಗಿ ಮೂಲಕ ಬೆಳಗಾವಿಗೆ ಮಧ್ಯಾಹ್ನ 1.30 ಕ್ಕೆ ತಲುಪಲಿದ್ದು, ಇದೇ ಸಾರಿಗೆ ಮರಳಿ ಮಧ್ಯಾಹ್ನ 2 ಗಂಟೆಗೆ ಬೆಳಗಾವಿ ನಗರದಿಂದ ಬಿಡುಗಡೆಯಾಗಿ ನೇಸರಗಿ-ಯರಗಟ್ಟಿ ಹುಲಕುಂದ ಕೌಜಲಗಿ ಮೂಲಕ ಕುಲಗೋಡ ಗ್ರಾಮಕ್ಕೆ ಸಾಯಂಕಾಲ 4:15ಕ್ಕೆ ತಲುಪಲಿದ್ದು ಕುಲಗೋಡ ಕೌಜಲಗಿ ಭಾಗದ ಪ್ರಯಾಣಿಕರು ನೂತನ ಸಾರಿಗೆ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕುಲಗೋಡ ಸಾರಿಗೆ ನಿಯಂತ್ರಕ ಎ.ಬಿ. ಜಮಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಏ.26 ರಿಂದ ಜೂನ್ 09 ರವರೆಗೆ ಜಾನುವಾರುಗಳಿಗೆ 7ನೇ ಸುತ್ತಿನ ಕಾಲುಬಾಯಿ ರೋಗ ಲಸಿಕೆ

# ಕಾಲುಬಾಯಿ ರೋಗ ಲಸಿಕಾ ಅಭಿಯಾನ ಯಶಸ್ವಿಗೊಳಿಸಿ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲೆಯಾದ್ಯಂತ 7ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಅಭಿಯಾನ ಇದೇ ಏಪ್ರಿಲ್ 26 ರಿಂದ ಜೂನ್ 9ರವರೆಗೆ ನಡೆಯಲಿದ್ದು, ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಪಶು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ ಅಡಿಯಲ್ಲಿ 7ನೇ ಸುತ್ತಿನ ಕಾಲುಬಾಯಿ ರೋಗದ ಲಸಿಕಾ ಅಭಿಯಾನ ಕುರಿತು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾನುವಾರುಗಳಿಗೆ ಉಚಿತ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಜೊತೆಗೆ ಚರ್ಮಗಂಟು ರೋಗದ ಲಸಿಕೆಯನ್ನು ನೀಡಲಾಗುತ್ತಿದೆ. ತಪ್ಪದೇ ಜಾನುವಾರುಗಳಿಗೆ ಲಸಿಕೆಯನ್ನು ಹಾಕಿಸಿ, ರೋಗ ಬರದಂತೆ ಜಾನುವಾರುಗಳನ್ನು ರಕ್ಷಿಸಿ, ಆರ್ಥಿಕ ನಷ್ಟ ತಡೆಯಿರಿ ಎಂದು ಹೇಳಿದರು. ರೈತರು ಕೂಡ ಸರ್ಕಾರದಿಂದ ಏರ್ಪಡಿಸಲಾಗಿರುವ ಈ ವಿಶೇಷ ಲಸಿಕಾ ಅಭಿಯಾನವನ್ನು ಯಶಸ್ವಿಗೊಳಿಸಲು, ತಮ್ಮ ಜಾನುವಾರುಗಳಿಗೆ ತಪ್ಪದೆ ಲಸಿಕೆ ಹಾಕಿಸುವ ಮೂಲಕ ಸಹಕಾರ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಅವರು ಮನವಿ ಮಾಡಿದರು.


ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಕಾಲು ಬಾಯಿ ರೋಗ ಲಸಿಕೆಯು ಕೇಂದ್ರ ಸರ್ಕಾರದಿಂದ ಸರಬರಾಜಾಗಿದ್ದು, ಈ ರೋಗದ ವಿರುದ್ಧ ಎಲ್ಲಾ ದನ, ಎಮ್ಮೆ ಮತ್ತು ಕರುಗಳಿಗೆ ಉಚಿತವಾಗಿ ಲಸಿಕಾ ಕಾರ್ಯಕ್ರಮವನ್ನು ಇದೇ ಏಪ್ರಿಲ್ 26 ರಿಂದ ಜೂನ್ 09 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ 1,76,949 ದನ, 78,654 ಎಮ್ಮೆ ಸೇರಿದಂತೆ ಒಟ್ಟು 2,55,603 ಜಾನುವಾರುಗಳಿದ್ದು, 3,17,587 ಡೋಸ್ ಲಸಿಕೆ ಲಭ್ಯವಿರುತ್ತದೆ.

ಜಿಲ್ಲೆಯಲ್ಲಿ ಒಟ್ಟು 3,390 ಬ್ಲಾಕ್‌ಗಳನ್ನು ಮಾಡಲಾಗಿದೆ. 291 ಲಸಿಕಾದಾರರು ಮನೆ ಬಾಗಿಲಿಗೆ ಭೇಟಿ ನೀಡಿ, ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ. ರೈತರು ಲಸಿಕಾ ಸಿಬ್ಬಂದಿಗಳಿಗೆ ಸಹಕರಿಸಿ ತಪ್ಪದೇ ಜಾನುವಾರುಗಳಿಗೆ ಲಸಿಕೆ ಹಾಕಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ ''ಉಚಿತ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ಎನ್.ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಶಿಕ್ಷಣ ಇಲಾಖೆಯ ಚಿದಾನಂದ, ಜಿಲ್ಲಾ ವಾರ್ತಾಧಿಕಾರಿ ಬಿ.ವಿ.ತುಕಾರಾಂರಾವ್ ಸೇರಿದಂತೆ ಮುಖ್ಯ ಪಶುವೈದ್ಯಾಧಿಕಾರಿಗಳಾದ ಡಾ. ಎನ್.ಗಿರಿರಾಜ್, ಡಾ.ಇಂದ್ರಬಾಯಿ, ಡಾ.ರಂಗಪ್ಪ, ಡಾ.ಕಿರಣ್, ಡಾ.ರಂಗಸ್ವಾಮಿ, ಡಾ.ರೇವಣ್ಣ, ಡಾ. ಹರೀಶ್ ಇದ್ದರು.



ಉದಯವಾಹಿನಿ ಚಿತ್ರ

**ಕಾಲುಬಾಯಿ ರೋಗವು ವೈರಾಣುವಿನಿಂದ ಹರಡುವ ಸಾಂಕ್ರಾಮಿಕ ರೋಗ. ಇದರಿಂದ ಜಾನುವಾರುಗಳು ಸಾವನ್ನಪ್ಪುವುದಿಲ್ಲವಾದರೂ, ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಹೀಗಾಗಿ ಕಾಲುಬಾಯಿ ರೋಗವನ್ನು ನಿಯಂತ್ರಿಸಿ ನಿರ್ಮೂಲನೆ ಮಾಡಲು ಪ್ರತಿ 6 ತಿಂಗಳಿಗೊಮ್ಮೆ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಕಡ್ಡಾಯ - ಡಾ.ಎನ್.ಕುಮಾರ್ ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಉಪನಿರ್ದೇಶಕ**

**ಅಪರ ಜಿಲ್ಲಾಧಿಕಾರಿ ಸೂಚನೆ**

## ನೇತ್ರಾವತಿ ಮಾಲಿನ್ಯದ ವಿರುದ್ಧ ಪ್ರತಿಭಟನೆಗೆ ಸಜ್ಜು

• ಉದಯವಾಹಿನಿ ಉಡುಪಿ

ಬಂಟ್ವಾಳ ಮತ್ತು ಮಂಗಳೂರಿಗೆ ಕುಡಿಯುವ ನೀರಿನ ಪ್ರಮುಖ ಮೂಲವಾಗಿರುವ ನೇತ್ರಾವತಿ ನದಿಯ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ಮೇ ಕೊನೆಯ ವಾರದಲ್ಲಿ ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ ನಿರ್ಧರಿಸಿದೆ.

ನೇತ್ರಾವತಿ ನದಿಯನ್ನು ಕಲುಷಿತಗೊಳಿಸದಂತೆ ನೋಡಿಕೊಳ್ಳಲು ಸರ್ಕಾರದ ಮೇಲೆ ಒತ್ತಡ ಹೇರಲು ಶೀಘ್ರದಲ್ಲೇ ಸಾಂಕೇತಿಕ ಪ್ರತಿಭಟನೆಯನ್ನು ಆಯೋಜಿಸಲಾಗುವುದು ಎಂದು ಅವರು ಹೇಳಿದರು. ಅವಳಿ ಜಿಲ್ಲೆಗಳ ಕರಾವಳಿ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವತ್ತಲೂ ಸಮಿತಿ ಗಮನಹರಿಸಲು ಉದ್ದೇಶಿಸಿದೆ.

ಅವಳಿ ಜಿಲ್ಲೆಗಳಿಗೆ 24 ಗಂಟೆಗಳ ವಿದ್ಯುತ್ ಒದಗಿಸಬೇಕೆಂಬ ಸಮಿತಿಯ ಹಿಂದಿನ ಬೇಡಿಕೆಯ ಬಗ್ಗೆ ಮಾತನಾಡುತ್ತಾ, ಉಡುಪಿ ಜಿಲ್ಲೆಯಲ್ಲಿ ಅದಾನಿ ನಿರ್ವಹಿಸುತ್ತಿರುವ ಉಷ್ಣ ವಿದ್ಯುತ್ ಸ್ಥಾವರವು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ 24/7 ವಿದ್ಯುತ್ ಪೂರೈಸಬೇಕು ಎಂಬ ಸಮಿತಿಯ ಹಿಂದಿನ ಬೇಡಿಕೆಗೆ ರಾಜ್ಯ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ.

ತಮ್ಮ ಬೇಡಿಕೆಗೆ ಬೆಂಬಲವಾಗಿ, ಸಮಿತಿಯು ಸ್ಪೀಕರ್ ಯು ಟಿ ಖಾದರ್, ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯ್ಲಿ ಮತ್ತು ಸದಾನಂದ ಗೌಡ ಅವರೊಂದಿಗೆ ಚರ್ಚೆ ನಡೆಸಿದೆ. ಸ್ಪೀಕರ್ ಯು ಟಿ ಖಾದರ್ ಈ ವಿಷಯದ ಬಗ್ಗೆ ಇಂಧನ ಸಚಿವರಿಗೆ ಪತ್ರ ಬರೆದಿದ್ದಾರೆ ಎಂದು ವರದಿಯಾಗಿದೆ.



ಉದಯವಾಹಿನಿ ಚಿತ್ರ

### ಕಲಬುರಗಿಗೆ ರಥಯಾತ್ರೆ

**2010 ರಿಂದ ಪಡುಬಿದ್ರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸ್ಥಾವರವು ಪ್ರಸ್ತುತ 1300 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ, ಅದರಲ್ಲಿ ಸುಮಾರು 45% ರಾಜಧಾನಿ ಬೆಂಗಳೂರಿಗೆ ಸರಬರಾಜು ಮಾಡಲಾಗುತ್ತದೆ. ಸಮಿತಿಯು ಇದಕ್ಕೆ ಯಾವುದೇ ಆಕ್ಷೇಪಣೆ ಹೊಂದಿಲ್ಲವಾದರೂ, ಸ್ಥಾವರ ಇರುವ ಜಿಲ್ಲೆಗಳಿಗೆ ಅಸಮಂಜಸ ವಿದ್ಯುತ್ ಸರಬರಾಜಿನ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದರು. ವಿದ್ಯುತ್ ಅನ್ನು ಇತರ ಪ್ರದೇಶಗಳಿಗೆ ತಿರುಗಿಸುವ ಮೊದಲು ಅವಳಿ ಜಿಲ್ಲೆಗಳಿಗೆ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಅವರ ಪ್ರಾಥಮಿಕ ಬೇಡಿಕೆಯಾಗಿದೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿ ಹಾರ ಹುಡುಕಲು ಸಾಧ್ಯವಾಗಬಹುದು. ಹಣಕಾಸಿನಲ್ಲಿ ಸುಧಾರಣೆ ಪ್ರಮುಖ ಖರೀದಿಗಳನ್ನು ಮಾಡುವುದನ್ನು ಅನುಕೂಲಕರವಾಗಿಸುತ್ತದೆ.

**ವೃಷಭ** ಮಾದಕವಸ್ತುವಿನ ಅವಲಂಬನೆ ಹೆಚ್ಚುವ ಸಾಧ್ಯತೆಗಳಿರುವುದರಿಂದ ಸ್ವಯಂ ಔಷಧೋಪಚಾರ ಮಾಡಬೇಡಿ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ.

**ಮಿಥುನ** ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಸಾಮಾ ಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ.

**ಕರ್ಕಾಟಕ** ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ಈ ರಾಶಿಚಕ್ರದ ವಿವಾಹಿತ ಜನರಿಗೆ ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

**ಸಿಂಹ** ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ.

**ಕನ್ಯಾ** ಇಂದು ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಸಂಬಂಧಿಗಳಿದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ.

**ತುಲಾ** ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು, ನೀವು ಅವರ ಮಾತುಗಳನ್ನು ಬಹಳ ಗಮನವಾಗಿ ಕೇಳಬೇಕಾದ ಅಗತ್ಯವಿದೆ.

**ವೃಶ್ಚಿಕ** ಇಂದು ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ನೀವು ಕಛೇರಿಯಲ್ಲಿ ಹೆಚ್ಚು ಸಮಯ ಕಳೆದರೆ ನಿಮ್ಮ ಮನೆಯ ಜೀವನಕ್ಕೆ ಹಾನಿಯಾಗಬಹುದು. ನಿಮ್ಮ ಪ್ರೀತಿಪಾತ್ರರ ಅನಗತ್ಯ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಡಿ.

**ಧನಸ್ಸು** ಮಾನಸಿಕ ಭಯ ನೀವು ಧೈರ್ಯಗೆಡಿಸಬಹುದು. ಸಕಾರಾತ್ಮಕ ಚಿಂತನೆ ಮತ್ತು ಭವಿಷ್ಯವನ್ನು ನೋಡುವುದು ಇದನ್ನು ದೂರವಿಡುತ್ತದೆ. ಹೂಡಿಕೆಗಳು ಬಗ್ಗೆ ನಿಮ್ಮ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ.

**ಮಕರ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ.

**ಕುಂಭ** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ ಮತ್ತು ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು.

**ಮೀನ** ಯಾವುದೇ ಪ್ರಮಾಣ ಮಾಡುವ ಮೊದಲು ತಜ್ಞರನ್ನು ಸಂಪರ್ಕಿಸಿ. ಸಂಬಂಧಿಗಳು ಬೆಂಬಲ ನೀಡುತ್ತಾರೆ ಮತ್ತು ನಿಮ್ಮ ಮನಸ್ಸಿಗೆ ಆ ಹೊರೆಯಾದ ಆ ತೊಂದರೆಯನ್ನು ಕಡಿಮೆ ಮಾಡುತ್ತಾರೆ.

## ಚಾಪ್ಲಾನಾಯಕ ತಾಂಡಾದಲ್ಲಿ ನೀರಿನ ಸಮಸ್ಯೆ ಪರಿಹರಿಸಲು ಮನವಿ

• **ಉದಯವಾಹಿನಿ, ಚಿಂಚೋಳಿ**


ಉದಯವಾಹಿನಿ ಚಿತ್ರ

ತಾಲ್ಲೂಕಿನ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನ ಸೇನೆ ಪದಾಧಿಕಾರಿಗಳ ವತಿಯಿಂದ ತಾಲ್ಲೂಕಿನ ಶಾಧಿಪೂರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಚಾಪ್ಲಾನಾಯಕ ತಾಂಡಾದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ ಶೀಘ್ರದಲ್ಲೇ ಸಂಬಂಧಿಸಿದ ಗ್ರಾ.ಪಂ.ಅಧಿಕಾರಿಗಳು ಜನಪ್ರತಿನಿಧಿಗಳು ತಾಲ್ಲೂಕಾ ಮಟ್ಟದ ಅಧಿಕಾರಿಗಳು ಗಮನಹರಿಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನ ಸೇನೆಯ ಅಧ್ಯಕ್ಷ ಲಿಂಬಾಜಿ ಚವ್ಹಾಣ ನೇತೃತ್ವದಲ್ಲಿ ಶಾಧಿಪೂರ ಗ್ರಾ.ಪಂಗೆ ಮನವಿಪತ್ರ ಸಲ್ಲಿಸಿದರು. ವಿನೋಧ ರಾಠೋಡ್,ರವಿರೆಡ್ಡಿ ರಾಠೋಡ್, ನರಸಿಂಹ ಪವ್ಹರ, ವಿಠಲ ಸಿ.ರಾಠೋಡ್,ರಾಮಚಂದ್ರ ರಾಠೋಡ್,ಗೋಪಾಲ ನಾಯಕ,ಅಣದೂ ರಾಠೋಡ್,ಅನೇಕರಿದ್ದರು.

## ಹೈವೇಯಲ್ಲಿ ಬೆಂಕಿಗಾಹುತಿಯಾದ ಲಾರಿ

• **ಉದಯವಾಹಿನಿ ಕೂಡ್ಲಿಗಿ**

ಹಿಂಡಿ ತುಂಬಿದ ಲೋಡ್ ಲಾರಿಯೊಂದು ಹೈವೇ 50ರ ರಸ್ತೆಯಲ್ಲಿ ಹೋಗುತ್ತಿರುವಾಗ್ಗ ಏಕಾಏಕಿ ಪಲ್ಟಿಯಾಗಿ ಧಗಧಗನೆ ಹೊತ್ತಿ ಉರಿದ ಘಟನೆ ಬೆಳಿಗ್ಗ 6-30ಗಂಟೆಗೆ ತಾಲೂಕಿನ ಶಿವಪುರ ಸಮೀಪದ ಹೈವೇ 50ರಲ್ಲಿ ಜರುಗಿದೆ. ತಾಲ್ಲೂಕಿನ ಶಿವಪುರ ಸಮೀಪದ ಹೈವೇ 50ರ ರಸ್ತೆಯಲ್ಲಿ ಏಕಾ ಏಕಿ ಪಲ್ಟಿಯಾಗಿದ್ದು ತಕ್ಷಣ ಬೆಂಕಿಹತ್ತಿ ಧಗಧಗನೇ ಹೊತ್ತಿ ಉರಿಯಲಾರಾಂಭಿಸಿತು ಚಾಲಕ ತಕ್ಷಣ ಪ್ರಾಣಪಾಯದಿಂದ ಪಾರಾಗಿದ್ದು ವಿಷಯ ತಿಳಿದ ಕೂಡ್ಲಿಗಿ ಅಗ್ನಿಶಾಮಕ ಸಿಬ್ಬಂದಿ ಲಾರಿಗೆ ಹತ್ತಿದ ಬೆಂಕಿಯನ್ನು ಆರಿಸಿದ್ದಾರೆ.

### ಒಳಚರಂಡಿ ಯೋಜನೆಯನ್ನು ಒಬ್ಬ ರಿಯಲ್ ಎಸ್ಟೇಟ್ ಉದ್ಯಮಿಯ ಹಿತ ಕಾಯುವುದಕ್ಕೆ ಬಲಿಕೊಡಲಾಗುತ್ತಿದೆ

# ಉದ್ಯಮಿ ಪರ 'ಬಿಜೆಪಿ-ಕಾಂಗ್ರೇಸ್ ದುಷ್ಟಕೂಟ: ನಗರ ಕಾಂಗ್ರೇಸ್ ಅಧ್ಯಕ್ಷ

• **ಉದಯವಾಹಿನಿ ಪುತ್ತೂರು**

ಪುತ್ತೂರು ನಗರಕ್ಕೆ ಅತ್ಯಂತ ಅವಶ್ಯಕವಾಗಿರುವ ಒಳಚರಂಡಿ ಯೋಜನೆ (ಯುಜಿಡಿ)ಯನ್ನು ಒಬ್ಬ ರಿಯಲ್ ಎಸ್ಟೇಟ್ ಉದ್ಯಮಿಯ ಹಿತ ಕಾಯುವುದಕ್ಕೆ ಬಲಿಕೊಡಲಾಗುತ್ತಿದೆ. ಈ ದೊಡ್ಡ ಯೋಜನೆಯನ್ನು ಬದಿಗೆ ಸರಿಸುವ ಮೂಲಕ ನಗರವನ್ನು ಬಲಿಪಶು ಮಾಡುವ ಸಂಚು ನಡೆಸಲಾಗುತ್ತಿದೆ. ಬಿಜೆಪಿ ಮತ್ತು ಕಾಂಗ್ರೇಸ್‌ನ ಕೆಲ ದುಷ್ಟಕೂಟಗಳು ಇದರ ಹಿಂದೆ ಕೆಲಸ ಮಾಡುತ್ತಿವೆ ಎಂದು ನಗರ ಕಾಂಗ್ರೇಸ್ ಅಧ್ಯಕ್ಷ ಎಚ್. ಮಹಮ್ಮದ್ ಆಲಿ ಗಂಭೀರ ಆರೋಪ ಮಾಡಿದ್ದಾರೆ.

ಅವರು ಪುತ್ತೂರು ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಗರದ ದೊಡ್ಡ ಸಮಸ್ಯೆ ಅಸಮರ್ಪಕ ತ್ಯಾಜ್ಯ ನೀರಿನ ನಿರ್ವಹಣೆ. ಇದಕ್ಕೆ ಶಾಶ್ವತ ಪರಿಹಾರದ ಹಿನ್ನಲೆಯಲ್ಲಿ ಚಿಕ್ಕಮುಡ್ನೂರು ಗ್ರಾಮದ ನೆಕ್ಕರೆ ಎಂಬಲ್ಲಿ ಒಳಚರಂಡಿ ಘಟಕ ನಿರ್ಮಾಣಕ್ಕೆ 5.50 ಎಕರೆ ಸ್ಥಳವನ್ನು ಕಾಯ್ದಿರಿಸಲಾಗಿದೆ. ಕೆಯುಡಬ್ಲ್ಯುಎಸ್ ಇಲಾಖೆಯ ಮೂಲಕ ಸರ್ವೆ ಕೂಡಾ ನಡೆಸಲಾಗಿತ್ತು. ಆದರೆ ಹಿಂದಿನ ಜಿಲ್ಲಾಧಿಕಾರಿ ಹಾಗೂ ಪೌರಾಯುಕ್ತರ ನಿರ್ಲಕ್ಷ್ಯದಿಂದ ಮಂಜೂರುಗೊಂಡ ಈ ಯೋಜನೆ ವಿಫಲವಾಯಿತು. ಇದೀಗ ಕೇಂದ್ರ ಸರ್ಕಾರದ ಸ್ವಚ್ಛಭಾರತ್ ಮಿಷನ್ ಯೋಜನೆಯಡಿ ಈ ಯೋಜನೆಗೆ ರೂ.19 ಕೋಟಿ ಬಿಡುಗಡೆಯಾಗಿದೆ. ಆದರೆ ಈ ಜಾಗದ ಪಕ್ಕದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು ಲೇಔಟ್ ನಿರ್ಮಾಣಕ್ಕೆ ಮುಂದಾಗಿದ್ದು, ಈ ಘಟಕದ ಸ್ಥಳವನ್ನೂ ಅತಿಕ್ರಮಣ ಮಾಡಿದ್ದಾರೆ. ಇಲ್ಲಿಗೆ ಬರುವ ರಸ್ತೆಯನ್ನೂ ಮುಚ್ಚಿದ್ದಾರೆ. ಈ ಬಗ್ಗೆ ನಗರಸಭೆಯ ಪೌರಾಯುಕ್ತರು ಪೊಲೀಸರಿಗೆ ದೂರನ್ನೂ ನೀಡಿದ್ದಾರೆ. ಆದರೂ ರಸ್ತೆ ತೆರವು ಹಾಗೂ ಅತಿಕ್ರಮಣವನ್ನು ತೆರವು ಮಾಡುವಲ್ಲಿ ನಗರಸಭೆ ಮುಂದಾಗದೆ ಹಿಂದೇಟು ಹಾಕುತ್ತಿದೆ. ಬಿಜೆಪಿ ಮತ್ತು ಕಾಂಗ್ರೇಸಿನ ಕೆಲ ದುಷ್ಟಕೂಟ ಉದ್ಯಮಿಗೆ ಬೆಂಬಲ ನೀಡಿರುವುದೇ ಇದಕ್ಕೆ ಕಾರಣ ಎಂದು ಅವರು ಆರೋಪಿಸಿದರು.

ಬಡಾವಣೆ ನಿರ್ಮಾಣಕ್ಕಾಗಿ ಈತ ನಗರ ಯೋಜನಾ ಪ್ರಾಧಿಕಾರಕ್ಕೆ ನೀಡಿರುವ ಅರ್ಜಿಯು ಅನುಮೋದನೆಗಾಗಿ ಪುಡಾ ಕಚೇರಿಯಲ್ಲಿದೆ.

ಕಾಂಗ್ರೇಸ್ ಮತ್ತು ಬಿಜೆಪಿಯ ಕೆಲವರು ರಿಯಲ್ ಎಸ್ಟೇಟ್ ಉದ್ಯಮಿಯ ಜತೆಗೆ ಸೇರಿಕೊಂಡು ಪುತ್ತೂರಿನ ಒಳಚರಂಡಿ ಘಟಕವನ್ನೇ ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿದರು.


ಉದಯವಾಹಿನಿ ಚಿತ್ರ

**ರದ್ದು ಪಡಿಸುವ ಹುನ್ನಾರ..!**

ಇಲ್ಲಿ ಒಳಚರಂಡಿ ತ್ಯಾಜ್ಯ ಘಟಕ ಸ್ಥಾಪನೆಯಾದಲ್ಲಿ ತನ್ನ ಲೇಔಟ್ ಬಡಾವಣೆಗೆ ಖರೀದಿದಾರರು ಬರುವುದಿಲ್ಲ ಎಂಬ ಕಾರಣಕ್ಕೆ ಒಳಚರಂಡಿ ಘಟಕವನ್ನು ರದ್ದುಪಡಿಸುವ ಹುನ್ನಾರ ನಡೆಸಲಾಗುತ್ತಿದೆ. ಅಲ್ಲದೆ ಸುಮಾರು 40 ವರ್ಷಗಳಿಂದ ಇಲ್ಲಿರುವ ನಗರಸಭಾ ರಸ್ತೆಯನ್ನು ಮಣ್ಣು ಹಾಕಿ ಮುಚ್ಚಿ ಅಲ್ಲಿ ಆವರಣ ಗೋಡೆ ರಚನೆ ಮಾಡಲಾಗಿದೆ. ಈ ಬಗ್ಗೆ ಸಾರ್ವಜನಿಕರು ದೂರು ನೀಡಿದ್ದರೂ ನಗರಸಭೆಯ ವತಿಯಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇಲ್ಲಿಗೆ ಪರಿಶೀಲನೆಗೆ ತೆರಳಿದ ನಗರಸಭಾ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪದಲ್ಲಿ ಉದ್ಯಮಿ ವಿರುದ್ಧ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸು ದಾಖಲಾಗಿದೆ. ಆದಾಗ್ಯೂ ಈ ಉದ್ಯಮಿಯು ಸ್ಥಳೀಯ ವ್ಯಕ್ತಿಯೋರ್ವರ ಹೆಸರಿನಲ್ಲಿ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

**ಸ್ವಪಕ್ಷೀಯರಿಗೆ ತರಾಟೆ**

ಈ ಉದ್ಯಮಿ ಬಿಜೆಪಿ ಕಾರ್ಯಕರ್ತ. ಹಾಗಾಗಿ ಬಿಜೆಪಿ ಆಡಳಿತವಿರುವ ನಗರಸಭೆ ಈತನ ವಿರುದ್ಧ ಕ್ರಮಕೈಗೊಳ್ಳಲು ಮುಂದಾಗುತ್ತಿಲ್ಲ. ಕಾನೂನು ಬಾಹಿರವಾಗಿರುವ ಉದ್ಯಮಿಯ ಕೃತ್ಯಕ್ಕೆ ಕಾಂಗ್ರೇಸಿನ ದುಷ್ಟ ಕೂಟವೂ ಬೆಂಬಲಿಸುತ್ತಿದೆ. ಭ್ರಷ್ಟಾಚಾರದ ವಿರುದ್ಧ ನಿಲ್ಲಬೇಕಾಗಿದ್ದ ಕಾಂಗ್ರೇಸಿಗರು ಈತನ ಬೆಂಬಲಕ್ಕೆ ನಿಲ್ಲುವ ಮೂಲಕ ಪಕ್ಷದ ವರ್ಚಸ್ಸಿಗೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದಾರೆ ಎಂದು ಸ್ವಪಕ್ಷೀಯರನ್ನೂ ಮಹಮ್ಮದ್ ಆಲಿ ತರಾಟೆಗೆ ತೆಗೆದುಕೊಂಡರು. ಗೋಷ್ಠಿಯಲ್ಲಿ ನಗರಸಭಾ ಸದಸ್ಯ ಮಹಮ್ಮದ್ ರಿಯಾಝ್, ಕಾಂಗ್ರೇಸ್ ಮುಖಂಡರಾದ ಆಲಿಕುಂಞಿ ಕೊರಿಂಗಿಲ, ಸೈಮನ್ ಗೋನ್ಸಾಲ್ವಿಸ್, ರಾಮಣ್ಣ ನಾಯ್ಕ ಉಪಸ್ಥಿತರಿದ್ದರು.

**ಒಳಚರಂಡಿ ಘಟಕಕ್ಕೆ ಎಳ್ಳುನೀರು**

## ಘನತೆಯೊಂದಿಗೆ ಬದುಕುಬುದು ನಿಮ್ಮ ಹಕ್ಕು ನಿಮ್ಮ ಹಕ್ಕುಗಳ ಉಲ್ಲಂಘನೆಯಾದರೆ ಧ್ವನಿಯೆತ್ತಿ: ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್


ಉದಯವಾಹಿನಿ ಚಿತ್ರ

• **ಉದಯವಾಹಿನಿ ಚಿತ್ರದುರ್ಗ**

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ,ಜಿಲ್ಲಾ ಆರೋಗ್ಯ ಇಲಾಖೆ , ಶ್ರೀ ಗುಲಾಭಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ ಕಾಲ್ಗೆರೆ ಇವರ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನದ ಕಾರ್ಯಕ್ರಮದಡಿಯಲ್ಲಿ ಸ್ತ್ರೀ ಶಕ್ತಿ ಸಂಘಗಳ ಒಕ್ಕೂಟದ ಪರಿವರ್ತನೆ ಸಭೆ ಉದ್ದೇಶಿಸಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಮಾತನಾಡಿ ಎಲ್ಲಾ ಗ್ರಾಮಗಳಲ್ಲಿ ಸ್ತ್ರೀ ಶಕ್ತಿ ಸಂಘಗಳ ರಚನೆಯಾಗಿದೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಶ್ರೀ ಗುಲಾಭಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಕಾರ್ಯನಿರ್ವಹಿಸುತ್ತಿವೆ ಆದರೂ ಸಹ ಸಾಮಾಜಿಕ ಪರಿವರ್ತನೆ ಹೊಂದಿರುವ ಪ್ರಮಾಣ ಅತಿ ಕಡಿಮೆ ಮಹಿಳಾ ದೌರ್ಜನ್ಯ, ಬಾಲ್ಯವಿವಾಹ ಲಿಂಗ ತಾರತಮ್ಯ ಅಪೌಷ್ಟಿಕತೆ ಮಕ್ಕಳ ಹಕ್ಕುಗಳ ಉಲ್ಲಂಘನೆ ಬಾಲ ಕಾರ್ಮಿಕ ಪದ್ಧತಿ ಇಂತಹಾ ಸಾಮಾಜಿಕ ಪಿಡುಗುಗಳು ಕಡಿಮೆಯಾಗಿ ಗುಣಾತ್ಮಕ ಜೀವನ ಶೈಲಿ ನಿಮ್ಮದಾಗುವ ನಿಟ್ಟಿನಲ್ಲಿ ಒಕ್ಕೂಟವು ಕೆಲಸ ಮಾಡಬೇಕು ಘನತೆಯೊಂದಿಗೆ ಬದುಕುಬುದು ನಿಮ್ಮ ಹಕ್ಕು ನಿಮ್ಮ ಹಕ್ಕುಗಳ ಉಲ್ಲಂಘನೆಯಾದರೆ ಧ್ವನಿಯೆತ್ತಿ ಎಂದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮುಗಪ್ಪ ಮಾತನಾಡಿ ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ಪುರುಷರ ಸಹಭಾಗಿತ್ವ ಬರಬೇಕಾದರೆ ಸ್ತ್ರೀ ಶಕ್ತಿ ಸಂಘಗಳ ಒಕ್ಕೂಟ ಕುಟುಂಬ ಕಲ್ಯಾಣಕ್ಕೆ ಪರಿವರ್ತನೆ ಮಾಡಿ ಎಂದರು ಪರಿವರ್ತನಾ ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರಾದ ನಿರ್ಮಲ, ಕಾರ್ಯದರ್ಶಿ ಗಿರಿಜಮ್ಮ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕ ಶ್ರೀ ನಿವಾಸ್, ಸದಸ್ಯರಾದ ಸುಜಾತ ಆರೋಗ್ಯ ಇಲಾಖೆಯ ಆಂಜನೇಯ ಪ್ರವೀಣಕುಮಾರ್, ರಜಿಯಾಬೇಗಂ, ವಿನಯ್ ಸಿಂಧ್ಯಾ ಆಶಾ ಕಾರ್ಯಕರ್ತೆ ಶಾರದಮ್ಮ ಅಂಗನವಾಡಿ ಶಿಕ್ಷಕರಾದ ಸಾಕಮ್ಮ ಹನುಮಕ್ಕ ಎಲ್ಲಾ ಒಕ್ಕೂಟದ ಸದಸ್ಯರು ಉಪಸ್ಥಿತರಿದ್ದರು

> ಗರ್ಭಿಣಿ ಆರೈಕೆ ಬಾಣಂತಿ ಆರೈಕೆ ಮಕ್ಕಳ ಆರೈಕೆ ಅನೇಮಿಯ ಮುಕ್ತ ಭಾರತ ಸುರಕ್ಷಿತ ಮಾತೃತ್ವ ಅಭಿಯಾನ ಲಸಿಕಾ ಕಾರ್ಯಕ್ರಮ ಈ ಎಲ್ಲಾ ಕಾರ್ಯಗಳ ಸೇವೆಗಳ ಬಗ್ಗೆ ನಿಮ್ಮ ಒಕ್ಕೂಟದ ಸಭೆಗಳಲ್ಲಿ ಮಾತನಾಡಬೇಕು ಜಾಗೃತಿ ಮೂಡಿಸಬೇಕು ಸರ್ಕಾರದ ಎಲ್ಲಾ ಸೇವೆಗಳ ಬಗ್ಗೆ ಚರ್ಚಿಸಬೇಕು ಬದಲಾವಣೆ ಗುಣತ್ಮಕ ಜೀವ ಶೈಲಿ ನಿಮ್ಮದಾಗಿಸಿಕೊಳ್ಳಲು ಧ್ವನಿ ಎತ್ತಲು ಸಂಘಟಣೆ ಒಕ್ಕೂಟದ ಜವಾಬ್ದಾರಿ ಹೆಚ್ಚಿನದು ಒಂದು ಸತ್ಯವನ್ನು ಹೇಳಿ ಅಪ್ರಾಪ ಮಕ್ಕಳ ಬಾಲ್ಯ ವಿವಾಹ ತಪ್ಪಿಸಿ
> –ಎನ್.ಎಸ್.ಮಂಜುನಾಥ, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ

## ಗಲ್ಲು ಶಿಕ್ಷೆ ವಿಧಿಸುವಂತೆ ಮೇಣದ ಬತ್ತಿ ಮೆರವಣಿಗೆ

• **ಉದಯವಾಹಿನಿ ಬಳ್ಳಾರಿ**

ಧಾರವಾಡದ ಇಂಜಿನೀಯರಿಂಗ್ ವಿದ್ಯಾರ್ಥಿನಿ ನೇಹಾ ಹಿರೇಮಠ್ ಅವರನ್ನು ಹಾಡು ಹಗಲೇ ಹತ್ಯೆ ಮಾಡಿದ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಮತ್ತು ಪ್ರಕರಣದ ವಿಚಾರಣೆ ತ್ವರಿತವಾಗಿ ನಡೆಸಬೇಕೆಂದು ಆಗ್ರಹಿಸಿ ನಿನ್ನೆ ಸಂಜೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದಿಂದ ಮೇಣದ ಬತ್ತಿ ಮೆರವಣಿಗೆ ಮಾಡಲಾಯ್ತು.

ಹತ್ಯೆಯಾಗಿ ಒಂದು ವರ್ಷವಾಗಿದೆ, ಪ್ರಕರ ಣದ ವಿಲೇವಾರಿಯಾಗಿಲ್ಲ, ತ್ವರಿತಗತಿಯಲ್ಲಿ ನಡೆಯಬೇಕು ಎಂದು ನಗರದ ಗಡಿಗೆ ಚನ್ನಪ್ಪ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿ ಮುಂದಿನ ಗಾಂಧಿ ಪ್ರತಿಮೆವರೆಗೆ ಮೇಣದ ಬತ್ತಿ ಮೆರವಣಿಗೆಯನ್ನು ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯ್ತು.

ನೇಹ ಹಿರೇಮಠ್ ಕಳೆದ ವರ್ಷ ಏಪ್ರಿಲ್ 18 ರಂದು ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ಫಯಾಜ್ ಎಂಬಾತನಿಂದ ಅಮಾನುಷವಾಗಿ ಕೊಲೆಗೀಡಾಗಿದ್ದಳು. ಒಂದು ವರ್ಷ ಕಳೆದರೂ ಕೊಲೆಗಡುಕನಿಗೆ ಯಾವ ಶಿಕ್ಷೆಯೂ ವಿಧಿಸಲಾಗಿಲ್ಲ, ಕಳೆದ ವರ್ಷ ಇವರ ಕೊಲೆಯಾದಾಗ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು ತ್ವರಿತ ನ್ಯಾಯಾಲಯ ರಚನೆ ಮಾಡುವುದರ ಮೂಲಕ ಕೊಲೆಗಡಕರಿಗೆ 90 ದಿನದಲ್ಲಿ ಶಿಕ್ಷೆ ಕೊಡಿಸುವುದಾಗಿ ಹೇಳಿದ್ದು ಇಲ್ಲಿಯವರೆಗೆ ವಿಶೇಷ ನ್ಯಾಯಾಲಯ ರಚನೆಯಾಗಲಿಲ್ಲ ಮುಖ್ಯಮಂತ್ರಿಗಳು ಕೂಡಲೇ ತ್ವರಿತ ನ್ಯಾಯಾಲಯದ ರಚನೆ ಮಾಡಿಸಲೇಬೇಕು ತನ್ಮೂಲಕ ನ್ಯಾಯಾಧೀಶರು ಕೊಲೆಗಡಕನಿಗೆ ಗಲ್ಲು ಶಿಕ್ಷೆ ವಿಧಿಸಲೇಬೇಕೆಂದು ನ್ಯಾಯಾಂಗ ವ್ಯವಸ್ಥೆಯನ್ನು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

## ಸರ್ವ ಜನಾಂಗದ ಆಶಾಕಿರಣ ಡಾ. ಅಂಬೇಡ್ಕರ್

• **ಉದಯವಾಹಿನಿ ವಿಜಯಪುರ**

ಡಾ. ಬಿ. ಆರ್. ಅಂಬೇಡ್ಕರ ಅವರು ಕೇವಲ ದಲಿತರ, ಹಿಂದುಳಿದ ವರ್ಗದವರಿಗೆ ಮಾತ್ರವಲ್ಲ. ಭವ್ಯ ಭಾರತದ ಭವಿಷ್ಯದ ಪ್ರಜೆಗಳ ನಾಯಕರಾಗಿದ್ದರು ಎಂದು ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ, ಪ್ರಗತಿಪರ ಚಿಂತಕ ಕಲ್ಲಪ್ಪ ಆರ್. ತೊರವಿ ಹೇಳಿದರು. ನಗರ ಹೊರ ವಲಯದ ಕೃಷಿ ಮಹಾವಿದ್ಯಾಲಯದಲ್ಲಿ ಜರುಗಿದ ಡಾ. ಬಾಬಾಸಾಹೇಬ ಅಂಬೇಡ್ಕರ ರವರ 134ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಡಾ. ಅಂಬೇಡ್ಕರ ಅವರ ಅಧ್ಯಯನಶೀಲ ಚಿಂತನೆ, ದೂರದೃಷ್ಟಿ ಮತ್ತು ಸರ್ವಧರ್ಮ ಸಮಾನದೃಷ್ಟಿ. ಹೀಗಾಗಿಯೇ ಅಂಬೇಡ್ಕರ್ ಎಲ್ಲಾ ಭಾರತೀಯರು ಗೌರವಿಸುವಂತಹ ವ್ಯಕ್ತಿತ್ವ ಹೊಂದಿ ಬಾಬಾಸಾಹೇಬ ಎಂದು ಕರೆಯಲ್ಪಟ್ಟರು. ಎಲ್ಲಾ ಕೃಷಿ ವಿದ್ಯಾರ್ಥಿಗಳು ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆದು, ಆದರ್ಶಮಯ ಜೀವನ ಪಾಲಿಸಲು ಕರೆ ನೀಡಿದರು.

ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಮಾತನಾಡಿ, ಡಾ. ಅಂಬೇಡ್ಕರವರೊಬ್ಬ ಶ್ರೇಷ್ಟ ವಿಚಾರವಾದಿ, ಅಗಾಧ ಜ್ಞಾನಿಯಾಗಿದ್ದರು, ಅವರು ರಚಿಸಿದ ಸಂವಿಧಾನ ಭಾರತಕ್ಕಲ್ಲದೇ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

> ಡಾ. ಅಂಬೇಡ್ಕರ ಅವರು ಭಾರತದ ಏಕತೆ, ವೈವಿಧ್ಯತೆ ಮತ್ತು ಸಮಗ್ರತೆ ಬಗ್ಗೆ ಹೆಮ್ಮೆ ಮೂಡಿಸಿದ್ದಾರೆ. ಸಂವಿಧಾನ ರಚನೆಯಾಗಿ 73 ವರ್ಷ ಕಳೆದರೂ ಸಂವಿಧಾನದ ಮೂಲ ಸ್ವರೂಪ ತಿದ್ದುಪಡಿಗೊಳಗಾಗದೇ ಹಾಗೆಯೇ ಉಳಿದಿರುವದು ನಮ್ಮ ದೇಶದಲ್ಲಿ ಮಾತ್ರ –ಆರ್. ತೊರವಿ

## ರೈತರ ಭೂಮಿ ಮಂಜೂರಾತಿಗಾಗಿ ದೆಹಲಿಯ ರಾಷ್ಟ್ರಪತಿಗಳ ಬಳಿ ತೆರಳಿ ಮನವಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ ಅರಸಿಕೆರೆ**

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಹಳೇಬೀಡು ಹೋಬಳಿ ಐದಳ್ಳ ಕಾವಲಿನಲ್ಲಿ ಕೃಷಿ ಭೂಮಿ ಮಂಜೂರಾತಿಗಾಗಿ ರೈತರು ಈಗಾಗಲೇ ಅರ್ಜಿ ಸಲ್ಲಿಸಿ ಹಲವಾರು ಬಾರಿ ಹೋರಾಟ ಮಾಡುತ್ತಿದ್ದರು ಕೆಲವು ಅಧಿಕಾರಿಗಳು ರೈತರಿಗೆ ಭೂಮಿ ನೀಡುವಲ್ಲಿ ಮೀನಾ ಮೇಷ ಎಣಿಸುತ್ತಿದ್ದಾರೆ ಆದ್ದರಿಂದ ಈ ಹಿಂದೆ ಅರಸೀಕೆರೆಯಿಂದ ನವದೆಹಲಿಗೆ ಪಾದಯಾತ್ರೆ ಮೂಲಕ ನೂರಾರು ರೈತರೊಂದಿಗೆ ತೆರಳಿ ಮಾನ್ಯ ರಾಷ್ಟ್ರಪತಿಗಳಿಗೆ ಮನವಿ ನೀಡಲಾಗಿತ್ತು ಅದರಂತೆ ರಾಷ್ಟ್ರಪತಿಗಳು ರೈತರಿಗೆ ಕೃಷಿಯಿಂದ ಜೀವನ ನಿರ್ವಹಣೆಗಾಗಿ ಭೂಮಿ ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದ್ದರು. ಅಲ್ಲದೆ ಕರ್ನಾಟಕ ಸರ್ಕಾರದ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ರವರು ಸಹ ಅಧಿಕಾರಿಗಳಿಗೆ ರೈತರ ಪರವಾಗಿ ತಾಕಿದ್ದು ಮಾಡಿದ್ದು ಇಷ್ಟೆಲ್ಲ ಬೆಳವಣಿಗಳು ಆಗಿದ್ದರೂ ಸಹ ಕೃಷಿಭೂಮಿಯಿಂದ ಕುಟುಂಬದ ಜೀವನ ನಿರ್ವಹಣೆಗಾಗಿ ನೂರಾರು ಕೃಷಿ ಜಮೀನು ರಹಿತ ಕುಟುಂಬಗಳು ಅರ್ಜಿ ಸಲ್ಲಿಸಿ ಜಮೀನಿಗಾಗಿ ಹೋರಾಟ ನಡೆಸುತ್ತಿದ್ದರು ಸಹ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಜಮೀನು ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆಂದು ಕರ್ನಾಟಕ ರಾಜ್ಯ ರೈತ ಸಂಘದ ಉಸ್ತುವಾರಿ ಹಾಗೂ ರಾಜ್ಯ ಸಂಚಾಲಕ ಕನ ಕಂಚನಹಳ್ಳಿ ಪ್ರಸನ್ನ ಕುಮಾರ್ ಆರೋಪಿಸಿದ್ದಾರೆ.

ರಾಜ್ಯ ರೈತ ಸಂಘದ ಕಾರ್ಯದರ್ಶಿ ಮಹಮ್ಮದ್ ದಸ್ತಿಗಿರಿ. ಕಾರ್ಯಾಧ್ಯಕ್ಷ ಹಾಗೂ ಉಸ್ತುವಾರಿಗಳಾದ ಏಜಾಜ್ ಪಾಷಾ. ರೈತ ಸಂಘದ ಮುಖಂಡರುಗಳಾದ ಅಬ್ದುಲ್ ಕುಂಜಿ ಉಪಸ್ಥಿತರಿದ್ದರು.

> ಕರ್ನಾಟಕದ ಸಂಬಂಧಪಟ್ಟ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ರೈತರಿಗೆ ಕೂಡಲೇ ಭೂಮಿಯನ್ನು ನೀಡಬೇಕೆಂದು ಒತ್ತಾಯಿಸಿ ಮೇ 5ನೇ ತಾರೀಖಿನಂದು ಕಂಕಂಚೇನಹಳ್ಳಿ ಪ್ರಸನ್ನ ಕುಮಾರ್ ಅವರ ಸ್ವಗ್ರಾಮವಾದ ಕನ್ ಕಂಚೇನ ಹಳ್ಳಿಯಿಂದ ಹೊರಟು ಮೇ 14ನೇ ತಾರೀಕಿನಂದು ನವದೆಹಲಿಯ ರಾಷ್ಟ್ರಪತಿಗಳ ಭವನದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಿಗೆ ನೂರಾರು ರೈತರು ಕೂಡಲೇ ಕೃಷಿ ಭೂಮಿಯನ್ನು ಮಂಜೂರು ಮಾಡಿಸಲು ಮನವಿ ನೀಡಿ ಒತ್ತಾಯಿಸಲಾಗುವುದು –ಕಂಕಂಚೇನಹಳ್ಳಿ ಪ್ರಸನ್ನ ಕುಮಾರ್

## ಜವಾಬ್ದಾರಿಯಿಂದ ಮಾತನಾಡಿದಾಗ ಮಾತಿಗೆ ಬೆಲೆ ಸಿಗುತ್ತದೆ

• **ಉದಯವಾಹಿನಿ ಧಾರವಾಡ**

ವ್ಯಕ್ತಿತ್ವಕಿರಿದಾಗುತ್ತಿದೆ ಬರವಣಿಗೆ ಹಿರಿದಾಗುತ್ತಿದೆ. ನಮ್ಮಚರಿತ್ರೆಯನ್ನು ಮರೆತು ಬರವಣಿಗೆ ಮಾಡುತ್ತಿದ್ದೇವೆ. ವ್ಯಕ್ತಿ ಪರಂಪರೆ ಸಾಹಿತ್ಯ ಕುರಿತು ಹೆಜ್ಜೆಗಳನ್ನು ಗುರುತಿಸಿಕೊಳ್ಳಬೇಕಾದರೆ ಹಿಂದಿನ ಹೆಜ್ಜೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು ಎಂದು ಬೆಳಗಾವಿ ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಪ್ರೊ.ಗುಂಡಣ್ಣ ಕಲಬುರ್ಗಿ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು, ಪ್ರೊ.ಎಂ.ಆರ್. ಕುಂಭಾರದತ್ತಿ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸ ಮಾಲೆ-9 ರಲ್ಲಿ ಓದುಒಂದು ಮಾನಸ ಪ್ರಕ್ರಿಯೆ' ವಿಷಯಕುರಿತುಅವರು ಮಾತನಾಡುತ್ತಿದ್ದರು. ಮುಂದುವರೆದು ಮಾತನಾಡಿದ ಅವರು, ಇಟಲಿಯ ಕವಿ ಪರಂಪರೆ ಬಗ್ಗೆ ಹೇಳಿದರೆ, ಬೇಂದ್ರೆಕಾವ್ಯದಅಂತರ್ಗತ ಬಗ್ಗೆ ಹೇಳಿದ್ದಾರೆ. ಮಾತನಾಡುವಾಗ ಜವಾಬ್ದಾರಿಯಿಂದ ಮಾತಾಡಿದಾಗ ಮಾತ್ರ ಮಾತಿಗೆ ಬೆಲೆ ಸಿಗುತ್ತದೆ ಮತ್ತುಅರ್ಥ ಬರುತ್ತದೆ. ಯಾವುದೇ ಸಾಹಿತಿ ಬೇಂದ್ರೆಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಅಷ್ಟೊಂದು ಪ್ರಭಾವ ಅವರ ಸಾಹಿತ್ಯದ್ದಾಗಿದೆ. ಓದಿನಲ್ಲಿ ತರಂಗಗಳಿರುತ್ತವೆ. ಮಾನಸ ಪ್ರಕ್ರಿಯೆಗೆ ಅವು ಪ್ರೇರಣೆ ನೀಡುತ್ತವೆ. ಮಾನಸ ಪ್ರಕ್ರಿಯೆಯನ್ನುಕಾಣಲು ಸಾಧ್ಯವಾಗುವುದಿಲ್ಲ. ಒಬ್ಬ ಕವಿ ತನ್ನಕವಿತೆಯ ಅರ್ಥವನ್ನು ಎಂದೂ ಹೇಳಬಾರದು. ಕವಿತೆ ಕುರಿತು ಭಾವಾರ್ಥವನ್ನು ಬರಹದಲ್ಲಿ ನೀಡಬಾರದು.ಯಾವ ಕಾವ್ಯದಲ್ಲಿ ಅನುಭಾವವಿದೆಯೋ ಆ ಕಾವ್ಯ ಶಕ್ತಿಯುಕ್ತವಾಗಿರುತ್ತದೆ.ಅಲ್ಲಿ ಮಾನಸ ಪ್ರಕ್ರಿಯೆ ನಡೆಯುತ್ತದೆ. ಮಾತು, ಮೌನ ಸೃಜನಶೀಲತೆಯಲ್ಲಿ ಕವಿ ತನ್ನದುಃಖ ಮರೆಯುತ್ತಾನೆ ಎನ್ನುವುದನ್ನು ಬೇಂದ್ರೆಯವರ ಕಾವ್ಯದಲ್ಲಿ ಕಾಣಬಹುದು. ಓದುಗ ಶಬ್ದಕ್ಕೆ ಅರ್ಥ ಹುಡುಕುತ್ತಿದ್ದಾವೆಯೇ ವಿನಹ ಭಾವವನ್ನು ಹುಡುಕುವುದಿಲ್ಲ. ಒಂದು ಕವಿತೆಯನ್ನು ಅರ್ಥೈಸಿಕೊಳ್ಳಬೇಕಾದರೆ ಸೂಕ್ಷ್ಮತೆಯ ನೋಟ ಇರಬೇಕು.ಪದ್ಯವನ್ನು ಸರಿಯಾಗಿ ತಿಳಿದುಕೊಳ್ಳದೇ ಕವಿತೆಗಳನ್ನು ಹಾಡುವುದು ಅದಕ್ಕೆ ನೃತ್ಯ ಮಾಡುವುದು ಸರಿಯಲ್ಲ. ಓದುವುದು ಎಂದರೆ ಸರಳವಲ್ಲ. ಓದಿದ್ದೆಲ್ಲವನ್ನು ಅರ್ಥೈಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.



ಉದಯವಾಹಿನಿ ಚಿತ್ರ

### ಕೇಂದ್ರ ಹಾಗೂ ರಾಜ್ಯ ಸರ್ಕಾರ ಪತ್ರಕರ್ತರಿಗೆ ರಕ್ಷಣೆ ಕಾಯ್ದೆ ಜಾರಿಗೊಳಿಸಿ,ಭದ್ರತೆ ನೀಡಿ: ಅನೀಲಕುಮಾರ ಬಿರಾದಾರ

# ಪತ್ರಕರ್ತನ ಮೇಲೆ ನಡೆದ ದೌರ್ಜನ್ಯ ಖಂಡಿಸಿ ಪ್ರತಿಭಟನೆ

• **ಉದಯವಾಹಿನಿ,ಚಿಂಚೋಳಿ**

ಬೀದರ ಜಿಲ್ಲೆಯಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯ ಪತ್ರಕರ್ತ ಸುದ್ದಿ ತೆಗೆದುಕೊಳ್ಳಲು ಹೋದಾಗ ಅರಣ್ಯ ಇಲಾಖೆಯ ಮೂರ್ನಾಲ್ಕು ಅಧಿಕಾರಿಗಳು ಕಪಾಳಮೋಕ್ಷ ಹೊಡೆದು ಅವಾಚ್ಯ ಪದಗಳು ಬಳಸಿ ನಿಂದನೆ ಮಾಡಿ ಬೆದರಿಕೆ ಹಾಕಿದ ಅಧಿಕಾರಿಗಳಿಗೆ ಸೇವೆಯಿಂದ ವಜಾಗೊಳಿಸಿ ಅವರನ್ನು ಅಟ್ರಾಸಿಟಿ ಕಾಯ್ದೆಯಲ್ಲಿ ಬಂಧಿಸಿ ಕಾನೂನು ಕ್ರಮಕೈಗೊಳ್ಳಬೇಕು ಮತ್ತು ಪತ್ರಕರ್ತರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರಕ್ಷಣಾ ಕಾಯ್ದೆ ಜಾರಿಗೊಳಿಸಿ ಸೂಕ್ತ ಭದ್ರತೆ ಒದಗಿಸಬೇಕು ಎಂದು ತಾಲ್ಲೂಕಾ ಮಾಹಿತಿ ಹಕ್ಕು ಹಾಗೂ ಸಾಮಾಜಿಕ ಕಾರ್ಯಕರ್ತರ ವೇದಿಕೆ ಅಧ್ಯಕ್ಷ ಅನೀಲಕುಮಾರ ಬಿರಾದಾರ ಅಣವಾರ ಆಗ್ರಹಿಸಿದರು.


ಪಟ್ಟಣದ ತಹಶೀಲ್ ಕಛೇರಿ ಎದುರು ರಾಜ್ಯ ಮಾಹಿತಿ ಹಕ್ಕು ಸಾಮಾಜಿಕ ಕಾರ್ಯಕರ್ತರ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಬೀದರ ಪತ್ರಕರ್ತನ ಮೇಲೆ ನಡೆದ ದೌರ್ಜನ್ಯವನ್ನು ಖಂಡಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಿದರು.

ಆರ್.ಟಿ.ಐ ಜಿಲ್ಲಾಧ್ಯಕ್ಷ ರಾಜೇಂದ್ರ ಪ್ರಸಾದ್ ಮಾತನಾಡಿ ಸುದ್ದಿ ಕ್ರೂಢಿಕರಿಸಲು ಸ್ಥಳಕ್ಕೆ ಹೋದ ಪತ್ರಕರ್ತನ ಮೇಲೆ ಹಲ್ಲೆ ಮಾಡಿರುವ ಅರಣ್ಯ ಅಧಿಕಾರಿಗಳನ್ನು ಅಮಾನತು ಮಾಡಿದರೆ ಸಾಲದು ಕರ್ತವ್ಯದಿಂದ ವಜಾಗೊಳಿಸುವಂತೆ ಆಗ್ರಹಿಸಿದರು.

**ಬೇಡಿಕೆಗಳು:-** ರಾಜ್ಯ ಸರಕಾರ ಪತ್ರಕರ್ತರ ಹಿತರಕ್ಷಣೆ ಕಾಯ್ದೆ ಕೂಡಲೇ ಜಾರಿಗೊಳಿಸಬೇಕು,ಪತ್ರಕರ್ತನ ಮೇಲೆ ಹಲ್ಲೆ ಮಾಡಿರುವ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಕೂಡಲೇ ಕರ್ತವ್ಯದಿಂದ ವಜಾಗೊಳಿಸಬೇಕು,ಪತ್ರಕರ್ತನಿಗೆ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿರುವ ಅಧಿಕಾರಿಗಳ ಮೇಲೆ ಜಾತಿನಿಂದನೆ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಬೇಕು,

ದೌರ್ಜನ್ಯ ಒಳಗಾದ ಪತ್ರಕರ್ತನಿಗೆ 10 ಲಕ್ಷ ರೂ.ಪರಿಹಾರ ನೀಡಬೇಕು,ಸಂವಿಧಾನದ ನಾಲ್ಕನೇ ಅಂಗವಾಗಿ ಸಮಾಜ ಮತ್ತು ಸರಕಾರದ ಧ್ವನಿಯಾಗಿ ಕೆಲಸ ನಿರ್ವಹಿಸುತ್ತಿರುವ ಪತ್ರಕರ್ತರನ್ನು ಸೂಕ್ತ ರಕ್ಷಣೆ ಒದಗಿಸಬೇಕು,ಕಾನೂನು ಬಾಹಿರವಾಗಿ ಕೆಲಸ ನಿರ್ವಹಿಸುತ್ತಿರುವ ಗುಂಪುಗಳ ವಿರುದ್ಧ ಪತ್ರಕರ್ತರು ಸುದ್ದಿ ಪ್ರಕಟಿಸುವ ಸಂದರ್ಭದಲ್ಲಿ ಕರೆ ಮತ್ತು ಜೀವ ಬೆದರಿಕೆ ಹಾಕುವ ಪ್ರಕರಣಗಳು ಬಹಳಷ್ಟು ನಡೆಯುತ್ತಿದ್ದು ಅಂಥಹ ಪ್ರಕರಣ ಕಂಡುಬಂದಲ್ಲಿ ಕೂಡಲೇ ಅಂಥವರ ವಿರುದ್ಧ ಪೊಲೀಸರು ಬಂಧನ ರಹಿತ ವಾರೆಂಟ್ ಜಾರಿಗೊಳಿಸಬೇಕು.

ಈ ಸಂದರ್ಭದಲ್ಲಿ ರಾಜ್ಯ ಕೋಲಿ ಸಮಾಜದ ಕಾರ್ಯದರ್ಶಿ ಲಕ್ಷ್ಮಣ ಆವುಂಟಿ,ಯುನಿಟಿ ಆಫ್ ಮೂಲ ನಿವಾಸಿ ಬಹುಜನ ಸಂಘಟನೆ ಮುಖಂಡ ಮಾರುತಿ ಗಂಜಗಿರಿ, ಜೆಡಿಎಸ್ ತಾಲ್ಲೂಕಾಧ್ಯಕ್ಷ ರವಿಶಂಕರರೆಡ್ಡಿ ಮುತ್ತಂಗಿ, ಪತ್ರಕರ್ತ ಹರ್ಷವರ್ಧನ ಮತ್ತು ಮಹೇಬೂಬಶಾ ಅಣವಾರ, ವೆಂಕಟೇಶ ದುದ್ಯಾಲ,ಬಿಎಸ್ಪಿ ತಾಲ್ಲೂಕ ಅಧ್ಯಕ್ಷ ವೈಜನಾಥ ಮಿತ್ರಾ,ಯುವ ಕರ್ನಾಟಕ ವೇದಿಕೆ ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣ,ಅಂಬರೀಶ ರಾಯಕೋಡ, ಚೇತನ ನಿರಾಳಕರ, ರಾಜಶೇಖರ ಹೊಸಮನಿ,ಸೋಮಶೇಖರ, ಗೋಪಾಲ ಗಾರಂಪಳ್ಳಿ ಇದ್ದರು.


ಉದಯವಾಹಿನಿ ಚಿತ್ರ

**ಅವಾಚ್ಯ ಪದ ಬಳಸಿ ನಿಂದನೆ**

> ಬೀದರ ಶಕ್ತಿ ಪತ್ರಿಕೆಯ ಪತ್ರಕರ್ತ ರವಿ ಬಿ.ಬುಸುಂಡೆ ಅವರ ಮೇಲೆ ಹಲ್ಲೆ ಮಾಡಿರುವ ವಿಡಿಯೋ ತುಣುಕು ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಹರದಾಡುತ್ತಿವೆ, ಅಲ್ಲದೆ ಪತ್ರಕರ್ತನನ್ನು ಖಾಸಗಿ ವಾಹನದಲ್ಲಿ ಹಾಕಿಕೊಂಡು ಬೀದರ ನಗರ ತುಂಬಾ ಸುತ್ತಾಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಹಲ್ಲೆಗೊಳಗಾದ ಪತ್ರಕರ್ತನೆ ಹೇಳಿಕೆ ನೀಡಿದ್ದು ಅಧಿಕಾರಿಗಳನ್ನು ತಕ್ಷಣವೇ ಬಂಧಿಸಿ ಜೈಲಿಗೆ ಕಳುಹಿಸಬೇಕು –ರಾಜೇಂದ್ರ ಪ್ರಸಾದ್
> ಆರ್.ಟಿ.ಐ ಜಿಲ್ಲಾಧ್ಯಕ್ಷ

## ಗುರು ಹಿರಿಯರನ್ನು ಗೌರವದಿಂದ ಕಾಣಬೇಕು

• **ಉದಯವಾಹಿನಿ ಸೈದಾಪುರ**

ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಪೋಷಕರ ಹಾಗೂ ಗುರು ಹಿರಿಯರ ಸಹಕಾರ ಅತಿ ಹೆಚ್ಚಿನ ರೀತಿಯಲ್ಲಿ ಇರುತ್ತದೆ ಅವರನ್ನು ಗೌರವದಿಂದ ಕಾಣಬೇಕು ಎಂದು ಪ್ರಾಂಶುಪಾಲ ಅನಿಲ ಕಂಬ್ಳೆ ಅಭಿಪ್ರಾಯಪಟ್ಟರು.

ಸಮೀಪದ ಕಡೇಚೂರು ಕೈಗಾರಿಕಾ ಪ್ರದೇಶದಲ್ಲಿರುವ ಸರಕಾರಿ ಉಪಕರಣ ಮತ್ತು ತರಬೇತಿ ಕೇಂದ್ರದಲ್ಲಿ 3ನೇ ವರ್ಷದ ಅಂತಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಬುದ್ದಿವಂತಿಕೆ ಹಾಗೂ ಕೌಶಲವನ್ನು ಹೆಚ್ಚಿಸಿ ಜೀವನದ ಹಾದಿಯಲ್ಲಿ ಸಾಗಬೇಕು. ಇತ್ತಿಚಿಗೆ ತಂತ್ರಜ್ಞಾನಕ್ಕೆ ಹೆಚ್ಚಿನ ಬೆಡಿಕೆ ಇದೆ. ಸ್ಪರ್ಧಾತ್ಮಕ ಯುಗದಲ್ಲಿ ನಮ್ಮದೆಯಾದ ಜ್ಞಾನ ಹಾಗೂ ಕೌಶಲ್ಯದೊಂದಿಗೆ ಉತ್ತಮ ಗುರಿಯೊಂದಿಗೆ ಪ್ರಯತ್ನ ಮಾಡಬೇಕು. ಉತ್ತಮ ಸಾಧನೆ ನಿಮ್ಮದಾಗಲಿ ಎಂದು ಶುಭ ಹಾರೈಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಶೈಕ್ಷಣಿಕ ಸೆಮಿಸ್ಟರ್ನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಡಿ.ಟಿ.ಡಿ.ಮ್, ಡಿ.ಪಿ.ಎಮ್, ಡಿಮ್‌ಸಿಚ್ ವಿಭಾಗದ ಮುಖ್ಯಸ್ಥರಾದ ವೆಂಕಟರಾವ್ ಕುಲ್ಕರ್ಣಿ, ವಿಜಯ್ ಕುಮಾರ್ ಬಿರಾದರ್, ಪ್ರದೀಪ ಕುಮಾರ, ಉಪನ್ಯಾಸಕರದ ಪ್ರಿಯಾಂಕಾ, ಪ್ರವೀಣಕುಮಾರ್, ಶ್ರೀನಿವಾಸ್, ಶ್ರೀಮತಿ ಸುಮಾ, ಶಿವಲಿಂಗ, ಅಕ್ಷಯ್, ಅಂಕುಶ, ಸುಕುಮುನಿ ಹುಸೇನ್, ಆಡಳಿತ ವಿಭಾಗದ ಸಿಬ್ಬಂದಿಗಳಾದ ಹಣಮಂತ ಮಂಜುನಾಥ ಸೇರಿದಂತೆ ಇತರರಿದ್ದರು.


ಉದಯವಾಹಿನಿ ಚಿತ್ರ

# ಒಪ್ಪಂದಕ್ಕೆ ಮುಂದೆ ಬರದಿದ್ರೆ, ಸಂಧಾನದಿಂದ ನಾವು ಹಿಂದಕ್ಕೆ ಹೋಗ್ತೀವಿ: ಮಾರ್ಕೋ

# ರಷ್ಯಾ-ಉಕ್ರೇನ್‌ಗೆ ಅಮೆರಿಕದ ಎಚ್ಚರಿಕೆ

**ವಾಷಿಂಗ್‌ಟನ್:** ಅಮೆರಿಕದ ಅಧ್ಯಕ್ಷನಾಗಿ ಅಧಿಕಾರಕ್ಕೆ ಬಂದು ಕೆಲವೇ ದಿನಗಳಲ್ಲಿ ರಷ್ಯಾ-ಉಕ್ರೇನ್ ಯುದ್ಧವನ್ನು ನಿಲ್ಲಿಸುತ್ತೇನೆ. ಎರಡೂ ಕಡೆ ಶಾಂತಿ ನೆಲೆಸುವಂತೆ ಮಾಡ್ತೀನಿ ಅಂತ ಘೋಷಣೆಗಳನ್ನು ಮಾಡಿದ್ದ ಡೊನಾಲ್ಡ್ ಟ್ರಂಪ್, ಪುಟಿನ್ ಮತ್ತು ಝೆಲೆನ್ಸ್ಕಿ ನಡುವೆ ಒಂದು ಮುಖಾಮುಖಿ ಸಭೆಯನ್ನು ಏರ್ಪಡಿಸೋಕೂ ಇನ್ನೂ ಸಾಧ್ಯವಾಗಿಲ್ಲ. ಒಂದು ತಿಂಗಳ ಕದನ ವಿರಾಮಕ್ಕೆ ಉಕ್ರೇನ್ ಒಪ್ಪಿಕೊಂಡ್ರೂ, ರಷ್ಯಾ ಅದನ್ನು ರಿಜೆಕ್ಟ್ ಮಾಡ್ತು. ರಷ್ಯಾದ ಜೊತೆಗೆ ಉಕ್ರೇನ್ ಕಾದಾಟವನ್ನು ಮುಂದುವರಿಸೋಕೆ ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳಿಂದ ಶಸ್ತ್ರಾಸ್ತ್ರ ಮತ್ತು ಹಣಕಾಸು ಸಹಕಾರ ಬೇಕೇ ಬೇಕು.

## ಶಾಂತಿ ಮಾತುಕತೆಗೆ ಟ್ರಂಪ್ ಫುಲ್‌ಸ್ಟಾಪ್?

**'ಸೈನಿಕರು ಸಾಯಬಾರದು, ಅಮಾಯಕರ ಪ್ರಾಣ ಹೋಗಬಾರದು, ಈ ಯುದ್ಧವೇ ನಡೆಯಬಾರದಿತ್ತು, ನಾನು ಆಗ ಅಧ್ಯಕ್ಷನಾಗಿದ್ರೆ, ಇದೆಲ್ಲ ಆಗ್ತನೇ ಇರಲಿಲ್ಲ...' ಅಂತ ರಷ್ಯಾ-ಉಕ್ರೇನ್ ಸಂಘರ್ಷದ ಬಗ್ಗೆ ಟ್ರಂಪ್ ಪದೇ ಪದೇ ಹೇಳ್ತಿರ್ತಾರೆ. ಆದರೆ, ಅಮೆರಿಕದ ಉನ್ನತ ಮಟ್ಟದ ಅಧಿಕಾರಿಗಳು ಸಂಧಾನಕ್ಕೆ ಮಾಡಿರೋ ಪ್ರಯತ್ನಗಳು ಪೂರ್ತಿಯಾಗಿ ಫಲ ಕೊಟ್ಟಂತೆ ಕಾಣ್ತಿಲ್ಲ. ಒಂದು ಷರತ್ತಿಗೆ ಉಕ್ರೇನ್ ಒಪ್ಪಿಕೊಂಡ್ರೆ, ಮತ್ತೊಂದಕ್ಕೆ ರಷ್ಯಾ ಒಪ್ಪಿಲ್ಲ.**

ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಕೆಯನ್ನು ಕಟ್ ಮಾಡಿದ್ದ ಅಮೆರಿಕ, ಸೌದಿ ಅರೇಬಿಯಾ ಹಾಗೂ ಪ್ಯಾರಿಸ್‌ನಲ್ಲಿ ರಷ್ಯಾ-ಉಕ್ರೇನ್ ಯುದ್ಧ ನಿಲ್ಲಿಸಲು ಸಂಧಾನ ಸಭೆಗಳನ್ನು ನಡೆಸಿತ್ತು. ಆದರೆ, ಇದೀಗ ಈ ಮಧ್ಯಸ್ಥಿಕೆಯಿಂದ ಆಚೆ ಬರೋದಾಗಿ ಟ್ರಂಪ್ ಆಡಳಿತವು ಎಚ್ಚರಿಕೆ ಕೊಟ್ಟಿದೆ. ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ಯುರೋಪ್ ನಾಯಕರು ಹಾಗೂ ಉಕ್ರೇನ್‌ನ ಪ್ರತಿನಿಧಿಗಳೊಂದಿಗೆ ಮಾರ್ಕೋ ರುಬಿಯೋ ಮಾತುಕತೆ ನಡೆಸಿದ್ದಾರೆ. 'ಆದಷ್ಟು ಬೇಗ ಒಪ್ಪಂದದ ಬಗ್ಗೆ ನಿರ್ಧಾರ ಆಗಬೇಕಿದೆ. ಇದೇ ವಿಚಾರವನ್ನು ತಿಂಗಳುಗಟ್ಟಲೆ ಎಳೆಯೋಕೆ ಸಾಧ್ಯವಿಲ್ಲ. ಕೆಲವೇ ದಿನಗಳಲ್ಲಿ ಒಪ್ಪಂದದ ಬಗ್ಗೆ ಸ್ಪಷ್ಟತೆ ಸಿಗಲಿಲ್ಲಾಂದ್ರೆ, ನಾವು ಈ ಕೆಲಸವನ್ನು ಮುಂದುವರಿಸೋದಿಲ್ಲ' ಅಂತ ರುಬಿಯೋ ತಿಳಿಸಿದ್ದಾರೆ. ಉಕ್ರೇನ್ ಅಧ್ಯಕ್ಷ ಝೆಲೆಸ್ಕಿ ವಿರುದ್ಧ






● ಕೆಲವೇ ದಿನಗಳಲ್ಲಿ ರಷ್ಯಾ ಮತ್ತು ಉಕ್ರೇನ್‌ನಿಂದ ಶಾಂತಿ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಸ್ಪಷ್ಟ ಸೂಚನೆ ಸಿಕ್ಕರೆ ಮಾತ್ರ ಅಮೆರಿಕ ಸಂಧಾನಕಾರನಾಗಿ ಮುಂದುವರಿಯುತ್ತೆ. ಇಲ್ಲವೇ ಇಲ್ಲಿಗೇ ಈ ಎಲ್ಲಾ ಶಾಂತಿ ಮಾತುಕತೆಗಳನ್ನೂ ಕ್ಲೋಸ್ ಮಾಡಲಾಗುತ್ತೆ ಅಂತ ಅಮೆರಿಕದ ವಿದೇಶಾಂಗ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಮಾರ್ಕೋ ರುಬಿಯೋ ಬಹಿರಂಗವಾಗಿ ಹೇಳಿದ್ದಾರೆ.

**ಪರಸ್ಪರ ಡ್ರೋನ್ ದಾಳಿ**

ಸಭೆ-ಸಮಾರಂಭಗಳಲ್ಲಿ ಹಾಗೂ ಮಾಧ್ಯಮಗಳ ಮುಂದೆ ಕಠಿಣ ಮಾತುಗಳಿಂದ ಟೀಕಿಸಿದ್ದ ಡೊನಾಲ್ಡ್ ಟ್ರಂಪ್, ಯುದ್ಧಕ್ಕೆ ಅಮೆರಿಕ ಮಾಡಿರುವ ಖರ್ಚು-ವೆಚ್ಚಗಳನ್ನು ವಾಪಸ್ ಕೊಡುವಂತೆ ಗುಡುಗಿದ್ದರು.

ಕೋಟ್ಯಂತರ ಡಾಲರ್ ಹಣವನ್ನು ವಾಪಸ್ ಕೊಡಿ, ಇಲ್ಲವೇ ಅಮೂಲ್ಯವಾದ ಖನಿಜ ಸಂಪತ್ತನ್ನು ಬಳಸಿಕೊಳ್ಳೋಕೆ ಅಮೆರಿಕಕ್ಕೆ ಅವಕಾಶ ಮಾಡಿಕೊಡಿ ಅಂತ ಟ್ರಂಪ್ ಅವಾಜ್ ಹಾಕಿದ್ದರು.

**ಮಧ್ಯಸ್ಥಿಕೆಗೆ ನಿಂತಿರುವ ಅಮೆರಿಕ ಅಡಕತ್ತರಿ**

**ಷರತ್ತುಗಳೇ ಇರಬಾರದು ಅಂತ ಪುಟಿನ್ ಹೇಳಿದ್ರೆ, ಮತ್ತೆ ನಮ್ಮ ನೆಲದ ಮೇಲೆ ದಾಳಿ ಮಾಡದಂತೆ ಕಠಿಣ ಷರತ್ತಿಗೆ ರಷ್ಯಾ ಒಪ್ಪಬೇಕು ಅಂತ ಝೆಲೆನ್ಸ್ಕಿ ಪಟ್ಟು ಹಿಡಿದಿದ್ದಾರೆ. ಎರಡೂ ದೇಶಗಳ ನಡುವೆ ಮಧ್ಯಸ್ಥಿಕೆಗೆ ನಿಂತಿರುವ ಅಮೆರಿಕಕ್ಕೆ ಅಡಕತ್ತರಿಯಲ್ಲಿ ಸಿಕ್ಕಾಕಿಕೊಂಡಂತೆ ಆಗ್ತಿದೆ. ಸಂಘರ್ಷದಲ್ಲಿರುವ ಎರಡೂ ರಾಷ್ಟ್ರಗಳೂ ಯಾವುದೇ ಒಪ್ಪಂದಕ್ಕೂ ಮುಂದೆ ಬರ್ತಿಲ್ಲ. ಪರಸ್ಪರ ಕ್ಷಿಪಣಿಗಳು, ಡ್ರೋನ್ ದಾಳಿಗಳನ್ನು ಮುಂದುವರಿಸಿವೆ. ಉಕ್ರೇನ್ ತನ್ನ ಭೂಭಾಗವನ್ನು ಉಳಿಸಿಕೊಳ್ಳೋಕೆ ಪ್ರಯತ್ನಿಸ್ತಿದ್ರೆ, ರಷ್ಯಾ ತನ್ನ ನೆಲವನ್ನು ವಿಸ್ತರಿಸಿಕೊಳ್ಳೋಕೆ ಮುಂದಾಗಿದೆ.**

## ಮಿನಿ ನ್ಯೂಸ್

### ಬಸ್ ಅಪಘಾತ: 25 ಭಾರತೀಯರಿಗೆ ಗಾಯ, ಮೂವರ ಸ್ಥಿತಿ ಚಿಂತಾಜನಕ

**ಬಲರಾಂಪುರ:** ನೇಪಾಳದ ಪೋಖಾರಾಗೆ ತೆರಳುತ್ತಿದ್ದ ಬಸ್ ಅಪಘಾತಕ್ಕೀಡಾಗಿದ್ದು, ಕನಿಷ್ಠ 25 ಭಾರತೀಯ ಪ್ರವಾಸಿಗರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ನೇಪಾಳದೊಂದಿಗೆ ಗಡಿ ಹಂಚಿಕೊಂಡಿರುವ ಉ. ಪ್ರದೇಶದ ತುಳಸಿಪುರದ ಸಮುದಾಯ ಆರೋಗ್ಯ ಕೇಂದ್ರಕ್ಕೆ 19 ಪ್ರವಾಸಿಗರನ್ನು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಗಾಯಗೊಂಡವರಲ್ಲಿ ಮೂವರ ಸ್ಥಿತಿ ಚಿಂತಾಜನಕವಾಗಿದ್ದು, ನೇಪಾಳದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಸ್ ಅಪಘಾತವು ಬ್ರೇಕ್ ವೈಫಲ್ಯದಿಂದ ಸಂಭವಿಸಿದೆ ಎಂದು ಶಂಕಿಸಲಾಗಿದೆ. ಗಾಯಗೊಂಡವರಲ್ಲಿ ಹೆಚ್ಚಿನವರು ಉತ್ತರ ಪ್ರದೇಶದ ಲಕ್ನೋ, ಸೀತಾಪುರ, ಹರ್ದೋಯ್ ಮತ್ತು ಬಾರಾಬಂಕಿ ಜಿಲ್ಲೆಗಳಿಗೆ ಸೇರಿದವರು ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದ ಬಗ್ಗೆ ಮಾಹಿತಿ ಪಡೆದ ನೇಪಾಳದ ಗಧಾವಾ ಪೊಲೀಸರು ಸ್ಥಳಕ್ಕೆ ತಲುಪಿ ಗಾಯಾಳುಗಳನ್ನು ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದರು, ಅಲ್ಲಿಂದ 19 ಜನರನ್ನು ತುಳಸಿಪುರಕ್ಕೆ ಕರೆತರಲಾಯಿತು.

ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ 19 ಭಾರತೀಯರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸರ್ಕಲ್ ಆಫೀಸರ್ (ತುಳಸಿಪುರ) ಬ್ರಿಜನಂದನ್ ರಾಯ್ ಖಚಿತಪಡಿಸಿದ್ದಾರೆ.ಗಾಯ ಗೊಂಡವರಲ್ಲಿ ಕೆಲವರನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ಹೇಳಿದರು.

### 8 ವರ್ಷದ ಬಾಲಕಿ ಮೇಲೆ 10ನೇ ತರಗತಿ ವಿದ್ಯಾರ್ಥಿಯಿಂದ ಅತ್ಯಾಚಾರ

**ಭಿಂಡ್:** ಹತ್ತನೇ ತರಗತಿ ವಿದ್ಯಾರ್ಥಿಯೊಬ್ಬ ತನ್ನ ನೆರೆಮನೆಯ 8 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಘಟನೆ ಮಧ್ಯ ಪ್ರದೇಶದ ಭಿಂಡ್ ಜಿಲ್ಲೆಯಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು 17 ವರ್ಷದ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಬಾಲಾಪರಾಧಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಲಕಿ ಮನೆಯಲ್ಲಿ ಒಬ್ಬಳೇ ಇದ್ದಾಗ ಅದೇ ನೆರೆಹೊರೆಯಲ್ಲಿ ವಾಸಿಸುತ್ತಿದ್ದ ಆರೋಪಿ ಆಕೆಯ ಮನೆಗೆ ನುಗ್ಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪ್ರದೇಶ ಪೊಲೀಸ್ ಅಧಿಕಾರಿ ಮುಖೇಶ್ ಕುಮಾರ್ ಶಾಕ್ಯ ಪಿಟಿಐಗೆ ತಿಳಿಸಿದ್ದಾರೆ.

ಆರೋಪಿ 10ನೇ ತರಗತಿ ಓದುತ್ತಿದ್ದ, ಮೂಲಗಳ ಪ್ರಕಾರ, ಹುಡುಗಿ ಕಿರುಚಿಕೊಂಡಳು, ಮತ್ತು ಜನರು ಸ್ಥಳಕ್ಕೆ ಧಾವಿಸಿ ಪೊಲೀಸರು ಬರುವವರೆಗೂ ಹದಿಹರೆಯದವನನ್ನು ಹಿಡಿದರು. ಬಾಲಕಿಯ ಆರೋಗ್ಯವು ಸರಿಯಾಗಿದೆ ಮತ್ತು ಅವಳು ತನ್ನ ಹೆತ್ತವರೊಂದಿಗೆ ಮನೆಯಲ್ಲಿದ್ದಾಳೆ ಎಂದು ಶಾಕ್ಯ ಹೇಳಿದರು.

## ಕೆನಡಾದಲ್ಲಿ ಗ್ಯಾಂಗ್ ವಾರ್: ದುಷ್ಕರ್ಮಿಗಳ ಗುಂಡೇಟಿಗೆ ಬಲಿಯಾದ ಭಾರತೀಯ ಮೂಲದ ವಿದ್ಯಾರ್ಥಿನಿ

**ಹೊಸದಿಲ್ಲಿ:** ಕೆನಡಾದಲ್ಲಿ ಗುಂಡೇಟಿನಿಂದ ಮೃತಪಟ್ಟ ಭಾರತೀಯ ವಿದ್ಯಾರ್ಥಿನಿ ಹರ್ಸಿಮ್ರತ್ ಕೌರ್ ರಂಧಾವಾ ಅವರ ಕುಟುಂಬ, ಆಕೆಯ ಮೃತದೇಹವನ್ನು ಭಾರತಕ್ಕೆ ತರಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಏಪ್ರಿಲ್ 17 ರಂದು ಹ್ಯಾಮಿಲ್ಟನ್ ನಗರದಲ್ಲಿ ಎರಡು ಗುಂಪುಗಳ ನಡುವೆ ನಡೆದ ಹಿಂಸಾಚಾರದಲ್ಲಿ, ಹರ್ಸಿಮ್ರತ್ ಕೌರ್ ರಂಧಾವಾ ಗುಂಡೇಟಿಗೆ ಬಲಿಯಾಗಿದ್ದರು. ಕೆನಡಾದ ಮೊಹಾಕ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ ರಂಧಾವಾ, ಎರಡು ವಾಹನಗಳ ನಡುವಿನ ಗುಂಡಿನ ಚಕಮಕಿಯಲ್ಲಿ ಸಿಲುಕಿಕೊಂಡು ಪ್ರಾಣ ಬಿಟ್ಟಿದ್ದರು. ಭಾರತೀಯ ದೂತಾವಾಸ ಮತ್ತು ಮೊಹಾಕ್ ಕಾಲೇಜು ಆಕೆಯ ಕುಟುಂಬಕ್ಕೆ ಸಕಲ ಬೆಂಬಲ ನೀಡುತ್ತಿವೆ.

ಪಂಜಾಬ್‌ನ ತರನ್ ತಾರನ್ ಜಿಲ್ಲೆಯ ಧುಂಡಾ ಗ್ರಾಮದ ಹರ್ಸಿಮ್ರತ್ ಕೌರ್ ರಂಧಾವಾ, ಎರಡು ವರ್ಷಗಳ ಹಿಂದೆ ಉನ್ನತ ವ್ಯಾಸಾಂಗಕ್ಕಾಗಿ ಕೆನಡಾಕ್ಕೆ ತೆರಳಿದ್ದರು. ಪ್ರತಿದಿನ ಸಂಜೆ ವಾಕಿಂಗ್ ಹೋಗುತ್ತಿದ್ದ ಹರ್ಸಿಮ್ರತ್ ಕೌರ್ ರಂಧಾವಾ, ಘಟನೆ ನಡೆದ ದಿನವೂ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಎರಡು ಗುಂಪುಗಳ ನಡುವೆ ಗುಂಡಿನ ಚಕಮಕಿ ಆರಂಭವಾಯಿತು. ಗುಂಡಿನ ಚಕಮಕಿಯಲ್ಲಿ ನಿರತವಾಗಿದ್ದ ಎರಡು ವಾಹನಗಳ ನಡುವೆ ಸಿಕ್ಕಿಕೊಂಡ ಹರ್ಸಿಮ್ರತ್, ಗುಂಡೇಟಿನಿಂದ ಗಾಯಗೊಂಡು ನೆಲಕ್ಕುರುಳಿದ್ದರು. ಕೂಡಲೇ ಸ್ಥಳಕ್ಕೆ ಧಾವಿಸಿದ ಹ್ಯಾಮಿಲ್ಟನ್ ಪೊಲೀರು ಆಕೆಯನ್ನು ಆಸ್ಪತ್ರೆಗೆ ಸೇರಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೇ ಆಕೆ ಅಸುನೀಗಿದಳು.



ಘಟನೆಯ ಕುರಿತು ಹೆಚ್ಚಿನ ಮಾಹಿತಿ ನೀಡಿರುವ ಹ್ಯಾಮಿಲ್ಟನ್ ಪೊಲೀಸರು, ಕಪ್ಪು ಬಣ್ಣದ ಮರ್ಸಿಡಿಸ್ ಎಸ್‌ಯುವಿ ವಾಹನದಲ್ಲಿದ್ದ ವ್ಯಕ್ತಿಯೊಬ್ಬ ಬಿಳಿ ಬಣ್ಣದ ಸೆಡಾನ್ ಕಾರಿನಲ್ಲಿದ್ದವರ ಮೇಲೆ ಗುಂಡು ಹಾರಿಸಿದ್ದಾನೆ. ಈ ವೇಳೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಹರ್ಸಿಮ್ರತ್ ಕೌರ್‌ಗೆ ಗುಂಡು ತಗುಲಿ, ಆಕೆ ಗಂಭೀರವಾಗಿ ಗಾಯಗೊಂಡಳು. ಆಕೆಯನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ದುರದೃಷ್ಟವಶಾತ್ ಆಕೆ ಚಿಕಿತ್ಸೆ ಫಲಕಾರಿಯಾಗದೇ ಆಕೆ ಮೃತಪಟ್ಟಳು ಎಂದು ಸ್ಪಷ್ಟಪಡಿಸಿದ್ದಾರೆ.

- **ಕೆನಡಾದಲ್ಲಿ ಎರಡು ಗುಂಪುಗಳ ಮಧ್ಯೆ ನಡೆದ ಗುಂಡಿನ ಚಕಮಕಿಯಲ್ಲಿ ಭಾರತೀಯ ಮೂಲದ ವಿದ್ಯಾರ್ಥಿನಿಯ ದುರಂತ ಅಂತ್ಯ**
- **ಹ್ಯಾಮಿಲ್ಟನ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಹರ್ಸಿಮ್ರತ್ ಕೌರ್ ರಂಧಾವಾ ದುಷ್ಕರ್ಮಿಗಳ ಗುಂಡೇಟಿಗೆ ಬಲಿ**
- **ಹರ್ಸಿಮ್ರತ್ ಕೌರ್ ರಂಧಾವಾ ಮೃತದೇಹವನ್ನು ಭಾರತಕ್ಕೆ ಕರೆತರಲು ಕೇಂದ್ರ ಸರ್ಕಾರದ ನೆರವು ಕೋರಿದ ಕುಟುಂಬಸ್ಥರು**

## ಮತ್ತೋರ್ವ ಹಿಂದೂ ನಾಯಕನ ಭೀಕರ ಕಗ್ಗೊಲೆ

**ಢಾಕಾ:** ಬಾಂಗ್ಲಾದೇಶದ ವಿಮೋಚನೆಗಾಗಿ ನೆತ್ತರು ಹರಿಸಿದ ಭಾರತ ಇದೀಗ ಆ ದೇಶದಲ್ಲಿ ಹರಿಯುತ್ತಿರುವ ಅಲ್ಪಸಂಖ್ಯಾತರ ನೆತ್ತರು ನೋಡಿ ದು:ಖಿಸುತ್ತಿದೆ. ಪಾಕಿಸ್ತಾನದ ಕಪಿಮುಷ್ಠಿಯಿಂದ ತಪ್ಪಿಸಿಕೊಳ್ಳಲು ನೆರವಾದ ಭಾರತಕ್ಕೆ, ಸದ್ಯದ ಬಾಂಗ್ಲಾದೇಶ ನೋವಿನ ಹೊರತು ಬೇರೇನೂ ನೀಡುತ್ತಿಲ್ಲ. ಅಲ್ಪಸಂಖ್ಯಾತರನ್ನು ತಮ್ಮ ಸಹೋದರರಂತೆ ನೋಡಬೇಕಾಗಿದ್ದವರು, ಅವರ ನೆತ್ತರು ಹರಿಸುವುದರಲ್ಲೇ ರಾಕ್ಷಸ ಸಂತೋಷವನ್ನು ಕಾಣುತ್ತಿದ್ದಾರೆ.

ಬಾಂಗ್ಲಾದೇಶದಲ್ಲಿ ಮತ್ತೋರ್ವ ಹಿಂದೂ ನಾಯಕನ ಭೀಕರ ಹತ್ಯೆಯಾಗಿದೆ. ಬಾಂಗ್ಲಾದೇಶ ಪೂಜಾ ಉದ್ಜಪನ್ ಪರಿಷತ್‌ನ ಬಿರಾಲ್ ಘಟಕದ ಉಪಾಧ್ಯಕ್ಷರಾಗಿದ್ದ ಭಾಬೇಶ್ ಚಂದ್ರ ಅವರನ್ನು, ಭೀಕರವಾಗಿ ಕೊಲೆ ಮಾಡಲಾಗಿದೆ. ಭಾಬೇಶ್ ಚಂದ್ರ ಅವರನ್ನು ದಿನಾಜ್‌ಪುರದ ಬಳಿ ಅಪಹರಿಸಿ, ಮನಬಂದಂತೆ ಥಳಿಸಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ದಿ ಡೈಲಿ ಸ್ಟಾರ್ ಪತ್ರಿಕೆಗೆ ಮಾಹಿತಿ ನೀಡಿರುವ ಹತ ಭಾಬೇಶ್ ಚಂದ್ರ ಅವರ ಪತ್ನಿ ಶಾಂತನಾ ರಾಯ್, ಎರಡು ಪ್ರತ್ಯೇಕ ಬೈಕ್‌ಗಳಲ್ಲಿ ಬಂದ ನಾಲ್ವರು ದುಷ್ಕರ್ಮಿಗಳು ಭಾಬೇಶ್ ಚಂದ್ರ ಅವರನ್ನು ಅಪಹರಣ ಮಾಡಿದರು. ಭಾಬೇಶ್ ಚಂದ್ರ ಅವರನ್ನು ಬಿರಾಲ್‌ನಿಂದ ದಿನಾಜ್‌ಪುರ್ ಮಾರ್ಗವಾಗಿ



ನರಾಬರಿ ಗ್ರಾಮಕ್ಕೆ ಕರೆದೊಯ್ದು ಅಪಹರಣಕಾರರು, ಅಮಾನವೀಯವಾಗಿ ಹಲ್ಲೆ ಮಾಡಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಭಾಬೇಶ್ ಚಂದ್ರ ಅವರನ್ನು ಮರಳಿ ಮನೆಗೆ ತಂದು ಬಿಟ್ಟಿದ್ದಾರೆ. ತಕ್ಷಣ ಅವರನ್ನು ಬಿರಾಲ್ ಉಪಜಿಲ್ಲಾ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಆದರೆ ಹೆಚ್ಚಿನ ಚಿಕಿತ್ಸೆಗಾಗಿ ದಿನಾಜ್‌ಪುರ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಭಾಬೇಶ್ ಚಂದ್ರ ಕೊನೆಯುಸಿರೆಳೆದರು ಎಂದು ತಿಳಿಸಿದ್ದಾರೆ. ಮುಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚಾಗಿದೆ. ನೆರೆಯ ದೇಶದಲ್ಲಿ ಹಿಂದೂಗಳ ಪರಿಸ್ಥಿತಿ ತುಂಬಾ ಕೆಟ್ಟದಾಗಿದ್ದು, ಅತ್ಯಾಚಾರ, ಕೊಲೆ ಮತ್ತು ದೇವಸ್ಥಾನಗಳನ್ನು ಅಪವಿತ್ರಗೊಳಿಸುವ ಘಟನೆಗಳು ನಿರಂತರವಾಗಿ ನಡೆಯುತ್ತಿವೆ.

## ಪಾಠದ ಬದಲು ಎಣ್ಣೆ ಹೊಡೆಯೋದು ಹೇಳಿಕೊಟ್ಟ ಶಿಕ್ಷಕ ಸಸ್ಪೆಂಡ್

**ಕಟ್ನಿ:** ಮಕ್ಕಳಿಗೆ ಪಾಠ ಮಾಡಪ್ಪ ಅಂದರೆ ವಿದ್ಯಾರ್ಥಿಗಳಿಗೆ ಎಣ್ಣೆ ನೀಡಲು ಮುಂದಾದ ಶಿಕ್ಷಕನಿಗೆ ಗೇಟ್ ಪಾಸ್ ನೀಡಲಾಗಿದೆ. ಶಿಕ್ಷಕ ವಿದ್ಯಾರ್ಥಿಗಳಿಗೆ ಮದ್ಯ ನೀಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ನಂತರ ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ ಸರ್ಕಾರಿ ಶಾಲಾ ಶಿಕ್ಷಕನನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬರ್ವಾರಾ ಬ್ಲಾಕ್‌ನ ಖಿರ್ಹಾನಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ ಲಾಲ್ ನವೀನ್ ಪ್ರತಾಪ್ ಸಿಂಗ್ ವಿದ್ಯಾರ್ಥಿಗಳಿಗೆ ಮದ್ಯ ನೀಡುತ್ತಿದ್ದ ವೀಡಿಯೊ ನಿನ್ನೆ ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡಿತ್ತು.

ವಿಡಿಯೋವನ್ನು ಗಮನಿಸಿದ ಡಿಸಿ ದಿಲೀಪ್ ಕುಮಾರ್ ಯಾದವ್ ಅವರು ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಶಿಕ್ಷಣ ಅಧಿಕಾರಿ ಒಪಿ ಸಿಂಗ್ ಅವರಿಗೆ ನಿರ್ದೇಶನ ನೀಡಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ವಿಡಿಯೋವನ್ನು ವಿವಿಧ ಬ್ಲಾಕ್‌ಗಳ ಅಧಿಕಾರಿಗಳಿಗೆ ಪ್ರಸಾರ ಮಾಡಲಾಗಿದೆ ಮತ್ತು ಶಿಕ್ಷಕನನ್ನು ನಂತರ ಲಾಲ್ ನವೀನ್ ಪ್ರತಾಪ್ ಸಿಂಗ್ ಎಂದು



ಗುರುತಿಸಲಾಗಿದೆ ಎಂದು ಅವರು ಹೇಳಿದರು.

ದುರ್ನಡತೆ, ಮಕ್ಕಳನ್ನು ಮದ್ಯಪಾನ ಮಾಡಲು ಪ್ರೋತ್ಸಾಹಿಸುವುದು ಮತ್ತು ಶಿಕ್ಷಕರ ಘನತೆಗೆ ಧಕ್ಕೆ ತಂದ ಆರೋಪದ ಮೇಲೆ ಸಿಂಗ್ ಅವರನ್ನು ಮಧ್ಯಪ್ರದೇಶ ನಾಗರಿಕ ಸೇವೆಗಳ ನಿಯಮಗಳ ಅಡಿಯಲ್ಲಿ ತಕ್ಷಣ ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ವಿಡಿಯೋದಲ್ಲಿ ವ್ಯಕ್ತಿಯೊಬ್ಬ ಕೋಣೆಯಲ್ಲಿ ಕಪ್‌ಗಳಲ್ಲಿ ಚಿಕ್ಕ ಹುಡುಗರಿಗೆ ಪಾನೀಯವನ್ನು ನೀಡುತ್ತಿರುವುದನ್ನು ತೋರಿಸುತ್ತದೆ, ಮತ್ತು ಅವನು ಅವರಲ್ಲಿ ಒಬ್ಬರಿಗೆ ಎಣ್ಣೆ ಹೊಡೆಯುವುದರಲ್ಲಿ ಏನು ತಪ್ಪಿಲ್ಲ ಎಂದು ಹೇಳುವುದು ವಿಡಿಯೋದಲ್ಲಿ ವೈರಲ್ ಆಗಿತ್ತು.

## ಮಕ್ಕಳ ಕಳ್ಳಿ ದಂತ ವೈದ್ಯೆ ಬಂಧನ

**ಮುಂಬೈ:** ಇಬ್ಬರು ಮಕ್ಕಳ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಲ್ಕತ್ತಾದ ಮಹಿಳಾ ದಂತವೈದ್ಯೆಯನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ವಡಾಲಾ ಟ್ರಕ್ ಟರ್ಮಿನಸ್ ಪೊಲೀಸ್ ಠಾಣೆಯ ತಂಡವು ಆರೋಪಿ ರೇಷ್ಮಾ ಸಂತೋಷ್ ಕುಮಾರ್ ಬ್ಯಾನರ್ಜಿಯನ್ನು ಬಂಧಿಸಿದ್ದು, ಕಾರ್ಯಾಚರಣೆಯಲ್ಲಿ ಎರಡು ವರ್ಷದ ಬಾಲಕ ಮತ್ತು ಮೂರು ವರ್ಷದ ಬಾಲಕಿಯನ್ನು ರಕ್ಷಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಗುತ್ತಿಗೆದಾರರೊಬ್ಬರು ಮೇ 2024 ರಲ್ಲಿ ತಮ್ಮ ಅಳಿಯ ಮತ್ತು ಪುಟ್ಟ ಮೊಮ್ಮಗನ ಅಪಹರಣದ ಬಗ್ಗೆ ದೂರು ನೀಡಿದ್ದರು. ದೂರುದಾರರ ಅಳಿಯ ಮಗುವನ್ನು ಆರೋಪಿಗಳಾದ ಅಸ್ಮಾ ಶೇಖ್, ಶರೀಫ್ ಶೇಖ್ ಮತ್ತು ಆಶಾ ಪವಾರ್ ಅವರಿಗೆ 1.6 ಲಕ್ಷ ರೂ.ಗೆ ಮಾರಾಟ ಮಾಡಿರುವ ಬಗ್ಗೆ ತನಿಖೆಯಿಂದ ತಿಳಿದುಬಂದಿತ್ತು.

ನಂತರ ಪೊಲೀಸರು ಮಗುವಿನ ತಂದೆ ಮತ್ತು ಇತರ ಮೂವರು ಆರೋಪಿಗಳನ್ನು ಬಂಧಿಸಿದ್ದು, ಅವರು ಒಡಿಶಾದ ಭುವನೇಶ್ವರ ರೈಲ್ವೆ ನಿಲ್ದಾಣದಲ್ಲಿ ಮಗುವನ್ನು ಮಹಿಳೆಗೆ ಮಾರಾಟ ಮಾಡಿದ್ದಾರೆ ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಅವರು ಹೇಳಿದರು.

ಈ ವರ್ಷದ ಏ. 5 ರಂದು, ಮಹಿಳೆ ಭುವನೇಶ್ವರದ ದಂತ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರಿಗೆ ಮಾಹಿತಿ ಸಿಕ್ಕಿತು. ಅಲ್ಲಿಗೆ ತೆರಳಿದ ತಂಡ ಮಕ್ಕಳ ಕಳ್ಳಿ ದಂತವೈದ್ಯೆಯನ್ನು ಬಂಧಿಸಿ ಕರೆ ತಂದಿದೆ.

## ತೆಲಂಗಾಣ ಭೀಕರ ಬಿಸಿಗಾಳಿ ಎಂದು ಘೋಷಣೆ

**ಹೈದರಾಬಾದ್:** ಬೇಸಿಗೆಯ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತೆಲಂಗಾಣ ಶಾಖದ ಅಲೆ ಎದುರಿಸಲು ರಾಜ್ಯವನ್ನು ಭೀಕರ ಬಿಸಿಗಾಳಿ ರಾಜ್ಯ ಎಂದು ಘೋಷಿಸಿದ್ದು ಬಿಸಿಗಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ತಲಾ 4 ಲಕ್ಷ ಪರಿಹಾರ ನೀಡುವುದಾಗಿ ಪ್ರಕಟಿಸಿದ್ದಾರೆ

ಬಿಸಿಲಿನ ತಾಪಮಾನದಿಂದ ಮೃತಪಟ್ಟ ವ್ಯಕ್ತಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಬಲಿಯಾದವರ ಕುಟುಂಬಗಳಿಗೆ 4 ಲಕ್ಷ ರೂ. ಪರಿಹಾರವನ್ನು ನೀಡಲಾಗುವುದು ಎಂದು ಹೇಳಿದೆ.

ಕಂದಾಯ-ವಿಪತ್ತು ನಿರ್ವಹಣೆ ಇಲಾಖೆಯ ವಿಶೇಷ ಮುಖ್ಯ ಕಾರ್ಯದರ್ಶಿ ಅರವಿಂದ್ ಕುಮಾರ್ ಹೊರಡಿಸಿದ ಸರ್ಕಾರಿ ಆದೇಶದಲ್ಲಿ ಶಾಖದ ಅಲೆಗಳು ಗಮನಾರ್ಹ ಪರಿಣಾಮ ಹೊಂದಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ರೇವಂತ್ ರೆಡ್ಡಿ ನೇತೃತ್ವದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದಿದ್ದಾರೆ. 2024 ರಲ್ಲಿ ತೆಲಂಗಾಣದ 33 ಜಿಲ್ಲೆಗಳಲ್ಲಿ 28 ಜಿಲ್ಲೆಗಳು ಕನಿಷ್ಠ 15 ದಿನಗಳ ಕಾಲ ಶಾಖದ ಅಲೆಯ ಪರಿಸ್ಥಿತಿ ಎದುರಿಸಿತ್ತು, ಬಿಸಿಲಿನ ತಾಪವನ್ನು ವಿಪತ್ತು ಎಂದು ವರ್ಗೀಕರಿಸುವ ಯಾವುದೇ ಅಧಿಸೂಚನೆ ಇಲ್ಲದ ಕಾರಣ, ರಾಜ್ಯ, ಆಪದ್ಬಂಧು ಯೋಜನೆಯಡಿ ಬಿಸಿಲಿನ ಆಘಾತಕ್ಕೆ ಒಳಗಾದವರ ಕುಟುಂಬಕ್ಕೆ ಕೇವಲ 50,000 ರೂ.ಗಳ ಸಹಾಯವನ್ನು ಮಾತ್ರ ನೀಡಲು ಸಾಧ್ಯವಿತ್ತು. ಇದೀಗ ಆ ಮೊತ್ತವನ್ನು ನಾಲ್ಕ ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದಿದ್ದಾರೆ



ಸರ್ಕಾರದ ಮಾರ್ಗಸೂಚಿಗಳ ಅಡಿಯಲ್ಲಿ, ರಾಜ್ಯ ಸರ್ಕಾರಗಳು ಔಪಚಾರಿಕವಾಗಿ ತಿಳಿಸಲ್ಪಟ್ಟ ನಂತರ ''ರಾಜ್ಯ-ನಿರ್ದಿಷ್ಟ ವಿಪತ್ತುಗಳನ್ನು'' ಪರಿಹರಿಸಲು ತಮ್ಮ ವಾರ್ಷಿಕ ನಿಧಿಯ 10 ಪ್ರತಿಶತದವರೆಗೆ ಹಂಚಿಕೆ ಮಾಡಲು ಅನುಮತಿಸಲಾಗಿದೆ. ತೆಲಂಗಾಣ ಸರ್ಕಾರ ಈಗ ಬಿಸಿಲಿನ ಆಘಾತ ಮತ್ತು ಬಿಸಿಲಿನ ತಾಪಮಾನ ಎದುರಸಲು ಅಗ್ರತಯ ಸಿದ್ಧತೆ ಮಾಡಿಕೊಂಡಿದೆ. ಆದೇಶದ ಪ್ರಕಾರ, ಜಿಲ್ಲಾ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿ ಸೇರಿ ದಂತೆ ಸೂಕ್ತ ಅಧಿಕಾರಿಗಳು, ಶಾಖಕ್ಕೆ ಸಂಬಂ ಧಿಸಿದ ಸಾವಿಗೆ ಕಾರಣವನ್ನು ನಿರ್ಧರಿಸುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.

**ಸಾವುಗಳು ತೀವ್ರ**

**ಶಾಖದ ಅಲೆಗಳಿಂದ ಉಂಟಾಗುವ ಸಾವುಗಳು ಮತ್ತು ತೀವ್ರ ಪರಿಣಾಮಗಳು, ವಿಶೇಷವಾಗಿ ವೃದ್ಧರು, ಮಹಿಳೆಯರು, ಮಕ್ಕಳು ಮತ್ತು ರೈತರು ಮತ್ತು ನಿರ್ಮಾಣ ಕಾರ್ಮಿಕರು ಸೇರಿದಂತೆ ಹೊರಾಂಗಣ ಉದ್ಯೋಗಗಳಲ್ಲಿ ನಿರತರಾಗುವ ಮಂದಿ ಎಚ್ಚರಿಕೆ ವಹಿಸುವಂತೆ ತಿಳಿಸಲಾಗಿದೆ.**

## ಬಾಲಕನ ಅಪಹರಿಸಿ ಹಲ್ಲೆ ಮಾಡಿ ಸೋಷಿಯಲ್ ಮೀಡಿಯಾದಲ್ಲಿ ವಿಡಿಯೋ ಹರಿಬಿಟ್ಟ 12 ಮಂದಿ ಅಪ್ರಾಪ್ತರು

**ಡೆಹ್ರಾಡೂನ್:** ಬೆಚ್ಚಿಬೀಳಿಸುವ ಘಟನೆಯಲ್ಲಿ, ಸ್ಕೂಟರ್‌ಗಳಲ್ಲಿ ಬಂದ ಸುಮಾರು 12 ಮಂದ ಅಪ್ರಾಪ್ತ ವಯಸ್ಕರ ಗುಂಪೊಂದು ಟ್ಯೂಷನ್‌ಗೆ ಹೋಗುತ್ತಿದ್ದ ಅಪ್ರಾಪ್ತ ಬಾಲಕನನ್ನು ಅಪಹರಿಸಿ ಹಲ್ಲೆ ನಡೆಸಿರುವ ಘಟನೆ ಉತ್ತರಾಖಂಡದಲ್ಲಿ ನಡೆದಿದೆ. ಬಾಲಕಿಯನ್ನು ಅಪಹರಿಸಿ ಏಕಾಂತ ಸ್ಥಳಕ್ಕೆ ಕರೆದೊಯ್ದು, ಕೋಲು ಮತ್ತು ಬೆಲ್ಟ್ ನಿಂದ ಕ್ರೂರವಾಗಿ ಥಳಿಸಿ, ಹಲ್ಲೆ ನಡೆಸಿ ಸಂಪೂರ್ಣ ಘಟನೆಯನ್ನು ವಿಡಿಯೋ ರೆಕಾರ್ಡ್ ಮಾಡಿದ್ದಾರೆ. ಪೊಲೀಸ್ ಮೂಲಗಳು ಹೇಳುವ ಪ್ರಕಾರ, ಈ ಬಾಲಕರು ತಮ್ಮ ಸೋಷಿಯಲ್ ಮೀಡಿಯಾ ಅಕೌಂಟ್‌ಗಳಲ್ಲಿ ಫಾಲೋವರ್ಸ್ ಗಳನ್ನು ಹೆಚ್ಚಿಸಲು ವೀಡಿಯೊವನ್ನು ಆನ್‌ಲೈನ್‌ನಲ್ಲಿ ಹಂಚಿಕೊಂಡಿದ್ದಾರೆ ಎಂದು ವರದಿಯಾಗಿದೆ. ಸೋಷಿಯಲ್ ಮೀಡಿಯಾ ಮಕ್ಕಳ ಮೇಲೆ ಯಾವ ರೀತಿ ಋಣಾತ್ಮಕವಾಗಿ ಪರಿಣಾಮ ಬೀರುತ್ತದೆ ಎಂಬ ಕರಾಳ ಮುಖವನ್ನು ಇದು ತೋರಿಸುತ್ತದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ. ದೂರಿನ ಆಧಾರದ ಮೇಲೆ, ಪೊಲೀಸರು 12 ಬಾಲಕರ ವಿರುದ್ಧ ಪ್ರಕರಣ ದಾಖಲಿಸಿ ಶೋಧ ಕಾರ್ಯ ನಡೆಸುತ್ತಿದ್ದಾರೆ. ನಾವು ಈ ಪ್ರಕರಣವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಿದ್ದೇವೆ, ಬಾಲಕ ಮತ್ತು ಆತನ ಪೋಷಕರಿಗೆ ನ್ಯಾಯ ಒದಗಿಸಲಾಗುವುದು ಎಂದು ತನಿಖಾಧಿಕಾರಿಗಳು ಹೇಳುತ್ತಾರೆ. ಪೊಲೀಸರಿಗೆ ಬಂದ ಮಾಹಿತಿಯ ಪ್ರಕಾರ, ಉತ್ತರಾಖಂಡದ ರೂರ್ಕಿಯ ಮೊಹಲ್ಲಾ ಸೋಟ್ ನಿವಾಸಿ ಮುನ್ನೆತ್ ರಜಪೂತ್ ಮೊನ್ನೆ ಮಗ ರಿತೇನ್ ಚೌಹಾಣ್ ಟ್ಯೂಷನ್‌ಗೆ ಹೋಗುತ್ತಿದ್ದಾಗ ರಾಮನಗರದಲ್ಲಿ ಸ್ಕೂಟರ್‌ಗಳಲ್ಲಿ ಬಂದ ಸುಮಾರು 12 ಹುಡುಗರು ಅವನನ್ನು ತಡೆದು ಅಪಹರಿಸಿಕೊಂಡು ಹೋಗಿ ಥಳಿಸಿದರು.

## ಮಹಾರಾಷ್ಟ್ರದಲ್ಲಿ ಹಿಂದಿ ಕಡ್ಡಾಯಗೊಳಿಸಲು ಬಿಡುವುದಿಲ್ಲ: ಉದ್ಧವ್ ಠಾಕ್ರೆ

**ಮುಂಬೈ:** 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದಿಯನ್ನು ಕಡ್ಡಾಯಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದ ನಂತರ, ಮಹಾರಾಷ್ಟ್ರದಲ್ಲಿ ಹಿಂದಿ ಕಡ್ಡಾಯಗೊಳಿಸಲು ತಮ್ಮ ಪಕ್ಷವು ಅವಕಾಶ ನೀಡುವುದಿಲ್ಲ ಎಂದು ಶಿವಸೇನೆ(ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಶನಿವಾರ ಹೇಳಿದ್ದಾರೆ. ಶಿವಸೇನೆ(ಯುಬಿಟಿ) ಕಾರ್ಮಿಕರ ವಿಭಾಗವಾದ ಭಾರತೀಯ ಕಾಮಗರ್ ಸೇನೆಯ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಠಾಕ್ರೆ, ತಮ್ಮ ಪಕ್ಷಕ್ಕೆ ಹಿಂದಿ ಭಾಷೆಯ ಬಗ್ಗೆ ಯಾವುದೇ ದ್ವೇಷವಿಲ್ಲ. ಆದರೆ ಅದನ್ನು ಬಲವಂತವಾಗಿ ಏಕೆ ನಮ್ಮ ಮೇಲೆ ಹೇರಲಾಗುತ್ತಿದೆ ಎಂದು ಪ್ರಶ್ನಿಸಿದರು.



ಮಹಾರಾಷ್ಟ್ರದಾದ್ಯಂತ ಮರಾಠಿ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದಿಯನ್ನು ಮೂರನೇ ಕಡ್ಡಾಯ ಭಾಷೆಯನ್ನಾಗಿ ಮಾಡುವ ಮಹಾರಾಷ್ಟ್ರ ಸರ್ಕಾರದ ನಿರ್ಧಾರದ ಬಗ್ಗೆ ವಿರೋಧ ಪಕ್ಷಗಳ ಆಕ್ರೋಶದ ನಡುವೆ ಮಾಜಿ ಸಿಎಂ ಠಾಕ್ರೆ ಅವರು ಈ ಹೇಳಿಕೆ ನೀಡಿದ್ದಾರೆ.

ಈ ಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿದೆ, ಇದನ್ನು ರಾಜ್ಯಾದ್ಯಂತ ಹಂತ ಹಂತವಾಗಿ ಜಾರಿಗೆ ತರಲಾಗುತ್ತಿದೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು, ರಾಜ್ಯವು ಈಗಾಗಲೇ ಅಳವಡಿಸಿಕೊಂಡಿದೆ. ಮರಾಠಿ ಭಾಷೆಯನ್ನು ಈಗಾಗಲೇ ಕಡ್ಡಾಯಗೊಳಿಸಲಾಗಿದೆ. ಹಿಂದಿ ಭಾಷೆಯನ್ನು ಸಹ ಕಲಿಯಬೇಕು. ಏಕೆಂದರೆ ಅದು ಇಡೀ ದೇಶಾದ್ಯಂತ ಸಂವಹನ ಸಾಧನವಾಗಿದೆ ಎಂದು ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.


### ಭಾರೀ ಪ್ರಮಾಣದಲ್ಲಿ ಭಾರತೀಯ ವಿದ್ಯಾರ್ಥಿಗಳ ವೀಸಾ ರದ್ದು ಮಾಡುತ್ತಿರುವ ಡೊನಾಲ್ಡ್ ಟ್ರಂಪ್ ಆಡಳಿತ

# ವೀಸಾ ರದ್ದತಿಯಲ್ಲಿ ಶೇ.50ರಷ್ಟು ಭಾರತೀಯ ವಿದ್ಯಾರ್ಥಿಗಳದ್ದೇ ಪಾಲು

**ವಾಷಿಂಗ್ಟನ್ ಡಿಸಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರಿಂದ ಭಾರತೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಅಮೆರಿಕದ ವಲಸೆ ವಕೀಲರ ಸಂಘದ (ಂಖಐಂ) ವರದಿಯ ಪ್ರಕಾರ, ಅವರು ಸಂಗ್ರಹಿಸಿದ 327 ವೀಸಾ ರದ್ದತಿಗಳಲ್ಲಿ ಅರ್ಧದಷ್ಟು ಭಾರತೀಯ ವಿದ್ಯಾರ್ಥಿಗಳದ್ದಾಗಿವೆ.

ಕಳೆದ ನಾಲ್ಕು ತಿಂಗಳಿಂದ ಅಮೆರಿಕದ ವಿದೇಶಾಂಗ ಇಲಾಖೆ ಮತ್ತು ವಲಸೆ ಮತ್ತು ಕಸ್ಟಮ್ಸ್ ಜಾರಿ ವಿದೇಶಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಪರಿಶೀಲಿಸುತ್ತಿವೆ. ಈ ಪರಿಶೀಲನೆಯನ್ನು ಕೃತಕ ಬುದ್ಧಿಮತ್ತೆ ಬಳಸಿ ಮಾಡಲಾಗುತ್ತಿದೆ. ಇದರಿಂದ ಯಾವುದೇ ಅಪರಾಧ ಹಿನ್ನೆಲೆ ಇಲ್ಲದ ಅಥವಾ ಪ್ರತಿಭಟನೆಗಳಲ್ಲಿ ಭಾಗವಹಿಸದ ವಿದ್ಯಾರ್ಥಿಗಳಿಗೂ ತೊಂದರೆಯಾಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಕಳೆದ ಮಾರ್ಚ್‌ನಲ್ಲಿ, ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಕ್ಯಾಚ್ ಯಂಡ್ ರಿವೋಕ್ ಕಾರ್ಯಕ್ರಮವನ್ನು ಘೋಷಿಸಿದ್ದರು.

ಇದರ ಮೂಲಕ ವಿದ್ಯಾರ್ಥಿಗಳ ವೀಸಾಗಳನ್ನು ಪರಿಶೀಲಿಸಲಾಗುತ್ತಿದೆ. ಅವರ ಸಾಮಾಜಿಕ ಮಾಧ್ಯಮಗಳಲ್ಲಿ ಯಹೂದಿ ವಿರೋಧಿ ಅಥವಾ ಪ್ಯಾಲೆಸ್ಟೈನ್ ಮತ್ತು ಹಮಾಸ್‌ಗೆ ಬೆಂಬಲ ಇರುವ ಪೋಸ್ಟ್‌ಗಳಿವೆಯೇ ಎಂಬುದನ್ನು ಪರಿಶೀಲನೆ ಮಾಡಲಾಗುತ್ತಿದೆ. ವಿದ್ಯಾರ್ಥಿ ಮತ್ತು ವಿನಿಮಯ ಸಂದರ್ಶಕರ ಮಾಹಿತಿ ವ್ಯವಸ್ಥೆ ಎಂಬ ಪೋರ್ಟಲ್ ಅನ್ನು ಅಮೆರಿಕದ ಗೃಹ ಭದ್ರತಾ ಇಲಾಖೆ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ಮತ್ತು ವಿನಿಮಯ ಕಾರ್ಯಕ್ರಮದ ಸಂದರ್ಶಕರನ್ನು ಟ್ರ್ಯಾಕ್ ಮಾಡಲು ಬಳಸುತ್ತದೆ.



**ಇದೆಂತಾ ಫ್ರೆಂಡ್‌ಶಿಪ್ ಟ್ರಂಪ್?**

ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ವ್ಯವಸ್ಥೆಯಲ್ಲಿ 4,736 ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ವೀಸಾವನ್ನು ರದ್ದು ಮಾಡಲಾಗಿದೆ.

ಇವರಲ್ಲಿ ಹೆಚ್ಚಿನವರು ವೀಸಾವನ್ನು ಹೊಂದಿದ್ದರು. ಈ ಕ್ರಮಗಳು ಕಾನೂನು ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ ಎಂದು ಹೇಳಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. 327 ಪ್ರಕರಣಗಳಲ್ಲಿ ಶೇ. 50ರಷ್ಟು ವಿದ್ಯಾರ್ಥಿಗಳು ಐಚ್ಛಿಕ ಪ್ರಾಯೋಗಿಕ ತರಬೇತಿ ಹೊಂದಿರುವವರಾಗಿದ್ದಾರೆ.

ಎಫ್-1 ವೀಸಾದಲ್ಲಿರುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ಒಪಿಟಿ ಮೂಲಕ ಅಮೆರಿಕದಲ್ಲಿ 12 ತಿಂಗಳವರೆಗೆ ಕೆಲಸ ಮಾಡಲು ಅವಕಾಶವಿದೆ. ವೀಸಾ ರದ್ದಾದ ಕಾರಣ ಇವರು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಟೆಕ್ಸಾಸ್, ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್, ಮಿಚಿಗನ್ ಮತ್ತು ಅರಿಜೋನಾ ರಾಜ್ಯಗಳಿಗೆ ಹೆಚ್ಚು ತೊಂದರೆಯಾಗಿದೆ. ಸುಮಾರು 1,000 ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ವೀಸಾಗಳನ್ನು ರದ್ದು ಮಾಡಲಾಗಿದೆ ಎಂದು ಅಸೋಸಿಯೇಟೆಡ್ ಪ್ರೆಸ್ ಹೇಳಿದೆ.

- **ಭಾರೀ ಪ್ರಮಾಣದಲ್ಲಿ ಭಾರತೀಯ ವಿದ್ಯಾರ್ಥಿಗಳ ವೀಸಾ ರದ್ದು ಮಾಡುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ**
- **ಶೇ.50ರಷ್ಟು ಭಾರತೀಯ ವಿದ್ಯಾರ್ಥಿಗಳ ವೀಸಾ ರದ್ದುಗೊಳಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ**
- **ವಿದೇಶಿ ವಿದ್ಯಾರ್ಥಿಗಳ ಚಟುವಟಿಕೆಗಳ ಮೇಲೆ ಗಮನ ಇಟ್ಟಿರುವ ಅಮೆರಿಕದ ವಿದೇಶಾಂಗ ಇಲಾಖೆ ಮತ್ತು ವಲಸೆ ಮತ್ತು ಕಸ್ಟಮ್ಸ್ ಜಾರಿ**

ಡೊನಾಲ್ಡ್ ಟ್ರಂಪ್ ಆಡಳಿತದ ಈ ಕಠಿಣ ನೀತಿಯಿಂದ ಭಾರತ ಮತ್ತು ಚೀನಾದ ವಿದ್ಯಾರ್ಥಿಗಳಿಗೆ ಹೆಚ್ಚು ತೊಂದರೆಯಾಗಿದೆ. ಏಕೆಂದರೆ ಅಮೆರಿಕದ ಕಾಲೇಜುಗಳಲ್ಲಿ ಅವರ ಸಂಖ್ಯೆ ಹೆಚ್ಚಾಗಿದೆ. ಆದರೆ ಇದು ಒಂದು ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ ಎಂದು ವಕೀಲರು ಹೇಳಿದ್ದಾರೆ.


ಭಾರತ ಸರ್ಕಾರವು ಈ ವಿಷಯವನ್ನು ಗಮನಿಸಿದ್ದು, ಅನೇಕ ಭಾರತೀಯ ವಿದ್ಯಾರ್ಥಿಗಳಿಗೆ ಅವರ ಈ-1 ವೀಸಾ ರದ್ದತಿ ಬಗ್ಗೆ ಅಮೆರಿಕ ಸರ್ಕಾರದಿಂದ ಮಾಹಿತಿ ಬಂದಿದೆ ಎಂಬುದು ನಮಗೆ ತಿಳಿದಿದೆ. ನಾವು ಈ ವಿಷಯವನ್ನು ನೋಡುತ್ತಿದ್ದೇವೆ. ನಮ್ಮ ರಾಯಭಾರಿ ಕಚೇರಿ ಮತ್ತು ದೂತಾವಾಸವು ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

AILA ವರದಿಯ ಪ್ರಕಾರ, ಯುಎಸ್ ವೀಸಾ ರದ್ದಾದವರಲ್ಲಿ ಶೇ. 50ರಷ್ಟು ಭಾರತೀಯ ವಿದ್ಯಾರ್ಥಿಗಳಾಗಿದ್ದು, ನಂತರ ಚೀನಾದ ವಿದ್ಯಾರ್ಥಿಗಳು ಶೇ. 14ರಷ್ಟಿದ್ದಾರೆ. ದಕ್ಷಿಣ ಕೊರಿಯಾ, ನೇಪಾಳ ಮತ್ತು ಬಾಂಗ್ಲಾದೇಶದ ವಿದ್ಯಾರ್ಥಿಗಳಿಗೂ ಇದರಿಂದ ತೊಂದರೆಯಾಗಿದೆ.

# ಮೊದಲ ದಿನ ಕೇಸರಿ 2 ಗಳಿಸಿದ್ದೆಷ್ಟು

ಅಕ್ಷಯ್ ಕುಮಾರ್ ನಟನೆಯ 'ಕೇಸರಿ 2' ನಿನ್ನೆಯಷ್ಟೆ ಬಿಡುಗಡೆ ಆಗಿದೆ. ಸಿನಿಮಾ ದೇಶಪ್ರೇಮದ ಕತೆ ಹೊಂದಿದೆ. ಸಿನಿಮಾ ನೋಡಿದ ಮಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಕೇಸರಿ 2' ಸಿನಿಮಾ ಮೊದಲ ದಿನ ಬಾಕ್ಸ್ ಆಫೀಸ್ ನಲ್ಲಿ ಗಳಿಸಿದ ಹಣವೆಷ್ಟು ಅಕ್ಷಯ್ ಕುಮಾರ್ ಗೆದ್ದರಾ ಸತತ ಸೋಲುಗಳನ್ನೇ ಕಾಣುತ್ತಿರುವ ಬಾಲಿವುಡ್ ಸ್ಟಾರ್ ನಟ ಅಕ್ಷಯ್ ಕುಮಾರ್ ನಟನೆಯ 'ಕೇಸರಿ 2' ಸಿನಿಮಾ ಏಪ್ರಿಲ್ 19 ಬಿಡುಗಡೆ ಆಗಿದೆ.

ಜಲಿಯನ್ ವಾಲಾಭಾಗ್ ಹತ್ಯಾಕಾಂಡದ ನ್ಯಾಯಾಲಯ ವಿಚಾರಣೆಯನ್ನು ಆಧರಿಸಿ ನಿರ್ಮಾಣಗೊಂಡಿರುವ ಸಿನಿಮಾ ಇದಾಗಿದೆ. ಸಿನಿಮಾನಲ್ಲಿ ಚೆತ್ತೂರು ಶಂಕರ ನಾಯರ್ ಪಾತ್ರದಲ್ಲಿ ಅಕ್ಷಯ್ ಕುಮಾರ್ ನಟಿಸಿದ್ದಾರೆ. ನಿವಿಲೆ ಮೆಕಿನ್ಲೆ ಪಾತ್ರದಲ್ಲಿ ಆರ್ ಮಾಧವನ್ ನಟಿಸಿದ್ದಾರೆ. ಸಿನಿಮಾ ನಿನ್ನೆಯಷ್ಟೆ ಬಿಡುಗಡೆ ಆಗಿದ್ದು, ಮೊದಲ ದಿನ ಸಿನಿಮಾ ಮಾಡಿರುವ ಕಲೆಕ್ಷನ್ ಎಷ್ಟು 'ಕೇಸರಿ 2' ಸಿನಿಮಾ ಮೊದಲ ದಿನ ಸಾಧಾರಣ ಮೊತ್ತ ಕಲೆಕ್ಷನ್ ಮಾಡಿದೆ. ಬಿಡುಗಡೆ ಆದ ಮೊದಲ ದಿನ ಈ ಸಿನಿಮಾ ಗಳಿಸಿರುವುದು 7.50 ಕೋಟಿ ರೂಪಾಯಿ. ಸಿನಿಮಾದ ಅಡ್ವಾನ್ಸ್ ಟಿಕೆಟ್ ಬುಕಿಂಗ್‌ನಿಂದ ಸುಮಾರು 1.50 ಕೋಟಿ ಹಣ ಗಳಿಕೆಯಾಗಿತ್ತು. ಎಲ್ಲಾವೂ ಸೇರಿ ಮೊದಲ ದಿನಕ್ಕೆ ಕೇವಲ 7.50 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ. ಆ ಮೂಲಕ ಅಕ್ಷಯ್ ಕುಮಾರ್ ಮತ್ತೊಂದು ಸಾಧಾರಣ ಓಪನಿಂಗ್ ಅನ್ನು ಪಡೆದುಕೊಂಡಿದೆ. ಇತ್ತೀಚೆಗೆ ಬಿಡುಗಡೆ ಆಗಿದ್ದ ಸನ್ನಿ ಡಿಯೋಲ್‌ರ ಜಾಟ್ ಸಿನಿಮಾ ಮೊದಲ ದಿನ 7.40 ಕೋಟಿ ರೂಪಾಯಿ ಗಳಿಕೆ ಕಂಡಿತ್ತು. ಶುಕ್ರವಾರ ಗುಡ್ ಫ್ರೈಡೆ ರಜೆ ಇತ್ತು. ಹಾಗಿದ್ದರೂ ಸಹ ಜನ ಅಕ್ಷಯ್ ಕುಮಾರ್ ಅವರ ಸಿನಿಮಾ ನೋಡಲು ಆಸಕ್ತಿ ತೋರಿಸಿಲ್ಲ. ಮೊದಲ ದಿನ 7.50 ಕೋಟಿ ಸಾಧಾರಣ ಮೊತ್ತವಾದರೂ ನಿರಾಶಾದಾಯಕ ಮೊತ್ತವಲ್ಲ. 'ಜಾಟ್' ಸಿನಿಮಾ ರೀತಿ ಇದೇ ಸರಾಸರಿಯನ್ನು ಮುಂದುವರೆಸಿಕೊಂಡು ಹೋದಲ್ಲಿ 'ಕೇಸರಿ 2' ಸಿನಿಮಾ 50-60 ಕೋಟಿ ಕಲೆಕ್ಷನ್ ಅನ್ನು ಸುಲಭವಾಗಿ ದಾಟಿಕೊಳ್ಳಲಿದೆ.





# ನಾಲಗೆ ಹರಿಬಿಟ್ಟ ಊರ್ವಶಿ

**ಎಚ್ಚರಿಕೆ ನೀಡಿದ ಆರಾಧಕರು**

ನಟಿ ಊರ್ವಶಿ ರೌಟೆಲಾ ತಮ್ಮ ಗ್ಲಾಮರಸ್ ಪಾತ್ರಗಳಿಂದ ಜನಪ್ರಿಯರು. ಇತ್ತೀಚೆಗೆ ಐಟಂ ಹಾಡುಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿ ದ್ದಾರೆ. ತಮ್ಮನ್ನು ತಾವು ಹೊಗಳಿಕೊಳ್ಳುವ ಕೆಟ್ಟ ಅಭ್ಯಾಸವುಳ್ಳ ನಟಿ ಊರ್ವಶಿ, ಇತ್ತೀಚೆಗೆ ಸಂದರ್ಶನವೊಂದರಲ್ಲಿ, ಉತ್ತರಾಖಂಡ್ ರಾಜ್ಯದಲ್ಲಿ ತಮಗಾಗಿ ದೇವಾಲಯ ನಿರ್ಮಿಸಲಾಗಿದೆ ಎಂದಿದ್ದಾರೆ. ಆದರೆ ಇದೀಗ ವಿವಾದಕ್ಕೆ ಕಾರಣವಾಗಿದೆ. ಊರ್ವಶಿ ರೌಟೆಲಾ ಒಳ್ಳೆಯ ನೃತ್ಯಗಾರ್ತಿ ಆದರೆ ಬಾಯಿ ಬಿಟ್ಟರೆ ವಿವಾದ ಉಂಟಾಗುವ ಮಾತುಗಳನ್ನೇ ಆಡುತ್ತಾರೆ. ತಮ್ಮನ್ನು ತಾವು ಪಿಆರ್‌ಮಾಡಿಕೊಳ್ಳುತ್ತಲೇ ಇರುವ ಛಾಳಿ ಊರ್ವಶಿ ರೌಟೆಲಾ ಅವರಿಗೆ. ಈ ಹಿಂದೆ ತಮ್ಮನ್ನು ತಾವು ಹೊಗಳಿಕೊಳ್ಳುವ ಭರದಲ್ಲಿ ತಾನು ದೇಶದ ಶ್ರೀಮಂತ ನಟಿ ಎಂದು ಹೇಳಿಕೊಂಡಿದ್ದರು ಈ ನಟಿ. ಸೈಫ್ ಅಲಿ ಖಾನ್ ಮೇಲೆ ದಾಳಿ ಆದ ಬಗ್ಗೆ ಕೇಳಿದ ಪ್ರಶ್ನೆ ಕೇಳಿದಾಗೂ ತಮ್ಮ ಸಿರಿತನದ ಬಗ್ಗೆಯೇ ಮಾತನಾಡಿ ಟ್ರೋಲ್ ಆಗಿದ್ದ ಊರ್ವಶಿ ರೌಟೆಲಾ, ಈಗ ಸಹ ತಮ್ಮನ್ನು ಹೊಗಳಿಕೊಳ್ಳುವ ಭರದಲ್ಲಿ ಆಡಿದ ಮಾತುಗಳು ದೇವಾಲಯದ ಆರಾಧಕರಿಗೆ ಘಾಸಿ ಉಂಟು ಮಾಡಿದೆ.

ನಟಿ ಊರ್ವಶಿ ರೌಟೆಲಾ, ಇತ್ತೀಚೆಗೆ ಮಾಧ್ಯಮಗಳೊಟ್ಟಿಗೆ ಮಾತನಾಡಿ, ಅಭಿಮಾನಿಗಳು ತಮಗಾಗಿ ದೇವಾಲಯ ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದ್ದರು. ಉತ್ತರಾಖಂಡ್‌ನಲ್ಲಿ ನನ್ನ ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡಿದ್ದಾರೆ. ನನ್ನ ಮೂರ್ತಿಯನ್ನು ದೇವರಾಗಿ ಇರಿಸಿ ಪ್ರತಿನಿತ್ಯ ಪೂಜೆ ಮಾಡುತ್ತಿದ್ದಾರೆ, ಪ್ರತಿದಿನ ಸಾವಿರಾರು ಮಂದಿ ಭಕ್ತಾದಿಗಳು ಅಲ್ಲಿಗೆ ಭೇಟಿ ನೀಡುತ್ತಾರೆ.



# ಕಾಶ್ಮೀರದಲ್ಲಿ ಸೃಷ್ಟಿಯಾಯ್ತು ಇತಿಹಾಸ

'ಗ್ರೌಂಡ್ ಜೀರೋ' ಚಿತ್ರದಲ್ಲಿ ಗಡಿ ಭದ್ರತಾ ಪಡೆಯ ಯೋಧನಾಗಿ ಇಮ್ರಾನ್ ಹಷ್ಮಿ ನಟಿಸಿದ್ದಾರೆ. ಕಾಶ್ಮೀರಕ್ಕೆ ಸಂಬಂಧಿಸಿದ ಕಥೆ ಈ ಸಿನಿಮಾದಲ್ಲಿದೆ. ವಿಶೇಷ ಏನೆಂದರೆ, ಈ ಸಿನಿಮಾದ ಪ್ರದರ್ಶನವನ್ನು ಕಾಶ್ಮೀರದಲ್ಲೇ ಮಾಡಲಾಗಿದೆ. ಈ ಮೂಲಕ 38 ವರ್ಷಗಳ ನಂತರ ಕಾಶ್ಮೀರದಲ್ಲಿ ಸಿನಿಮಾ ಪ್ರದರ್ಶನ ಆದಂತಾಗಿದೆ. ಕಾಶ್ಮೀರ ಎಂದಕೂಡಲೇ ಗುಂಡಿನ ಸದ್ದು ನೆನಪಾಗುತ್ತದೆ. ಅಷ್ಟರಮಟ್ಟಿಗೆ ಭಯೋತ್ಪಾದಕ ಚಟುವಟಿಕೆಗಳು ಅಲ್ಲಿ ನಡೆದಿವೆ. ಆದರೆ ಇತ್ತೀಚೆಗೆ ಪರಿಸ್ಥಿತಿ ಸುಧಾರಿಸುತ್ತಿದೆ. ಹಾಗಾಗಿ ಜನಜೀವನದಲ್ಲಿ ಕೂಡ ಬದಲಾವಣೆ ಕಾಣುತ್ತಿದೆ. ಕಳೆದ ನಾಲ್ಕು ದಶಕದಿಂದ ಅಲ್ಲಿ ಯಾವುದೇ ಸಿನಿಮಾ ಪ್ರದರ್ಶನ ಆಗಿರಲಿಲ್ಲ. ಈಗ ಬಾಲಿವುಡ್‌ನ 'ಗ್ರೌಂಡ್ ಜೀರೋ' ಸಿನಿಮಾ ಇತಿಹಾಸ ಸೃಷ್ಟಿ ಮಾಡಿದೆ. ಬರೋಬ್ಬರಿ 38 ವರ್ಷಗಳ ಬಳಿಕ ಕಾಶ್ಮೀರದ ಶ್ರೀನಗರದಲ್ಲಿ ಸಿನಿಮಾ ಪ್ರದರ್ಶನ ಮಾಡಲಾಗಿದೆ. ಇಷ್ಟು ವರ್ಷಗಳ ಬಳಿಕ ಪ್ರದರ್ಶನ ಕಂಡ ಮೊದಲ ಸಿನಿಮಾ ಎಂಬ ಕೀರ್ತಿ 'ಗ್ರೌಂಡ್ ಜೀರೋ' ಚಿತ್ರಕ್ಕೆ ಸಿಕ್ಕಿದೆ. ಈ ಸಿನಿಮಾದಲ್ಲಿ ಇಮ್ರಾನ್ ಹಷ್ಮಿ ಅವರು ನಟಿಸಿದ್ದಾರೆ.



# ಗಂಡಸರು ಮುಟ್ಟಾದ್ರೆ ನ್ಯೂಕ್ಲಿಯರ್ ವಾರ್ ಆಗುತ್ತೆ

ಕೆಲವು ಪುರುಷರು ಋತುಚಕ್ರವನ್ನು ನೋಡುವ ರೀತಿಯನ್ನು ಉಲ್ಲೇಖಿಸುತ್ತಾ ಮಾತನಾಡಿದ ಜಾನ್ವಿ, ಅವರ ಆಗ ಕೆಳಮುಖ ದೃಷ್ಟಿಕೋನ ನೋಟ ಮತ್ತು ಸ್ವರ ಕೆಟ್ಟದಾಗಿರುತ್ತದೆ. ಏಕೆಂದರೆ ಪುರುಷರು ಈ ನೋವು ಮತ್ತು ಮನಸ್ಥಿತಿಯ ಬದಲಾವಣೆಗಳನ್ನು ಒಂದು ನಿಮಿಷವೂ ಸಹ ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ನಾನು ಪಕ್ಕಾ ಹೇಳುತ್ತೇನೆ ಎಂದಿದ್ದಾರೆ. ಪುರುಷರಿಗೆ ಮುಟ್ಟು ಬಂದರೆ ಯಾವ ರೀತಿಯ ಪರಮಾಣು ಯುದ್ಧವೇ ನಡೆಯುತ್ತದೆ ಎಂದು ಹೇಳಿದರು. ಜಾನ್ವಿ ಅವರ ಕಾಮೆಂಟ್ ಗಳಿಗೆ ಸಾಮಾಜಿಕ ಮಾಧ್ಯಮದಲ್ಲಿ ಮಹಿಳೆಯರಿಂದ ಸಾಕಷ್ಟು ಬೆಂಬಲ ವ್ಯಕ್ತವಾಯಿತು. ಜಾನ್ವಿ ಕಪೂರ್ 2024 ರಲ್ಲಿ ಮೂರು ಮೂವಿಯಲ್ಲಿ ಕಾಣಿಸಿಕೊಂಡರು. ಮಿಸ್ಟರ್ ಮಿಸೆಸ್ ಮಾಹಿ, ಉಲಾಜ್ ಮತ್ತು ದೇವರ: ಭಾಗ 1. ನಟಿ ಪ್ರಸ್ತುತ ತಮ್ಮ ಮುಂದಿನ ಚಿತ್ರ, ಸನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ ಚಿತ್ರೀಕರಣದಲ್ಲಿ ನಿರತರಾಗಿದ್ದಾರೆ. 2025 ರಲ್ಲಿ ಬಿಡುಗಡೆಯಾಗಲಿರುವ ಪರಮ ಸುಂದರಿ ಎಂಬ ಚಿತ್ರವನ್ನು ಸಹ ಅವರು ಹೊಂದಿದ್ದಾರೆ. ಇದರ ನಂತರ, ಜಾನ್ವಿ ಪೆದ್ದಿಯೊಂದಿಗೆ ತೆಲುಗು ಚಿತ್ರರಂಗಕ್ಕೆ ಮರಳಲಿದ್ದಾರೆ.



# ಇಬ್ರು ಹುಡ್ಗೀರು ಜೀವನ ಸರಿ ಮಾಡಿದ್ದಾರೆ

**ದೇಶಸೇವೆ ಮಾಡೋವ್ರು ಬಂದ್ರು**

ನನ್ನ ಮಗಳ ಜೀವನ ಸರಿ ಆಗಲಿ ಎಂದು ಇಬ್ರು ಹುಡುಗಿಯರು ಮುಂದೆ ಬಂದು ನಿಜ ಸ್ಥಿತಿ ಅರಿವು ಮಾಡಿಕೊಟ್ಟರು. ಅವರಿಗೆ ಧನ್ಯವಾದ ಹೇಳುತ್ತೇನೆ ಎಂದು ವೈಷ್ಣವಿ ಗೌಡ ಅವರ ತಾಯಿ ಭಾನು ರವಿಕುಮಾರ್ ಹೇಳಿದರು. ಈ ಹಿಂದೆ ಮಗಳ ನಿಶ್ಚಯವಾಗಿ ಮುರಿದು ಬಿದ್ದ ಕುರಿತು ಮಾತನಾಡಿದ ಅವರು, ವೈಷ್ಣವಿ ತನ್ನದಲ್ಲದ ತಪ್ಪಿಗೆ ಏನೇನೋ ಅನುಭವಿಸಬೇಕಾಯ್ತು. ಆ ಹುಡುಗನ ಬಗ್ಗೆ ಆ ಸಮಯದಲ್ಲಿ ಮಾತನಾಡಿ, ನಮಗೆ ಉಪಕಾರ ಮಾಡಿರುವ ಇಬ್ಬರು ಹುಡುಗಿಯರಿಗೆ ಧನ್ಯವಾದ ಹೇಳುತ್ತೇನೆ. ಏನೂ ಅನ್ನೋದನ್ನ ಗೊತ್ತು ಮಾಡಿದ್ದೀರಿ. ಆ ಹುಡುಗಿಯರು ಯಾರೂ ಅಂತ ಗೊತ್ತಿಲ್ಲ. ವೈಷ್ಣವಿ ಕಷ್ಟದ ಸಮಯದಲ್ಲಿ ನೀವೆಲ್ಲಾ ಅವಳ ಜೊತೆ ಇದ್ರಿ. ನಿಮಗೂ ಧನ್ಯವಾದ ಎಂದು ಕೃತಜ್ಞತೆ ಸಲ್ಲಿಸಿದರು. ಈಗ ನಿಶ್ಚಯವಾಗಿರುವ ಮಗಳ ಮದುವೆ ಬಗ್ಗೆ ಪ್ರತಿಕ್ರಿಯಿಸಿ, ಉತ್ತರದಿಂದ ದಕ್ಷಿಣದ ಸಂಬಂಧ ಇದು. ದೇವರು ಎಲ್ಲಾ ನಿಶ್ಚಯ ಮಾಡಿರುತ್ತಾನೆ. ವೈಷ್ಣವಿಗೆ ಈ ಗಂಡು ನಾವು ನೋಡಿರೋದು. ಮ್ಯಾಟ್ರಿಮೋನಿಯಲ್ಲಿ ನೋಡಿ ನಿಶ್ಚಯ ಮಾಡಿರುವುದು. ಅವರಿಬ್ಬರಿಗೂ ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳಲು ಸಮಯ ಕೊಟ್ಟದ್ದೆವು ಎಂದು ತಿಳಿಸಿದರು.

**ಮಿಲಿಟರಿ ಹುಡುಗ ಬೇಕು:** ಮಿಲಿಟರಿಯಲ್ಲಿ ಕೆಲಸ ಮಾಡೋ ಹುಡುಗ ಬೇಕು ಎಂದು ನಮ್ಮ ತಂದೆಗೆ ಆಸೆ ಇತ್ತು. ನಮ್ಮ ಫ್ಯಾಮಿಲಿಯಲ್ಲಿ ಹಿಂದೆ ಯಾರೂ ಇರಲಿಲ್ಲ. ಈಗ ದೇಶಸೇವೆ ಮಾಡೋವ್ರು ಬಂದ್ರು ಅನ್ನೋದು ಖುಷಿ ಇದೆ. ಕೆಲವರು ಮಗಳ ಬಗ್ಗೆ ಏನೇನೋ ಮಾತಾಡ್ತಾರೆ. ಟ್ರೋಲ್ ಮಾಡುತ್ತಾರೆ. ನಿಜಾಂಶ ಏನೂ ಎಂದು ಸರಿಯಾಗಿ ತಿಳಿದುಕೊಂಡಿರಬೇಕಾಗುತ್ತದೆ ಎಂದರು 2017ರಲ್ಲಿ ಎಲ್‌ಎಲ್‌ಬಿ ಓದಿ ವಕೀಲೆ ಆಗಿದ್ದೀನಿ. ಜೊತೆಗೆ ಸೈಕಾಲಜಿಯಲ್ಲಿ ಎಂಎಸ್‌ಸಿ ಓದಿದ್ದೇನೆ. ನನ್ನಂತೆ ನನ್ನ ಮಗಳಿಗೂ ಮದುವೆ ಬಳಿಕ ಪ್ರೋತ್ಸಾಹ ಕೊಡುವ ಗಂಡ ಸಿಕ್ಕಿದ್ದಾರೆ ಎಂದು ಖುಷಿ ಇದೆ. ಆಗೋದೆಲ್ಲ ಒಳ್ಳೆಯದಕ್ಕೆ ಅನ್ನೋದಕ್ಕೆ ಇದುವೇ ಸಾಕ್ಷಿ ಎಂದು ಸಂತಸ ವ್ಯಕ್ತಪಡಿಸಿದರು.

## ಬಟ್ಲರ್ ಅಮೋಘ ಅರ್ಧಶತಕ; ಅಗ್ರಸ್ಥಾನಕ್ಕೇರಿದ ಗುಜರಾತ್



ಜಾಸ್ ಬಟ್ಲರ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಆತಿಥೇಯ ಗುಜರಾತ್ ಟೈಟನ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ 7 ವಿಕೆಟ್ ಅಂತರದ ಜಯ ಸಾಧಿಸಿತು. ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಟಾಸ್ ಸೋತರೂ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಡೆಲ್ಲಿ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 203 ರನ್ ಕಲೆಹಾಕಿತ್ತು. ಗುಜರಾತ್ ಪಡೆ ಈ ಗುರಿಯನ್ನು ಕೇವಲ 3 ವಿಕೆಟ್ ಕಳೆದುಕೊಂಡು ಇನ್ನೂ 4 ಎಸೆತಗಳು ಬಾಕಿ ಇರುವಂತೆಯೇ ತಲುಪಿತು.

ಗುಜರಾತ್ ಇನಿಂಗ್ಸ್‌ಗೆ ಸುದರ್ಶನ್, ಬಟ್ಲರ್, ರುದರ್‌ಫೋರ್ಡ್ ಬಲ

ಸವಾಲಿನ ಗುರಿ ಬೆನ್ನತ್ತಿದ ಗುಜರಾತ್‌ಗೆ ಉತ್ತಮ ಆರಂಭ ಸಿಗಲಿಲ್ಲ. ಸಾಯಿ ಸುದರ್ಶನ್ ಜೊತೆ ಇನಿಂಗ್ಸ್ ಆರಂಭಿಸಿದ ನಾಯಕ ಶುಭಮನ್ ಗಿಲ್ (7 ರನ್), ತಂಡದ ಮೊತ್ತ 14 ರನ್ ಆಗಿದ್ದಾಗಲೇ ರನೌಟ್ ಆದರು.

ಈ ಹಂತದಲ್ಲಿ, ಸಾಯಿ ಹಾಗೂ ಬಟ್ಲರ್ ಚೇತರಿಕೆ ನೀಡಿದರು. ಇವರಿಬ್ಬರು, 2ನೇ ವಿಕೆಟ್ ಪಾಲುದಾರಿಕೆಯಲ್ಲಿ 6 ರನ್ ಗಳಿಸುವ ಮೂಲಕ ಚೇಸಿಂಗ್‌ಗೆ ಬಲ ತುಂಬಿದರು. 21 ಎಸೆತಗಳಲ್ಲಿ 36 ರನ್ ಗಳಿಸಿದ್ದ ಸಾಯಿ ಔಟಾದ ನಂತರ ಬಂದ ಶೆರ್ಫೇನ್ ರುದರ್‌ಫೋರ್ಡ್ ಶತಕದ ಜೊತೆಯಾಟವಾಡುವ ಮೂಲಕ ಗೆಲುವಿಗೆ ಕಾಣಿಕೆ ನೀಡಿದರು. 34 ಎಸೆತಗಳಲ್ಲಿ 43 ರನ್ ಗಳಿಸಿದ ರುದರ್‌ಫೋರ್ಡ್, ಬಟ್ಲರ್‌ಗೆ ಉತ್ತಮ ಸಾಥ್ ನೀಡಿದರು. ಅವರು ತಂಡದ ಗೆಲುವಿಗೆ ಇನ್ನು 11 ರನ್ ಬೇಕಿದ್ದಾಗ ಔಟಾದರು. 54 ಎಸೆತಗಳಲ್ಲಿ 97 ರನ್ ಬಾರಿಸಿದ ಬಟ್ಲರ್ ಅಜೇಯವಾಗಿ ಉಳಿದರೂ ಐಪಿಎಲ್‌ನಲ್ಲಿ ದಾಖಲೆಯ 8ನೇ ಶತಕ ಸಿಡಿಸುವ ಅವಕಾಶ ತಪ್ಪಿಸಿಕೊಂಡರು. ರಾಹುಲ್ ತೆವಾಟಿಯ (11 ರನ್), ಕೊನೇ ಓವರ್‌ನ ಮೊದಲೆರಡು ಎಸೆತಗಳಲ್ಲಿ ಸಿಕ್ಸರ್ ಹಾಗೂ ಬೌಂಡರಿ ಬಾರಿಸಿದರು. ಇದರಿಂದಾಗಿ ಬಟ್ಲರ್‌ಗೆ ಶತಕದ ಅವಕಾಶ ತಪ್ಪಿದರೂ, ಗುಜರಾತ್‌ಗೆ ಜಯ ಒಲಿಯಿತು. ಡೆಲ್ಲಿ ತಂಡದ ಮುಕೇಶ್ ಕುಮಾರ್ ಹಾಗೂ ಕುಲದೀಪ್ ಯಾದವ್ ಒಂದೊಂದು ವಿಕೆಟ್ ಪಡೆದರು.

# ಕೇವಲ 2 ರನ್‌ಗಳಿಂದ ಪಂತ್ ಪಡೆಗೆ ಗೆಲುವು

ಲಕ್ನೋ ಸೂಪರ್ ಜೈಂಟ್ಸ್ ತಂಡದ ಸಾಧಾರಣ ಮೊತ್ತದ ಟಾರ್ಗೆಟ್ ಅನ್ನು ರಾಜಸ್ಥಾನ್ ರಾಯಲ್ಸ್ ಚೇಸ್ ಮಾಡಲಾಗದೇ ಸೋಲೋಪ್ಪಿಕೊಂಡಿದೆ. ಪಂದ್ಯವನ್ನು ಕೊನೆವರೆಗೆ ಎಳೆದುಕೊಂಡು ಬಂದ ರಾಜಸ್ಥಾನ್ ಕೇವಲ 2 ರನ್‌ಗಳಿಂದ ಸೋತಿದೆ.

ಸವಾಯಿ ಮಾನ್ಸಿಂಗ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಲಕ್ನೋ ಕ್ಯಾಪ್ಟನ್ ರಿಷಭ್ ಪಂತ್ ಟಾಸ್ ಗೆದ್ದು, ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು ಆರಂಭದಲ್ಲೇ ಆಘಾತಕ್ಕೆ ಒಳಗಾದರು. ಏಕೆಂದರೆ ತಂಡದ ಪರ ಆರಂಭಿಕರಾದ ಮಿಚೆಲ್ ಮಾರ್ಷ್ ಕೇವಲ 4 ರನ್‌ಗೆ ಕ್ಯಾಚ್ ನೀಡಿದರು. ಆದರೆ ಮಾರ್ಕ್ರಮ್ ಉತ್ತಮ ಬ್ಯಾಟಿಂಗ್‌ನಿಂದ 45 ಎಸೆತದಲ್ಲಿ 66 ರನ್ ಗಳಿಸಿ ರಿಯಾನ್ ಪರಾಗ್‌ಗೆ ಕ್ಯಾಚ್ ಕೊಟ್ಟರು.

ನಿಕೋಲಸ್ ಪೂರನ್ 11, ರಿಷಭ್ ಪಂತ್ ಕೇವಲ 3, ಆಯುಷ್ ಬದೋನಿಯ ಅತ್ಯುತ್ತಮ ಬ್ಯಾಟಿಂಗ್‌ನಿಂದ ಅರ್ಧಶತಕ ಬಾರಿಸಿದರು. ಅಬ್ದುಲ್ ಸಮದ್ 10 ಎಸೆತದಲ್ಲಿ 4 ಸಿಕ್ಸರ್‌ಗಳಿಂದ 30 ರನ್‌ಗಳ ಕಾಣಿಕೆ ನೀಡಿದ್ದರಿಂದ ಲಕ್ನೋ ಟೀಮ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 181 ರನ್‌ಗಳ ಟಾರ್ಗೆಟ್ ನೀಡಿತ್ತು.



ಬ್ಯಾಟಿಂಗ್ ಇನ್ನಿಂಗ್ಸ್ ಆರಂಭಿಸಿದ ರಾಜಸ್ಥಾನ್ ರಾಯಲ್ಸ್ ಭದ್ರ ಅಡಿಪಾಯ ಹಾಕಿತು. 14 ವರ್ಷ ಯುವ ಪ್ರತಿಭೆ ವೈಭವ್ ಸೂರ್ಯವಂಶಿ ಹಾಗೂ ಜೈಸ್ವಾಲ್ ಈ ಇಬ್ಬರ ಭರ್ಜರಿ ಬ್ಯಾಟಿಂಗ್ ಮೂಡಿ ಬಂದಿತು. 14 ವರ್ಷದ ವೈಭವ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿ 20 ಎಸೆತದಲ್ಲಿ 2 ಬೌಂಡರಿ, 3 ಭರ್ಜರಿ ಸಿಕ್ಸರ್‌ಗಳಿಂದ 34 ರನ್ ಚಚ್ಚಿದರು. ವೈಭವ್ ಸೂರ್ಯವಂಶಿ ಚೊಚ್ಚಲ ಪಂದ್ಯದಲ್ಲೇ ನಿರರ್ಗಳವಾಗಿ ಬ್ಯಾಟ್ ಬೀಸಿದರು.

ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ಮತ್ತೊಂದು ಹಾಫ್ ಸೆಂಚುರಿ ಬಾರಿಸಿ ಸಂಭ್ರಮಿಸಿದರು. ಪಂದ್ಯದಲ್ಲಿ 52 ಎಸೆತಗಳನ್ನ ಎದುರಿಸಿದ ಜೈಸ್ವಾಲ್ 5 ಬೌಂಡರಿ, ಭರ್ಜರಿಯಾಗಿ 4 ಸಿಕ್ಸ್‌ಗಳಿಂದ 74 ರನ್‌ಗಳ ಕಾಣಿಕೆ ನೀಡಿದೆ. ಆದರೆ ಆವೇಶ್ ಖಾನ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿ ಹೊರನಡೆದರು.



ಇನ್ನು ನಾಯಕ ರಿಯಾನ್ ಪರಾಗ್ ಕೂಡ ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಹೀಗಾಗಿ 26 ಬಾಲ್‌ನಲ್ಲಿ 3 ಬೌಂಡರಿ 2 ಸಿಕ್ಸರ್‌ನಿಂದ 39 ರನ್ ಗಳಿಸಿದರು. ಶಿಮ್ರಾನ್ ಹೆಟ್ಮೆಯರ್ 12ಕ್ಕೆ ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ಧ್ರುವ್ ಜುರೆಲ್ 6 ಹಾಗೂ ಶುಭಂ ದುಬೆ 3 ಈ ಇಬ್ಬರು ತಂಡವನ್ನು ದಡ ಸೇರಿಸುವಲ್ಲಿ ವಿಫಲವಾದರು. ಹೀಗಾಗಿ ಮತ್ತೊಂದು ರಣರೋಚಕ ಪಂದ್ಯದಲ್ಲಿ ರಾಜಸ್ಥಾನ್ ಸೋಲಿಗೆ ಶರಣಾಯಿತು. ರಾಜಸ್ಥಾನ್ 5 ವಿಕೆಟ್‌ಗೆ 178 ರನ್ ಗಳಿಸಿ ಕೇವಲ 2 ರನ್‌ಗಳಿಂದ ಲಕ್ನೋ ತಂಡದ ವಿರುದ್ಧ ತಲೆ ಬಾಗಿತು.


## ಮೊದಲ ಎಸೆತದಲ್ಲೇ ಅದ್ಭುತ ಸಿಕ್ಸರ್

**ವೈಭವ್ ಸೂರ್ಯವಂಶಿ ಕೇವಲ 14 ವರ್ಷಕ್ಕೆ ಮಿಲಿಯನ್ ಡಾಲರ್ ಟೂರ್ನಿ ಐಪಿಎಲ್‌ನಲ್ಲಿ ಆಡುವ ಅವಕಾಶ ಪಡೆದಿರುವ 9ನೇ ತರಗತಿ ಓದುತ್ತಿರುವ ಹುಡುಗ ಕ್ರಿಕೆಟ್ ಜಗತ್ತಿನಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಈ ಮೊದಲು ಐಪಿಎಲ್ ಹರಾಜಿನಲ್ಲಿ ಹರಾಜಾದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ವೈಭವ್, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಆಡುವ ಹನ್ನೊಂದರ ಬಳಗದಲ್ಲಿ ಅವಕಾಶ ಗಿಟ್ಟಿಸಿಕೊಳ್ಳುವ ಮೂಲಕ ಕೇವಲ 14 ವರ್ಷ ಮತ್ತು 27 ದಿನಗಳ ವಯಸ್ಸಿನಲ್ಲಿ ಐಪಿಎಲ್‌ಗೆ ಪಾದಾರ್ಪಣೆ ಮಾಡುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಇದೀಗ ಯಶಸ್ವಿ ಜೈಸ್ವಾಲ್ ಜೊತೆ ಆರಂಭಿಕನಾಗಿ ಕಣಕ್ಕಿಳಿದಿರುವ ವೈಭವ್ ತಮ್ಮ ಐಪಿಎಲ್ ವೃತ್ತಿಜೀವನದ ಮೊದಲ ಎಸೆತದಲ್ಲೇ ಅದ್ಭುತ ಸಿಕ್ಸರ್ ಬಾರಿಸುವ ಮೂಲಕ ಇಡೀ ಜಗತ್ತನ್ನೇ ಅಚ್ಚರಿಗೊಳಿಸಿದ್ದಾರೆ.**

## ಆರ್‌ಸಿಬಿ ತಂಡಕ್ಕೆ ಮೇಜರ್ ಸರ್ಜರಿ: ಕೆರಿಬಿಯನ್ ದೈತ್ಯನಿಗೆ ಅವಕಾಶ ಸಾಧ್ಯತೆ

ಐಪಿಎಲ್ ಸೀಸನ್-18ರ ಮೊದಲಾರ್ಧ ಮುಗಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇದೀಗ ದ್ವಿತೀಯಾರ್ಧಕ್ಕಾಗಿ ಸಜ್ಜಾಗುತ್ತಿದೆ. ಏಪ್ರಿಲ್ 20 ರಂದು ಚಂಡೀಗಢ್‌ನಲ್ಲಿ ನಡೆಯಲಿರುವ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದ ಮೂಲಕ ಆರ್‌ಸಿಬಿ ತನ್ನ ದ್ವಿತೀಯ ಸುತ್ತನ್ನು ಆರಂಭಿಸಲಿದೆ. ಆದರೆ ಈ ಪಂದ್ಯಕ್ಕೂ ಮುನ್ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಒಂದು ಮಹತ್ವದ ಬದಲಾವಣೆ ಕಂಡು ಬರುವ ಸಾಧ್ಯತೆಯಿದೆ.

ಏಕೆಂದರೆ ಕಳೆದ 7 ಪಂದ್ಯಗಳಲ್ಲಿ ಆರ್‌ಸಿಬಿ ಪರ ಕಣಕ್ಕಿಳಿದಿರುವ ಲಿಯಾಮ್ ಲಿವಿಂಗ್‌ಸ್ಟೋನ್ ಕಡೆಯಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ಅಲ್ಲದೆ ಕಳೆದ 6 ಇನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಅವರು ಕಲೆಹಾಕಿರುವುದು ಕೇವಲ 87 ರನ್‌ಗಳು ಮಾತ್ರ. ಹೀಗಾಗಿ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ವೆಸ್ಟ್ ಇಂಡೀಸ್ ದೈತ್ಯ ರೊಮೊರಿಯೊ ಶೆಫರ್ಡ್‌ಗೆ ಚಾನ್ಸ್ ನೀಡಬಹುದು. ಅದರಲ್ಲೂ ಮುಲ್ಲನ್‌ಪುರ್‌ನ ಪಿಚ್ ಬ್ಯಾಟರ್‌ಗಳಿಗೆ ಸಹಕಾರಿ. ಹೀಗಾಗಿ ಶೆಫರ್ಡ್ ಅವರನ್ನು ಕಣಕ್ಕಿಳಿಸಿದರೆ ಬಿಗ್ ಹಿಟ್ಟರ್ ಆಯ್ಕೆಯೊಂದಿಗೆ ಆರ್‌ಸಿಬಿ ಹೆಚ್ಚುವರಿ ವೇಗಿಯ ನೆರವು ಪಡೆದುಕೊಳ್ಳಬಹುದು. ಹೀಗಾಗಿ ಲಿವಿಂಗ್‌ಸ್ಟೋನ್ ಬದಲಿಗೆ ರೊಮೊರಿಯೊಗೆ ಚಾನ್ಸ್ ನೀಡುವ ಸಾಧ್ಯತೆಯಿದೆ.



ಇನ್ನು ಈ ಪಂದ್ಯದಲ್ಲೂ ಆರ್‌ಸಿಬಿ ತಂಡದ ಆರಂಭಿಕರಾಗಿ ಫಿಲ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿ ಮುಂದುವರೆಯಲಿದ್ದಾರೆ. ಮೂರನೇ ಕ್ರಮಾಂಕದಲ್ಲಿ ದೇವದತ್ ಪಡಿಕ್ಕಲ್ ಕಣಕ್ಕಿಳಿಯಲಿದ್ದು, ನಾಲ್ಕನೇ ಕ್ರಮಾಂಕದಲ್ಲಿ ರಜತ್ ಪಾಟಿದಾರ್ ಬ್ಯಾಟ್ ಬೀಸಲಿದ್ದಾರೆ.ಐದನೇ ಕ್ರಮಾಂಕದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ ಬದಲಿಗೆ ರೊಮೊರಿಯೊ ಶೆಫರ್ಡ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ. ಆರನೇ ಕ್ರಮಾಂಕದಲ್ಲಿ ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾಗೆ ಕಣಕ್ಕಿಳಿಯಲಿದ್ದಾರೆ. ಏಳು ಮತ್ತು ಎಂಟನೇ ಕ್ರಮಾಂಕಗಳಲ್ಲಿ ಟಿಮ್ ಡೇವಿಡ್ ಹಾಗೂ ಕೃನಾಲ್ ಪಾಂಡ್ಯ ಕಾಣಿಸಿಕೊಳ್ಳಲಿದ್ದಾರೆ.

## ಐಪಿಎಲ್‌ನಲ್ಲಿ ವಿಶೇಷ ದ್ವಿಶತಕ ಪೂರ್ಣಗೊಳಿಸಿದ ಕೆಎಲ್ ರಾಹುಲ್

2025 ರ ಐಪಿಎಲ್‌ನಲ್ಲಿ ಹೊಸ ತಂಡ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡುತ್ತಿರುವ ಕನ್ನಡಿಗ ಕೆಎಲ್ ರಾಹುಲ್ ಈ ಸೀಸನ್‌ನಲ್ಲಿ ಇದುವರೆಗೆ ಅಮೋಘ ಪ್ರದರ್ಶನ ನೀಡುತ್ತಿದ್ದಾರೆ. ಪ್ರತಿ ಪಂದ್ಯದಲ್ಲೂ ಮ್ಯಾಚ್ ವಿನ್ನಿಂಗ್ ಪ್ರದರ್ಶನ ನೀಡುತ್ತಿರುವ ರಾಹುಲ್, ಇದೀಗ ಗುಜರಾತ್ ಟೈಟನ್ಸ್ ತಂಡದ ವಿರುದ್ಧ ನಡೆಯುತ್ತಿರುವ ಪಂದ್ಯದಲ್ಲಿ ಏಕೈಕ ಸಿಕ್ಸರ್ ಬಾರಿಸುವ ಮೂಲಕ ದಾಖಲೆ ಕೂಡ ನಿರ್ಮಿಸಿದ್ದಾರೆ.

ಗುಜರಾತ್ ವೇಗಿ ಮೊಹಮದ್ ಸಿರಾಜ್ ಎಸೆತದಲ್ಲಿ ಭರ್ಜರಿ ಸಿಕ್ಸರ್ ಬಾರಿಸುವ ಮೂಲಕ ಐಪಿಎಲ್‌ನಲ್ಲಿ 200 ಸಿಕ್ಸರ್‌ಗಳನ್ನು ಪೂರ್ಣಗೊಳಿಸಿದರು. ಐಪಿಎಲ್‌ನಲ್ಲಿ ಈ ಸಾಧನೆ ಮಾಡಿದ ಆರನೇ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ರಾಹುಲ್ ಪಾತ್ರರಾಗಿದ್ದಾರೆ. ರಾಹುಲ್‌ಗಿಂತ ಮೊದಲು ರೋಹಿತ್ ಶರ್ಮಾ, ಎಂಎಸ್ ಧೋನಿ, ವಿರಾಟ್ ಕೊಹ್ಲಿ, ಸುರೇಶ್ ರೈನಾ ಮತ್ತು ಯುವರಾಜ್ ಸಿಂಗ್ ಈ ದಾಖಲೆಯನ್ನು ಮಾಡಿದ್ದಾರೆ.

ಐಪಿಎಲ್‌ನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ದಾಖಲೆ ವೆಸ್ಟ್ ಇಂಡೀಸ್‌ನ ಮಾಜಿ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ ಹೆಸರಿನಲ್ಲಿದೆ. ಅವರು ಕೋಲ್ಕತ್ತಾ ನೈಟ್ ರೈಡರ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ಪರ 142 ಪಂದ್ಯಗಳನ್ನು ಆಡಿದ್ದು ಒಟ್ಟು 357 ಸಿಕ್ಸರ್‌ಗಳನ್ನು ಬಾರಿಸಿದ್ದಾರೆ.



**ಆರನೇ ಭಾರತೀಯ ಆಟಗಾರ**

ಗೇಲ್ ನಂತರ, ರೋಹಿತ್ ಶರ್ಮಾ (286), ವಿರಾಟ್ ಕೊಹ್ಲಿ (282), ಎಂಎಸ್ ಧೋನಿ (260), ಎಬಿ ಡಿವಿಲಿಯರ್ಸ್ (251), ಡೇವಿಡ್ ವಾರ್ನರ್ (236), ಕೀರನ್ ಪೊಲಾರ್ಡ್ (223), ಸಂಜು ಸ್ಯಾಮ್ಸನ್ (216), ಆಂಡ್ರೆ ರಸೆಲ್ (212) ಮತ್ತು ಸುರೇಶ್ ರೈನಾ (213) ಅವರ ಹೆಸರುಗಳು ಪಟ್ಟಿಯಲ್ಲಿವೆ.

ಐಪಿಎಲ್ 2025 ರ ಪ್ರಸ್ತುತ ಪಂದ್ಯದಲ್ಲಿ ಕೆಎಲ್ ರಾಹುಲ್ 79 ರನ್ ಗಳಿಸಿದ್ದರೆ, ಐಪಿಎಲ್‌ನಲ್ಲಿ 5000 ರನ್‌ಗಳನ್ನು ಪೂರ್ಣಗೊಳಿಸುತ್ತಿದ್ದರು. ಇದು ಸಂಭವಿಸಿದ್ದರೆ, ಅವರು 5000 ರನ್ ಗಳಿಸಿದ ಅತ್ಯಂತ ವೇಗದ ಬ್ಯಾಟ್ಸ್‌ಮನ್ ಆಗುತ್ತಿದ್ದರು. ಆದರೆ ಕೇವಲ 28 ರನ್‌ಗಳಿಗೆ ಇನ್ನಿಂಗ್ಸ್ ಮುಗಿಸಿದ ರಾಹುಲ್ ಈ ದಾಖಲೆಯಿಂದ ವಂಚಿತರಾದರು.

ಇನ್ನು ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಕೆಎಲ್ ರಾಹುಲ್ ತಮ್ಮ ಇನ್ನಿಂಗ್ಸ್‌ನಲ್ಲಿ 14 ಎಸೆತಗಳನ್ನು ಎದುರಿಸಿ 4 ಬೌಂಡರಿ ಹಾಗೂ 1 ಭರ್ಜರಿ ಸಿಕ್ಸರ್ ಮೂಲಕ 28 ರನ್ ಕಲೆಹಾಕಿದರು. ಅಂತಿಮವಾಗಿ ಕನ್ನಡಿಗ ಪ್ರಸಿದ್ಧ್ ಕೃಷ್ಣ ಎಸೆತದಲ್ಲಿ ಎಲ್‌ಬಿ ಬಲೆಗೆ ಬಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966